THE BOOK WAS DRENCHED

TEXT PROBLEM WITHIN THE BOOK ONLY

UNIVERSAL LIBRARY
OU_198952
UNIVERSAL LIBRARY

ಸತೀಹಿತೈಷಿಣೀ ಗ್ರಂಥಮಾಲಾ

# RAMANANDA

# ರಮಾನಂದ.

ನಂಜನಗೂಡು

ಸತೀಹಿತೈಷಿಣೀ ಮಾತೃಮಂದಿರದಲ್ಲಿ
ಪ್ರಕಟಿಸಲ್ಪಟ್ಟುದು.

[ ದ್ವಿತೀಯ ಮುದ್ರಣ. ]

1917

ಇದರ ಸರ್ವಸ್ವಾತಂತ್ರ್ಯವೂ ಪತ್ರಕರ್ತ್ರಿಯದಾಗಿರುವುದು.

ಕ್ರಯ ೧೦ ಆಣೆ.

Checked 1965
Printed at The SHRI KRISHNA PRESS Hubli,

by B. N. Mutalik Desai

AND PUBLISHED BY

**Shrimati Tirumalamba**

at Matramandirum

NANJANGUD.

Checked 1969

## ಇದರಲ್ಲಿ ಬರತಕ್ಕ ಪಾತ್ರಗಳ ವಿವರ.

| | | |
|---|---|---|
| 1. | ಶ್ರೀಮಂತ | ಸ್ವರ್ಣನಗರಿಯ ರಾಜ. |
| 2. | ಕ್ಷೇಮದರ್ಶಿ | ಶ್ರೀಮಂತನ ಮಂತ್ರಿ ಮತ್ತು ರಮಾನಂದನ ಕ್ಷೇಮಚಿಂತಕ. |
| 3. | ರವಿವರ್ಮ | ಶ್ರೀಮಂತನ ಜೇಷ್ಠ ಪುತ್ರ. |
| 4. | ರಮಾನಂದ | ಶ್ರೀಮಂತನ ದ್ವಿತೀಯ ಪುತ್ರ; ಮತ್ತು ಕಥಾನಾಯಕ. |
| 5. | ನಳ | ರವಿವರ್ಮನ ಸಹಚರರು ಮತ್ತು ರಮಾನಂದನ ಪ್ರತಿಕಕ್ಷಿಗಳು. |
| 6. | ಕಳಿಂಗ | |
| 7. | ಸುಮುಖ | ರಮಾನಂದನ ಸಹಾಧ್ಯಾಯಿಗಳು. |
| 8. | ಸೌಮ್ಯ | |
| 9. | ಯುವಾನ್ | |
| 10. | ವಿದ್ಯಾವಾಗೀಶ | ರವಿವರ್ಮ-ರಮಾನಂದರ ವಿದ್ಯಾಗುರು. |
| 11. | ಸತ್ಯಸೇನ | ವಿದ್ಯಾವಾಗೀಶನ ಸೇವಕ |
| 12. | ವಸುಮತೀದೇವಿ | ರವಿವರ್ಮ-ರಮಾನಂದರ ತಾಯಿ. |
| | ಇತ್ಯಾದಿ. | ಇತ್ಯಾದಿ. |

ವಿ. ಸೂ.— ಈ ರಮಾನಂದ ನಾಟಕವು ಕೇವಲ ವಿದ್ಯಾರ್ಥಿಗಳ ತಿಳಿವಿಗೆ ತರಲಿಕ್ಕೆಂದು ಮಾತ್ರವೇ ಬರೆಯಲ್ಪಟ್ಟುದಲ್ಲದೆ, ನಾಟಕಾಭಿನಯಕ್ಕೆಂದಲ್ಲವಾದುದರಿಂದ ನಾಟಕಾಭಿನಯದಲ್ಲಿ ಅವಶ್ಯವಾಗಿ ಬೇಕಾಗುವ ಸ್ಥಾನಗಳ ಮತ್ತು ವಿಷಯ ವಿಚಾರಗಳ ವಿವರಣೆಯನ್ನು ಇಲ್ಲಿ ಕೊಡಲಿಲ್ಲ. ನಾಟಕಾಭಿನಯಕ್ಕನುಕೂಲಿಸುವ ಪುಸ್ತಕಗಳು ಮುಂದೆ ಕಾಲಾನುಕ್ರಮದಿಂದ ಹೊರಬೀಳುವವು. ಆಕ್ಷೇಪಿಸಬಾರದು; ಕ್ಷಮೆಯಿರಲಿ.

# ಉಪೋದ್ಘಾತ.

॥ ಶ್ರೀರಾಮಪ್ರಸನ್ನ ॥

ಮಹನೀಯರಾದ ದೇಶಬಾಂಧವರೇ !

ಹಲವು ಮಹಾಕಾವ್ಯ, ನಾಟಕ, ಚಂಪೂಗ್ರಂಥಗಳನ್ನು ಅವಲೋಕಿಸಿ, ನಲಿನಲಿದಾಡುತ್ತಿರುವ ರಸಿಕಸಮಾಜದಲ್ಲಿ, ಅಲ್ಪಮತಿಯ ಆತ್ಮಕೃತಿಬದ್ಧವಾದ ಈ ರಮಾನಂದಾಭಿಧಾನದ ನೀರಸಪ್ರಬಂಧರಚನೆಯು ಹಾಸ್ಯಾಸ್ಪದವಾಗಿಯೇ ಪರಿಣಮಿಸಬಹುದಲ್ಲವೆ? ಸಹಜ ! ಏಕೆಂದರೆ,--,

ನಾಟಕಕ್ಕೆ ಮುಖ್ಯವಾಗಿ ಅಲಂಕಾರಪ್ರಾಯಗಳಾಗಿರುವ ಶೃಂಗಾರ, ವೀರ, ಅದ್ಭುತ, ಹಾಸ್ಯರಸಗಳೂ, ತಕ್ಕಂತೆ ಹಾವ, ಭಾವ, ವಿಲಾಸ ವಿಭ್ರಮಾದಿ ವರ್ಣನೆಗಳೂ, ವಿರಹ ಸಂತಾಪಾದಿ ವಿಷಯ ವಿಕಾರಗಳೂ ಇವಾವುದನ್ನೂ ತೋರದೆ, ಕೇವಲ ಶಾಂತಿರಸಪ್ರಧಾನವಾದ ರಮಾನಂದವನ್ನು ನೋಡಿ ರಸಿಕರ ಚಿತ್ತವು ಆಕ್ಷೇಪಿಸದಿರುವುದು ಹೇಗೆ? ಆದರೆ, ಆಕ್ಷೇಪವೆಂತಹದಾಗಿರಬೇಕು?

೧. ಶೃಂಗಾರಾದಿ ಪ್ರಧಾನ ರಸವನ್ನೇ ಬಿಟ್ಟಿರುವುದರಿಂದ ಅಷ್ಟಾಗಿ ಶೋಭಿಸಲಾರದು.

೨. ಕಥಾನಾಯಕನಾದ ರಮಾನಂದನಲ್ಲಿ ಆದರ್ಶಯೋಗ್ಯವಾದಷ್ಟು ವಿನಯಶೀಲತೆಯನ್ನುಂಟು ಮಾಡಿದ್ದರೆ ಚೆನ್ನಾಗಿ ಕಾಣುತ್ತಿದ್ದಿತು.

೩. ಕಥೆಗೆ ಉಪಯುಕ್ತಗಳಾದ ಹಾಡುಗಳನ್ನು ಕೊಡದೆ ಬಿಟ್ಟಿರುವುದೂ, ಉದ್ದುದ್ದದ ಭಾಷಣಗಳಿಂದಲೇ ತುಂಬಿಸಿರುವುದೂ ಅಷ್ಟಾಗಿ ತೃಪ್ತಿಕರವಾಗಿಲ್ಲ.

ಇವೇ ಆಕ್ಷೇಪಗಳಾಗಿರಬೇಕಲ್ಲವೆ? ಇರಲಿ, ತಕ್ಕಷ್ಟು ಸಮಾಧಾನವನ್ನು ಕೊಡಬೇಕಾದುದು ನಮ್ಮ ಕರ್ತವ್ಯವಾಗಿದೆ. ಹೇಗೆಂದರೆ:—

೧. ರಮಾನಂದನಲ್ಲಿ ಶೃಂಗಾರ ರಸವಿಲ್ಲದಿರುವುದಕ್ಕೆ ಕಾರಣವೆಂದರೆ, ರಮಾನಂದನು ಪ್ರಾಥಮಿಕ ಶಿಕ್ಷಣದಲ್ಲಿ ಉತ್ತೀರ್ಣನಾಗಿ, ಪ್ರೌಢತರಗತಿಗೆ ಬರಲು ಅರ್ಹತೆಯನ್ನುಂಟುಮಾಡುವ ಗುರುಕುಲವಾಸದಲ್ಲಿರಬೇಕಾದ ವಿದ್ಯಾರ್ಥಿ, ವಿದ್ಯಾರ್ಥಿಗಳಿಗೆ ವಿಲಾಸ ವಿಭ್ರಮಾದಿ ಶೃಂಗಾರ ರಸಗಳು ಸರ್ವಥಾ ಪರಿತ್ಯಾಜ್ಯವೆಂದು ಬಲ್ಲವರು ಹೇಳುವರಲ್ಲವೆ?

# II

ವಿದ್ಯಾಭ್ಯಾಸದ ನಿಜವಾದ ಇಚ್ಛಿತಫಲವನ್ನು ಹೊಂದಬೇಕಾದರೆ ಗುರುಕುಲ ವಾಸದಿಂದ ತನ್ನ ಬಾಲ್ಯ ಮತ್ತು ತಾರುಣ್ಯ–ಇವೆರಡು ಅಂತರಗಳನ್ನೂ ತಕ್ಕಮಟ್ಟಿಗೆ ವ್ಯವಸ್ಥೆಗೊಳಿಸಿ, ಆ ವಿಧದ ಬ್ರಹ್ಮಚರ್ಯೆಯಿಂದ ಮನಸ್ಸನ್ನುಬುದ್ಧಿಯ ವಶದಲ್ಲಿರಿಸಿ, ಜಿತೇಂದ್ರಿಯನೆನ್ನಿಸಬೇಕಾದುದೇ ಅತ್ಯಾವಶ್ಯಕವು. ಇದಕ್ಕೆ ವಿರಹ, ವಿಹಾರ, ಸ್ತ್ರೀ ವರ್ಣನೆ, ವನವರ್ಣನೆ ಮೊದಲಾದ ಶೃಂಗಾರವಿಲಾಸಗಳು ಪ್ರತಿಬಂಧಕಗಳಾದುದರಿಂದ, ರಮಾನಂದಾಭಿಧಾನ ಪ್ರಬಂಧವು, ವಿದ್ಯಾರ್ಥಿವರ್ಗಕ್ಕೆ, ಮುಖ್ಯವಾಗಿ ವಿದ್ಯಾರ್ಥಿಗಳನ್ನು ಉತ್ತಮಶಿಕ್ಷಣೆಯಿಂದ ಸುಸ್ಥಿತಿಗೆ ತರಬೇಕಾದ ಗುರುಜನರ ಮುಂಡಲಿಗೆ ಉಪಹಾರ ವಾಗಿ ಒಪ್ಪಿಸಬೇಕೆಂಬ ಸಂಕಲ್ಪದಿಂದ ಮೇಲಿನ ಮನೋವಿಕಲ್ಪಹೇತುಗಳಾದ ವಿಚಾರ ಗಳಾವುವನ್ನೂ ಇದರಲ್ಲಿ ಕೊಡಲಿಲ್ಲ. ಹಾಗೂ ಕೇವಲ ಕಾದಂಬರೀ ರೂಪದಲ್ಲಿ ವಿಷಯವಿಚಾರಗಳನ್ನು ಪ್ರತಿಪಾದಿಸುವುದರಿಂದ, ನಮ್ಮ ಬಾಲಕರ ಮನಸ್ಸಿಗೆ ಸುಲಭ ವಾಗಿ ಬೋಧೆಯಾಗುವುದಿಲ್ಲವೆಂದೆಣಿಸಿ, ಈ ಬಗೆಯ ನಾಟಕರೂಪದಲ್ಲಿ, ಕೇವಲ ಗದ್ಯಾನುವಾದದಲ್ಲಿ ಮಾತ್ರವೇ ರಚಿಸಿರುವುದಲ್ಲದೆ, ಅಭಿನಯಕ್ಕೆಂದು ಬರೆದುದಲ್ಲ.

೨. ಇನ್ನು ರಮಾನಂದನಲ್ಲಿ ವಿನಯಶೀಲತೆಯು ವಿಶೇಷವಾಗಿರಬೇಕಾಗಿತ್ತೆಂದು ಹೇಳುವ ಆಕ್ಷೇಪಕ್ಕೆ ಸಮಾಧಾನವೆಂದರೆ, ಕೇವಲ ಬೂದಿಮುಚ್ಚಿದ ಕೆಂಡದಂತೆ ಮೌನವನ್ನು ಹಿಡಿದು ನಡೆವುದು, ಈ ಕಾಲದಲ್ಲಿ ಅಷ್ಟಾಗಿ ಸಹಜವೆನ್ನಿಸಲಾರದು. ಏಕೆಂದರೆ, ಎಷ್ಟೇ ವಿದ್ಯಾವಂತರಾಗಿದ್ದರೂ, ಬಾಯಿಂದೇನನ್ನೂ ಹೇಳದೆ, ಅರಿಯದವ ರಂತಿರುವುದು ಬಹು ಪ್ರಯಾಸ. ಈಗಿನ ಸ್ಥಿತಿಯಲ್ಲಿ ತಮ್ಮ ಘನತೆಯಲ್ಲಿ ಅಲ್ಪಸ್ವಲ್ಪ ವಾದರೂ, ಎಂದರೆ ಕಾರ್ಯ-ಕರಣ-ಕಲಾಪಗಳಲ್ಲಿ ಯಾವುದರಿಂದಲೇ ಆಗಲಿ, ಹೇಗಾ ದರೂ ಪ್ರದರ್ಶನವಾಗದಂತೆ ಅಡಗಿಸಿಕೊಂಡಿರಲು ಆಗುವುದಿಲ್ಲ. ಸುತ್ತಮುತ್ತಲಿನ ಬಗೆಯನ್ನು ನೋಡಿ ಹೇಗಾದರೂ ಅದನ್ನು ಹೊರಗೆಡಹಲೇ ಬೇಕಾಗುತ್ತದೆ. ಹಾಗೂ ವಸ್ತುವಿಚಾರದಲ್ಲಿ, ನ್ಯಾಯವಿಮರ್ಶೆಯಲ್ಲಿ, ಪ್ರಮತ್ತರನ್ನು ಪರಿಪಕ್ವಸ್ಥಿತಿಗೆ ತರಬೇ ಕೆಂಬ ಬಲವತ್ಪ್ರಯತ್ನದಲ್ಲಿ ತಕ್ಕಂತೆ ತಮ್ಮ ಪಾಚಾಳಕತೆ, ನಿಸ್ಪೃಹತೆ, ಆಢ್ಯತೆ ಗಳನ್ನು ಪ್ರದರ್ಶಿಸದೆ ಬಿಟ್ಟರೆ, ಉದ್ದೇಶಸಿದ್ಧಿಯಾಗುವುದೂ ಕಷ್ಟ. ಈ ಕಾರಣದಿಂ ದಲೇ ರಮಾನಂದನು ಸಮಯಾನುಸಾರವಾಗಿ ತನ್ನಸ್ಥಿರತೆ, ಧೈರ್ಯ, ಸಾಹಸಾದಿ ಬುದ್ಧಿ ಸಂಪನ್ನತೆಯನ್ನು ತಕ್ಕಷ್ಟು ಪ್ರದರ್ಶಿಸಲೇಬೇಕಾಯಿತು. ಇಷ್ಟುಮಾತ್ರಕ್ಕೆ ರಮಾನಂ

ದನು ಅವಿಧೇಯನೆಂದಾಗಲೀ ದುರಭಿಮಾನಿಯೆಂದಾಗಲೀ ಜಿಜ್ಞಾಸುಗಳಾದವರು ಹೇಳಲಾರರು.

೩. ಮೂರನೆಯ ಆಕ್ಷೇಪಕ್ಕೆ ಸಮಾಧಾನವೇನಿರಬೇಕೆಂಬುದನ್ನು ಕುರಿತು, ಒಂದೆರಡು ಮಾತುಗಳು,— ಕಥೆಗೆ ಉಪಯುಕ್ತಗಳಾದ ಹಾಡುಗಳನ್ನು ಸೇರಿಸಿದ್ದರೆ ಚೆನ್ನಾಗಿತ್ತೆಂಬುದು ರಸಜ್ಞರ ಅಭಿಪ್ರಾಯಕ್ಕೆ ತಕ್ಕುದೇ ಸರಿ. ಆದರೆ ರಮಾನಂದವು ಕೇವಲ ನಾಟ್ಯವರ್ಗದವರ ಉಪಯೋಗಕ್ಕಾಗಿ ಮಾತ್ರವೇ ಬರೆಯಲ್ಪಟ್ಟ ನಾಟಕವಲ್ಲವೆಂದು ಹಿಂದೆ ಹೇಳಿರುವಂತೆ, ವಿದ್ಯಾರ್ಥಿಗಳ ಜ್ಞಾನೇಂದ್ರಿಯ ವಿಕಾಸಕ್ಕೆ ಆವಶ್ಯಕವಾದ ತರ್ಕ ವಿತರ್ಕಗಳನ್ನು ಗೀತಾರೂಪದಲ್ಲಿ ವಿವರಿಸಿದರೆ ಬಾಲಕರ ಮನಸ್ಸು, ನಿರ್ದಿಷ್ಟಫಲವನ್ನು ಕಾಣುವ ಉತ್ಸುಕತೆಯನ್ನು ಒಂದುಕಡೆಗಿಟ್ಟು, ಕೇವಲ ರಾಗದಲ್ಲಿಯೇ ಅನುರಕ್ತವಾಗಿ ಹೋಗಬಹುದೆಂಬ ಶಂಕೆಯಿಂದ ವಚನರೂಪದಲ್ಲಿಯೇ ವಿಷಯ ವಿಚಾರವಿಮರ್ಶೆಯನ್ನು ಕೊಟ್ಟಿರುವುದು. ಅಲ್ಲದೆ, ಮಕ್ಕಳ ಬುದ್ಧಿಶಕ್ತಿಯು ಯಾವುದೇ ಒಂದು ವಸ್ತುಸ್ಥಿತಿಯನ್ನು ಕುರಿತು ವ್ಯಾಖ್ಯಾನಮಾಡಬೇಕಾದರೂ ಸಾಮರ್ಥ್ಯವನ್ನು ಹೊಂದಬೇಕೆಂಬ ಉದ್ದೇಶದಿಂದ ಭಾಷಣವನ್ನು ಲಂಬಿಸಿ ಬರೆದಿರುವುದು. ಇದನ್ನು ದೋಷವಾಗಿ ಪರಿಗ್ರಹಿಸುವುದಾದರೆ ಮತ್ತೇನನ್ನು ಹೇಳಬಹುದು?

ಮತ್ತೆ ಗ್ರಂಥದಲ್ಲಿ ಪ್ರತಿಪಾದಿಸಲ್ಪಡುವ ವಿಷಯಗಳು ಬಾಲಕ ಬಾಲಿಕೆಯರ ಮನಸ್ಸಿಗೆ ಹಿಡಿಯುವಂತೆ ಮಹನೀಯರ ನೀತಿವಾಕ್ಯಗಳನ್ನು ಸಂಗ್ರಹಿಸಿ, ತೋರಿಸಿರುವುದು.

ನಮ್ಮ ಬಾಲಕ ಬಾಲಕಿಯರಲ್ಲಿ ಆದಿಯಿಂದಲೂ ದೈವಭಕ್ತಿ, ದೇಶಾಭಿಮಾನ ಗುರುಜನವಿಧೇಯತೆಗಳುಂಟಾಗಬೇಕಾದುದು ಅವಶ್ಯವಾದುದರಿಂದ ಇದರಲ್ಲಿ ಕೇವಲ ಭಗವನ್ನಾಮ ಸಂಕೀರ್ತನೆಗಳನ್ನುಮಾತ್ರವೇ ಪ್ರತಿ ಅಂಕದ ಆದ್ಯಂತ ಭಾಗದಲ್ಲಿಯೂ ಕೊಟ್ಟಿರುವುದು. ಇದರಿಂದ ನಮ್ಮ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಮನಸ್ಸು ಆಹ್ಲಾದಿತವಾಗಿ ಅಲ್ಪ ಸ್ವಲ್ಪವಾದರೂ ವಿಚಾರ ಶಕ್ತಿಯನ್ನು ಹೊಂದಬಹುದಾದರೆ ನನ್ನೀ ಲೇಖನಶ್ರಮದ ಸಾರ್ಥಕತೆಯುಂಟಾದಂತೆ ಭಾವಿಸುವೆನು. ಮತ್ತೇನನ್ನು ಹೇಳಲಿ ?

ನನ್ನ ಈ ಲೇಖನ ಕಾರ್ಯದಲ್ಲಿ ನನ್ನನ್ನು ಪ್ರೋತ್ಸಾಹಿಸಿದ ನಮ್ಮ ಪೂಜ್ಯರ ಮತ್ತು ಉಪಾಧ್ಯಾಯರ ಆಜ್ಞಾಬಲದಿಂದ ನನ್ನ ಅಲ್ಪಬುದ್ಧಿಗೆ ತಕ್ಕಂತೆ ಬರೆದು

ಭಗವತಿಯ ಅನುಗ್ರಹ. ಹಿರಿಯರ ಆಶೀರ್ವಾದಗಳಿಂದ ಇಂದಿಗೆ ಕೃತಕಾರ್ಯಳೆನ್ನಿಸಿದೆ ನಲ್ಲದೆ, ಸೋದರ ಸ್ನೇಹವು ಸರ್ವೋತ್ತಮವಾದುದೆಂಬುದನ್ನು ಅನುಭವ ಪೂರ್ವಕ ವಾಗಿ ನಿದರ್ಶನಕ್ಕೆ ತರಬೇಕೆಂದೆಣಿಸಿ, ನನ್ನ ಸಹಜಾತನಾಗಿದ್ದು ತನ್ನ 13-14ನೆಯ ವರ್ಷದಲ್ಲಿಯೇ ಎಂದರೆ-2-11-1891ರಲ್ಲಿ ಹುಟ್ಟಿ,26-12-1903ರಲ್ಲಿ ಗತಿಸಿಹೋಗಿದ್ದರೂ, ತನ್ನ ನೈಸರ್ಗಿಕವಾದ ಬಂಧುಪ್ರೇಮವನ್ನು ಅಡಿಗಡಿಗೂ ನನ್ನ ಸ್ಮೃತಿ ಪಥಕ್ಕೆ ತರುತ್ತಿರುವ ಸೋದರನ ಹೆಸರಿನಲ್ಲಿ ಈ ರಮಾನಂದಾಭಿಧಾನ ಗ್ರಂಥವನ್ನು ಅಂಕಿತಗೊಳಿಸಿ, ಹಿರಿಯರ ಅಭಿಪ್ರಾಯದಂತೆ ಇದರಸರ್ವಾಧಿಕಾರವನ್ನೂ ಆ ಪರಮಾತ್ಮನ ಚರಣಾರವಿಂದದಲ್ಲಿ ಸಮರ್ಪಿಸಿರುವೆನು. ಮತ್ತು ಇದರಲ್ಲಿ ನನ್ನ ಅಜ್ಞಾತ ದೋಷದಿಂದ ಹಲವು ಕೊರತೆಗಳು ತೋರಿಬಂದರೂ, ಸುಹೃದರಾದ ನಮ್ಮ ವಾಚಕವರ್ಗವು ಸಹಜ ಕ್ಷಮೆಯಿಂದ ಮನ್ನಿಸಿ, ಮುಖ್ಯಾಶಯವನ್ನು ಮಾತ್ರ ಸಂಗ್ರಹಿಸಿಕೊಳ್ಳಬೇಕೆಂದೂ, ನ್ಯೂನಾತಿರಿಕ್ತ ದೋಷಗಳನ್ನು ತೋರಿಸಿ, ಎಚ್ಚರಿಸಬೇಕೆಂದೂ ಸವಿನಯವಾಗಿ ಪ್ರಾರ್ಥಿಸುವೆನು. ಸರ್ವಶಕ್ತನಾದ ಭಗವಂತನು ನನ್ನ ಮೇಲಿನ ಆಶಯವನ್ನು ಸಫಲವಾಗಿ ಮಾಡಿ, ನಿರಂತರವೂ ನನ್ನಿಂದ ಸೇವೆಯನ್ನು ಕೈಕೊಳ್ಳುತ್ತಿರುವಂತೆ ಅನುಗ್ರಹಿಸಬೇಕೆಂತಲೂ, ಆತನ ಅಪಾರಕೃಪಾವಲೋಕನದಿಂದ ನಮ್ಮೀರಾಷ್ಟ್ರವು ಸುಖಾನಂದದಾಯಕವಾಗಿ ಪ್ರಕಾಶಿಸುತ್ತಿರಬೇಕೆಂದೂ ಅನನ್ಯ ಭಾವದಿಂದ ಬೇಡುತ್ತಿರುವೆನು.

ರಾ|| ಸಂ|| ಮಾಘಬಹುಳ ದ್ವಿತೀಯೆ
ಸೋಮವಾರ(21-2-1916)
ಮಾತೃಮಂದಿರಂ, ನಂಜನಗೂಡು.

ಇತಿ—
ನಿರಂತರ ಶ್ರೇಯಾಕಾಂಕ್ಷಿಣಿ
ವಿದ್ಯಾರ್ಥಿನಿ.

॥ ಶ್ರೀ ॥

## ದ್ವಿತೀಯ ಮುದ್ರಣದ ಪೀಠಿಕೆ.

ಸುಹೃದರೇ!

ಭಗವದರ್ಪಿತ ಬುದ್ಧಿಯಿಂದ, ಕರ್ತವ್ಯದೃಷ್ಟಿಯಿಂದ ಮಾಡುವ ಕಾರ್ಯಕ್ಕೆ ಅಕ್ಷಯವಾದ ಫಲವುಂಟಾಗುವದೆಂದು ಗುರುಮುಖದಿಂದ ಕೇಳಿ ತಿಳಿದಿರುವೆವು. ಹಾಗೆಯೇ ಗುರುಜನರ ಉಪದೇಶದಂತೆ— ನಮ್ಮ ಸೋದರೀ ಸೋದರರ ಜ್ಞಾನಪ್ರಸಾರವಾಗುವಂತೆ ಪ್ರಯತ್ನಿಸಬೇಕೆಂಬ ಅವರ ಶಾಸನದಂತೆ— ಈ ಲೇಖನ ಕಾರ್ಯದಲ್ಲಿ ಪ್ರವರ್ತಿಸಿದ ನಮ್ಮ ಪ್ರಯತ್ನವು ಇಂದಿನವರೆಗೆ ಸುಮುಖವಾಗಿ ನಡೆತಂದಿರುವದಲ್ಲದೆ, ತಕ್ಕಷ್ಟು ಪ್ರತಿಫಲವನ್ನೂ ಉಂಟುಮಾಡಿರುವುದು; ನಮ್ಮ ನಿರೀಕ್ಷೆಗೆ ಮೀರಿದಷ್ಟು ಸನ್ಮಾನವನ್ನೂ ಲಭಿಸಿಕೊಟ್ಟಿರುವುದು ನಮ್ಮ ಅಲ್ಪಾನುಭವಕ್ಕೊಳಪಟ್ಟು ಹೊರಡುತ್ತಿರುವ ಹಿತೈಷಿಣೀ ಗ್ರಂಥಮಾಲೆಯು ಈವರೆಗಿನ ೯ ಗ್ರಂಥಗಳಲ್ಲಿ ಅರ್ಧಭಾಗವು ದೇಶೋದ್ಧಾರಕರೆನ್ನಿಸುವ ಮಹನೀಯರಾದ ಮೈಸೂರು ಮದರಾಸು ವಿದ್ಯಾಂಗದವರಿಂದ ಶಾಲಾಪುಸ್ತಕಗಳಾಗಿ ಅಂಗೀಕೃತವಾಗಿಯೂ ಇರುವವು ಎಂದರೆ ವಿದ್ಯುಲ್ಲತೆಯು ಮದರಾಸಿನ ಇಂಟೆರಮೀಡಿಯೇಟ ಪರೀಕ್ಷೆಗೆ ೧೯೧೮ರ ಪಠ್ಯಪುಸ್ತಕವಾಗಿಯೂ, ಸುಶೀಲೆಯು ಅಲ್ಲಿಯ ಸರ್ಕಾರಿ ಶಾಲಾಪುಸ್ತಕವಾಗಿಯೂ ಇಡಲ್ಪಟ್ಟಿದೆ. [ಇದನ್ನು ಅಲ್ಲಿಂದ ಬಂದಿರುವ ನಿರೂಪಣದೊಡನೆ ಸಂದಿನಿಯಲ್ಲಿ ವಿಮರ್ಶಿಸಲಿರುವೆವು.] ಅಲ್ಲದೆ, ಈ 'ರಮಾನಂದ'ವು ನಮ್ಮ ಘನಹೊಂದಿದ ಮೈಸೂರು ವಿದ್ಯಾಭ್ಯಾಸದ ಮುಖ್ಯಾಧಿಕಾರಿಗಳ ಸಮಾಲೋಚನೆಗೆ ಬಂದು, ಇಲ್ಲಿಯ IV ಫಾರಮ್ಮಿಗೆ ೧೯೧೭—೧೮ನೆ ವರ್ಷದ ಪಾಠಪುಸ್ತಕವಾಗಿ ಏರ್ಪಡಿಸಲ್ಪಟ್ಟಿತು. ಈ ಕಾರಣದಿಂದ ರಮಾನಂದವು ಇಷ್ಟು ಬೇಗ ದ್ವಿತೀಯ ಮುದ್ರಣಕ್ಕೆ ಬರಲನುವಾಯಿತು.

ಪುಸ್ತಕಗಳು ಅತಿತ್ವರೆಯಾಗಿ ಬೇಕಾಗಿರುವದರಿಂದಲೂ ಶಾಲಾ ಪುಸ್ತಕವಾಗಿ ಏರ್ಪಟ್ಟಿರುವದರಿಂದಲೂ ಯಾವ ಬದಲಾವಣೆಗಳನ್ನೂ ಮಾಡಲಾಗಲಿಲ್ಲ. ಇದರಲ್ಲಿ ಕೊಡದೆ ಬಿಟ್ಟಿರುವ ಕೆಲವು ಭಾಗಗಳೊಡನೆ ತೃತೀಯ ಮುದ್ರಣವು ಭಗವದನುಗ್ರಹದಿಂದ ಜಾಗ್ರತೆಯಾಗಿಯೇ ಆಗುವದೆಂದು ನಂಬಿರುವೆವು.

ನಮ್ಮ ನಿವೇದನದಂತೆ ಪ್ರೌಢ ಶಿಕ್ಷಣದ ಅರ್ಹತೆಯನ್ನು ಹೊಂದಬೇಕಾದ ವಿದ್ಯಾರ್ಥಿಗಳ ಅಭ್ಯಾಸಕ್ಕೆಂದೇ ಈ ಪುಸ್ತಕವನ್ನು ಪಠ್ಯ ಪುಸ್ತಕವಾಗಿರಿಸಿದ ನಮ್ಮ ಮೈಸೂರು ವಿದ್ಯಾಂಗದ ಅಧ್ಯಕ್ಷರಿಗೂ, ಪಠ್ಯಪುಸ್ತಕಗಳ ಪರೀಕ್ಷಾಕರ್ತರಿಗೂ, ಈ ಕಾರ್ಯದಲ್ಲಿ ನಮಗೆ ಅತ್ಯಂತ ಸಹಕಾರಿಗಳಾಗಿರುವ ಸುಹೃದರಿಗೂ ಈ ಮೂಲಕ ನಮ್ಮ ಕೃತಜ್ಞಾಪೂರ್ವಕ ವಂದನೆಗಳನ್ನರ್ಪಿಸುವದಲ್ಲದೆ, ಭಗವತ್ಸನ್ನಿಧಿಯಲ್ಲಿ ಅವರೆಲ್ಲರ ನಿರಂತರ ಶ್ರೇಯಃಪ್ರಾರ್ಥನೆಯನ್ನೂ ಮಾಡುತ್ತಿರುವೆವು.

ಮಾತೃಮಂದಿರಂ
ನಂಜನಗೂಡು
ಮಾಘ ಬಹುಳ ಸಪ್ತಮಿ.
೧೨—೨—೧೯೧೭.

ಇತಿ ದೇಶಭಗಿನಿ,

ಹಿ ತೈ ಷಿ ಣೀ.

ಶ್ರೀಃ

ಶ್ರೀ ಅರವಿಂದ ನಾಯಕೀ ಸಮೇತ

ಶ್ರೀರಾಮಾ ಪ್ರಮೇಯ ಪ್ರಸನ್ನಃ



“ ಶ್ರೀವತ್ಸ ಕೌಸ್ತುಭ ವಿರಾಜಿತ ದಿವ್ಯರೂಪ |
ವಿಶ್ವಂಭರೋದ್ಧರಣ ದರ್ಶಿತ ಭೂರಿಶೌರ್ಯ ||
ಪ್ರಹ್ಲಾದ ಭಕ್ತಿ ಭರಣಾಯ ಕೃತಾವತಾರ |
ಶ್ರೀಶಾಪ್ರಮೇಯಚರಣೌ ಶರಣಂ ಪ್ರಪದ್ಯೇ || ”

ಶ್ರೀಃ

ಪ್ರಸೀದತು.

---

ಶ್ರೀ

ಅರವಿಂದ ನಾಯಕೀ ಸಮೇತ

# ಶ್ರೀರಾಮಾಪ್ರಮೇಯ ಪರಬ್ರಹ್ಮಣೇ.

---

ಹನ್ನೆರಡು ವರ್ಷಗಳ ಕೆಳಗೆ ತನ್ನ ಬಾಲ್ಯದಲ್ಲಿಯೇ ಶ್ರೀ ಪರಂಧಾಮನ
ಪಾದಾರವಿಂದವನ್ನು ಸೇರಿದ ನನ್ನ ಸಹಜಾತ ರಾಮಾಪ್ರಮೇಯ
ಶರ್ಮನ ಚಿರಸ್ಮರಣೆಗಾಗಿ, ಆತನಲ್ಲಿದ್ದ ನಿಜವಾದ
ವಿದ್ಯಾರ್ಥಿ ಲಕ್ಷಣ, ವಿಶ್ವಾಸಗೌರವ, ದೈವ
ಭಕ್ತಿಗಳನ್ನು ನೆನೆನೆನೆಯುತ್ತ ಈ
ಗ್ರಂಥವನ್ನು ಭಗವನ್ನಾಮಾಂ
ಕಿತದಿಂದ

ಇಂದು

ಪ್ರಕಾಶಪಡಿಸಿದೆ.

[ಗುರುವಾರ]　　　　[ಗ್ರಂಥಕರ್ತೃ]

ಕ್ಯಾಕ್ಸ್ಟನ್ ಬ್ರಾಂಚ್ ಪ್ರೆಸ್.

॥ ಶ್ರೀ ॥

# ರಮಾನಂದ.

( ನಾ ಟ ಕ ೦ )

॥ ನಾಂದಿ ॥

“ ಶ್ರೀವತ್ಸ ಕೌಸ್ತುಭ ವಿರಾಜಿತ ದಿವ್ಯರೂಪ ।
ವಿಶ್ವಂಭರೋದ್ಧರಣ ದರ್ಶಿತ ಭೂರಿಶೌರ್ಯ ॥
ಪ್ರಹ್ಲಾದ ಭಕ್ತಿ ಭರಣಾಯ ಕೃತಾವತಾರ ।
ಶ್ರೀಶಾಪ್ರಮೇಯ ಚರಣೌ ಶರಣಂ ಪ್ರಪದ್ಯೇ ” ॥ ೧೨॥

(ಅಪ್ರಮೇಯಪ್ರಪತ್ತಿ:)

ರಾಗ— (ರಾಮದೂತನೇ ನಮೋ-ನಮೋ)

ಶ್ರೀರಮಾ ಮನೋಹರಾ ನಮೋ ನಮೋ । ಸಾರಸುಗುಣ-ಭೂರಿಕರುಣಾ-
ಪೂರಿತೇಕ್ಷಣ ॥ ಸುಜ್ಞಾ-ನಾ-ನಂ-ದ-ವಿಮಾನರಂಜನ ॥ ॥ ೧ ॥

ವಿಧಿ ಭವಾದಿ ವಂದಿತ ನಮೋ ನಮೋ । ವೇದವಿದಿತ--ವಿಶುದ್ಧರೂಪ
ವಿಶ್ವಮೋಹಕ ॥ ವಿದ್ಯಾ-ಧೀ-ಶ (ಜಯ) ವಿಜ್ಞಾನದಾಯಕ ॥ ॥ ೨ ॥

ಶರಣಾರ್ತಿಭಂಜನ ನಮೋ ನಮೋ । ದುರಿತದಮನ-ದೀನಭರಣ-
ಪರಮಪಾವನ ॥ ವರಶೇಷಾ-ದ್ರೀ-ಶ-ವರದವೇಂಕಟ ॥ ॥ ೩ ॥

( ಸೂತ್ರಧಾರನ ಪ್ರವೇಶ. )

ಸೂತ್ರ:— ( ಸಭೆಯನ್ನು ವಂದಿಸಿ, ಮೇಲೆ ನೋಡಿ ಭಕ್ತಿ ಭಾವದಿಂದ ಕೈಮುಗಿದು) “ ದಿಶನ್ತು ಮೇ ದೇವ ಸದಾ ತ್ವದೀಯ--ದಯಾತರಙ್ಗಾನುಚರಾ: ಕಟಾಕ್ಷಾ: ॥ ಶ್ರೋತ್ರೇಷು ಪುಂಸಾಮಮೃತಂಕ್ಷರನ್ತೀಂ । ಸರಸ್ವತೀಂ ಸಂಶ್ರಿತ ಕಾಮಧೇನುಮ್ ” ॥

(ಹಯಗ್ರೀವ ಸ್ತುತಿ.)

ದಯಾಘನನಾದ ಪರಮಾತ್ಮನೇ! ಪರಮ ಪಾವನನೇ!! ನಿನಗಿದೆ--ಇದೆ ವಂದನೆ! ನಿನ್ನ ಅಮೋಘವಾದ ಕೃಪಾಕಟಾಕ್ಷವು ನಮ್ಮನ್ನು ನಿರಂತರವೂ ಎಡೆಬಿಡದೆ ಸಲಹಬೇಕೆಂಬುದೇ ನಮ್ಮೆಲ್ಲರ ಸಂಪ್ರಾರ್ಥನೆ.

(ಸಭೆಯ ಕಡೆಗೆ ತಿರುಗಿ ಸಂತೋಷದಿಂದ ಕೈನೀಡಿ)

ಮಹನೀಯರಾದ ದೇಶಬಾಂಧವರೇ! ನಿಮಗಿದೊ ವಂದನೆಗಳು. ಪವಿತ್ರಪ್ರೇಮಪ್ರೇರಿತರಾಗಿ ಸಾಕ್ಷಾತ್ಕರಿಸಿರುವ ನಿಮಗಿದೊ ಧನ್ಯವಾದಗಳು. ನಿಮ್ಮೀ ದಿವ್ಯದರ್ಶನ ಲಾಭವನ್ನು ಹೊಂದುವಂತೆ ಮಾಡಿದ ಈ ದಿನವೇ ನಮ್ಮ ಚಿರಸ್ಮರಣೀಯವಾದ ಸುದಿನವು. ನಿಮ್ಮೆಲ್ಲರ ಬಳಿಯಲ್ಲಿ ಅರೆಗಳಿಗೆಯಾದರೂ ವಸಿಸುವಂತಾದುದರಿಂದ ನಮ್ಮೀ ಜನ್ಮವೇ ಸಾಫಲ್ಯವು. ಆದರೆ, ಬಾಲಕ--ಬಾಲಿಕೆಯರಿಂದ ಮೊದಲು, ಲೋಕಾನುಭವಜ್ಞರಾದ ವೃದ್ಧರವರೆಗೂ ತುಂಬಿ ಬೆಳಗುತ್ತಿರುವ ಈ ನಿಮ್ಮನ್ನು ಯಾವ ಬಗೆಯ ಸತ್ಕಾರದಿಂದ ನಲವಡಿಸಿ ಧನ್ಯನಾಗಲಿ?

(ಕ್ಷಣಕಾಲ ಕಿವಿಕೊಟ್ಟು ಕೇಳಿ, ಆ ಬಳಿಕ ಸಂಭ್ರಮದಿಂದ)

ಸಾಧು! ಸತ್ಪುರುಷರೇ! ಸಾಧುಸಾಧು!! ಪರಮ ಪಾವನರಾದ ತಮ್ಮಿಂದ ಆಜ್ಞಾಪಿಸಲ್ಪಟ್ಟ ನಾನು, ತಮ್ಮೀ ಪರತರಾನುಗ್ರಹ ಬಲದಿಂದಲೇ ಕೃತಕಾರ್ಯನಾದೇನೆಂದು ನಂಬಿರುವೆನು. ಇರಲಿ; ನನ್ನ ಅನುಗಾಮಿಯೊಡನೆ ಆಲೋಚಿಸುವೆನು. (ತೆರೆಯಕಡೆಗೆ ತಿರುಗಿ)—ನಟರಾಜನೆ! ಎಲೈ ನಟರಾಜನೆ!!

ನಟರಾಜ:—(ಮುಂದೆ ಬಂದು ವಿನಯದಿಂದ) ಭರತಾಚಾರ್ಯನೆ! ಆಜ್ಞಾಧೀನನಿಗೆ ಏನಪ್ಪಣೆ ?

ಸೂತ್ರ:—ನಟರಾಜ! ಇದೊ ಇತ್ತನೋಡು! ನಮ್ಮ ಪೂರ್ವದ ಪುಣ್ಯಫಲದಿಂದ ನೆರೆದಿರುವ ಈ ದಿವ್ಯಸಭೆಯನ್ನು ಕಣ್ದಣಿವಂತೆ ನೋಡು. ಸತ್ಪುರುಷರ ಸಂದರ್ಶನ--ಸಹವಾಸಗಳು ಸಾಮಾನ್ಯವಲ್ಲ;

ಮತ್ತು ಸುಲಭವಾಗಿ ಹೊಂದುವಂತಹದೂ ಅಲ್ಲ. ಬಹುಕಾಲದ ಪುಣ್ಯಫಲವೇ ಸಹಕರಿಸಿರಬೇಕು. ಇಂಥವರ ದರ್ಶನದಿಂದ ಅಕ್ಷಯವಾದ, ಅನಂತವಾದ, ಅಮೋಘವಾದ--ಸುಖಸಂಗತಿಯು ಸಂಗಡಿಸುವುದು. ಆದುದರಿಂದ ಈ ಮಹನೀಯರನ್ನು ಒಂದು ಮುಹೂರ್ತಮಾತ್ರವಾದರೂ ಸೇವಿಸಿ, ಕೃತಾರ್ಥನಾಗಬೇಕೆಂದು ಭಾವಿಸುತ್ತೇನೆ.

ನಟ:—ಅಭಿಮತವು ಅತ್ಯುತ್ತಮವಾದುದೇ ಸರಿ. ನನಗೇನಪ್ಪಣೆ?

ಸೂತ್ರ:—ಮತ್ತೇನು? ದಯಾಘನರಾದ ಈ ಮಹನೀಯರನ್ನು ಯಾವುದಾದರೂ ಒಂದು ನಾಟಕಾಭಿನಯದಿಂದ ನಲವಡಿಸಬೇಕೆಂದಿರುವೆನು.

ನಟ:—ಅಭ್ಯಂತರವೇನು?

ಸೂತ್ರ:—ಅಭ್ಯಂತರವೇನೂ ಇಲ್ಲ; ಆದರೆ, ಇವರು ನನ್ನನ್ನು ಕುರಿತು ಹೀಗೆಂದು ಆಜ್ಞಾಪಿಸಿರುವರು.

ನಟ:—ಹೇಗೆಂದು ?

ಸೂತ್ರ:—“ ಬಾಲಕರಿಗೆ ಸುಬೋಧವಾಗಿಯೂ, ವಿದ್ಯಾರ್ಥಿಗಳಿಗೆ ಜ್ಞಾನಪ್ರದವಾಗಿಯೂ, ಸತ್ಸಂಕಲ್ಪರಿಗೆ ಸಂತೋಷಪ್ರದವಾಗಿಯೂ, ದುರ್ಜನರಿಗೆ ದಂಡಾಧಿಕಾರಿಯಾಗಿಯೂ ಇರುವ ಯಾವುದೇ ಒಂದು ರೂಪಕಾಭಿನಯದಿಂದಾದರೂ ನಮ್ಮನ್ನು ನಲವಡಿಸಬೇಕು.”

ನಟ:—(ತಲೆದೂಗಿ) ಆರ್ಯನೇ! ಮಹನೀಯರು ಚೆನ್ನಾಗಿಯೇ ಕಟ್ಟುಮಾಡಿರುವರಲ್ಲವೆ? ದುರಾಚಾರರಾದ ನಾಸ್ತಿಕವಾದಿಗಳಿಂದ ಅಪದೆಸೆಗೀಡಾಗುತ್ತಿರುವ ಸನಾತನ ಧರ್ಮಸೂತ್ರಗಳನ್ನು ಇಂಥವರಲ್ಲದೆ ಮತ್ತಾರು ಉದ್ಧರಿಸಬೇಕು?

ಸೂತ್ರ:—ನಿಜ! ಆದರೆ ಇವರನ್ನು “ ರಮಾನಂದ ” ರೂಪಕಾಭಿನಯದಿಂದ ತೃಪ್ತಿಪಡಿಸಬಹುದಷ್ಟೆ?

ನಟ:—ಅದನ್ನು ಬಿಟ್ಟರೆ, ಮತ್ತಾವುದು ಈ ವೇಳೆಯಲ್ಲಿ ಇವರ ಮನೋರಂಜನವನ್ನುಂಟು ಮಾಡುವದು?

ಸೂತ್ರ:—ಆದರೆ, ನೋಡು; ನಮ್ಮ ಇಂದಿನ ಅಭಿನಯವು ಕೇವಲ ಮನೋರಂಜನ ಮಾತ್ರವೇ ಆಗಿರಬಾರದು. ಇದರಿಂದ ಕವಿಯ ಸಂದೇಶ, ನಾಟಕಯುಗ ಕಲ್ಪನೆಯನ್ನುಂಟು ಮಾಡಿದ ಮಹಾತ್ಮರ ಸಂಕಲ್ಪ, ಇವೆರಡೂ ಸಾಫಲ್ಯಹೊಂದುವಂತೆ, ನೋಟಕರ ಮನಸ್ಸು ಸಾರಾಸಾರ ವಿಚಾರದಿಂದ ಉತ್ಸಾಹಶಕ್ತಿಯನ್ನು ಬಲಪಡಿಸಿಕೊಳ್ಳುವಂತಿರಬೇಕು.

ನಟ:—ಯುಕ್ತವಾಗಿದೆ. ಇನ್ನು ನಾಟ್ಯವರ್ಗದವರನ್ನು ಎಚ್ಚರಿಸಬಹುದಷ್ಟೆ; ಹೇಗೆ?

ಸೂತ್ರ:—ನಿಜ! ನಮ್ಮ ನಾಟ್ಯವರ್ಗದವರನ್ನು ಈ ರೀತಿಯಾಗಿ ಎಚ್ಚರಿಸಬೇಕು.—"ರಂಗಸ್ಥಳದಲ್ಲಿ ಅತಿಯಾದ ಹಾವ-ಭಾವ-ವಿಲಾಸಗಳನ್ನು ತೋರ್ಪಡಿಸಬಾರದು; ಶೃಂಗಾರವೇ ಪ್ರಧಾನರಸವೆಂದು ಹೇಳುತ್ತ ವಿರಹ-ವಿಹಾರ-ಸಂಭೋಗಗಳೇ ಮೊದಲಾದ ಹೇಯ ನಟನೆಗಳಿಂದ ನೋಟಕರ ಮನಸ್ಸನ್ನು ವಿಕಾರಕ್ಕೆ ಗುರಿಪಡಿಸುವಂತೆ ಮಾಡುವುದು ನಮ್ಮವರ ಕರ್ತವ್ಯಕ್ಕೆ ವಿರೋಧವು. ಇಲ್ಲಿ ನೆರೆದಿರತಕ್ಕವರಲ್ಲಿ ಅರಿವಿಲ್ಲದ ಬಾಲಕ ಬಾಲಿಕೆಯರೂ, ಅರಿತುದನ್ನು ಬಲಪಡಿಸಲು ಇನ್ನೂ ಸಾಹಸಪಡುತ್ತಿರುವ ತರುಣ ವಿದ್ಯಾಭ್ಯರ್ಥಿಗಳೂ ಸೇರಿರುವುದರಿಂದ ಇಂತವರಲ್ಲಿ ಕಾಮ, ಮೋಹ, ಮದ, ಮಾತ್ಸರ್ಯಗಳೆಂಬ ದುಷ್ಟಗುಣಗಳುಂಟಾಗುವಂತೆ ಮಾಡುವ ಅಭಿನಯವು ನಮಗೆ ತಕ್ಕುದಲ್ಲ. ನಮ್ಮ ಅಭಿನಯವು ಕವಿಗಳ ನಿಜವಾದ ಉದ್ದೇಶವೇನೆಂಬುದನ್ನು ಮಾತ್ರವೇ ತೋರಿಸುವಂತಿರಬೇಕಲ್ಲದೆ, ಅವರ ಉದ್ದೇಶ, ಕಥಾಸ್ವಾರಸ್ಯಗಳನ್ನು ಕೆಡಿಸಿ, ಅತಿಯಾದ,--ಅಸಹ್ಯಕರವಾದ,--ನರ್ತನೆಗಳಿಂದ ವಿಷಯಗಳನ್ನು ಹೊಲಗೆಡಿಸುವಂತಿರಬಾರದು. ಯಾವಾಗಲೂ, ಹೇಗೂ, ನಿಯಮವನ್ನು ಮೀರಿ ನಡೆಯದೆ, ಮಿತ

ವಾಗಿಯೂ, ಹಿತಕರವಾಗಿಯೂ, ಅರ್ಥವತ್ತಾಗಿಯೂ ಇರುವಂತೆ ವಿಷಯಸ್ವರೂಪವನ್ನು ಪ್ರದರ್ಶಿಸುವುದೇ ನಮ್ಮ ನಾಟಕಸಂಘದವರ ಮುಖ್ಯೋದ್ದೇಶವಾಗಿರಬೇಕು. ಅಲ್ಲದೆ, ನಮ್ಮಲ್ಲಿ ದ್ವೇಷಾಸೂಯೆಗಳಿಗೆ ಕಾರಣಗಳಾದ ಮತದೂಷಣೆಯೇ ಮೊದಲಾದ ಪರುಷಭಾಷಣವಿರಬಾರದು. ಸಕಲ ಜನಾಂಗಕ್ಕೂ ಮುಖ್ಯವಾಗಿರುವ ಮತವನ್ನೇ-- ಎಂದರೆ, ಸತ್ಯದ ಘನತೆಯೊಂದನ್ನೇ ನಮ್ಮ ಏಕನಿಷ್ಠೆಯಲ್ಲಿರಿಸಿ, ಭಕ್ತಿ, ವಿನಯ, ವಿವೇಚನೆ, ಮನೋನಿಗ್ರಹ-ಸಾಧನ ಬಲಗಳನ್ನು ಪ್ರಕಾಶಪಡಿಸುವ ವಸ್ತುಸ್ಥಿತಿ ನಿರೂಪಣವು ಕಾಲೋಚಿತವಾಗಿ ಪ್ರದರ್ಶಿಸಲ್ಪಡಬೇಕು. ನಮ್ಮ ಬಾಲಕ-ಬಾಲಿಕೆಯರು, ವಿದ್ಯಾಭ್ಯಾಸ-ಗುರುಕುಲವಾಸಗಳಿಂದ ಜಿತಚಿತ್ತರಾಗಿ, ದೇಶಸೇವಕರೆನ್ನಿಸುವಂತೆ ಮಾಡುವ ಹಿತೇಚ್ಛೆಯು, ನಮ್ಮೆಲ್ಲರ ಅಂತರಂಗದಲ್ಲಿಯೂ ಬಲವಾಗಿರಬೇಕು. ಇದಿಲ್ಲವಾದರೆ, ನಮ್ಮ ಪ್ರಯತ್ನವೂ, ಉದ್ದೇಶವೂ, ಶ್ರಮವೂ ಸಾರ್ಥಕವೆನ್ನಿಸಲಾರವು. ಅಂತಹದರಿಂದ ನಮ್ಮ ದೇಶದ ಅಭಿವೃದ್ಧಿಗೆ ಆತಂಕವನ್ನೇ ತಂದೊಡ್ಡಿದಂತಾದೀತು. ಇದನ್ನು ತಿಳಿಯಲೊಲ್ಲದೆ, ಬರಿಯ ಪಾಮರ ಮನೋರಂಜನೆಯನ್ನು ಉಂಟುಮಾಡುತ್ತಿರುವುದರಿಂದಲೇ ನಮ್ಮ ನಾಟಕವರ್ಗದವರು ಬಹುಜನರ ಅಪನಿಂದೆಗೆ ತುತ್ತಾಗಿ ಹೋಗುತ್ತಿರುವರು. ಯಾರ ಬಾಯಲ್ಲಿ ನೋಡಿದರೂ ನಾಟಕಾವಲೋಕನದಿಂದ ಮನಸ್ಸು ವಿಷಯಾತುರದಲ್ಲಿ ಬಲಿ ಬೀಳುವುದೆಂಬ ನಿಂದೆಯೇ ಹೊರಹೊರಡುವಂತಾಗಿರುವುದು. ಇದು ಸಾಲದುದಕ್ಕೆ ಪಾಶ್ಚಾತ್ಯನಾಗರಿಕತೆಯೆಂಬದೊಂದು ಬೇರೆ ಮುಂದೆ ಬಂದು, ಪಾತ್ರಾಪಾತ್ರವನ್ನೂ, ವ್ಯಕ್ತಿ-ಸ್ವಭಾವ-ಧರ್ಮಗಳನ್ನೂ ನೋಡದೆ ಮನಬಂದಂತೆ ಕುಣಿದಾಡುತ್ತಿರುವದು,-ನಮ್ಮ ನಾಟಕಸಂಘಕ್ಕೂ-ನಾಟಕಯುಗವನ್ನು ನಿರ್ಮಿಸಿದ ಮಹನೀಯರಿಗೂ ಕಲಂಕವನ್ನೇ ಹೊರೆಯಿಸುವಂತಾಗಿ ತಿರುಗಿದೆ. ಇನ್ನು ಮುಂದೆಯಾದರೂ ನಾವು ಕಣ್ದೆರೆದು ನೋಡದೆ, ನಮ್ಮ ಆರ್ಯಧರ್ಮವನ್ನು ವಿಚಾರವಿಮರ್ಶೆಯಿಂದ ಪ್ರಸಾರಕ್ಕೆ

ತರದೆ ಕೇವಲ ಕ್ಷಣಿಕವಿಷಯಗಳಲ್ಲಿಯೇ ಬೆರೆದು, ಮೆರೆದೆವಾದರೆ, ನಮಗೆ ಎಂದಿಗೂ ಅಪಕೀರ್ತಿಯು ತಪ್ಪುವದಿಲ್ಲ."

ನಟರಾಜ:—ಆರ್ಯ! ಹಿತಸೂಚನೆಗಳನ್ನು ಶಿರಸಾವಹಿಸಿದೆನು. ಇನ್ನೂ ಉಳಿದಿರಬಹುದಾದ ಸೂಚನೆಗಳಿದ್ದರೆ, ನಿರೂಪಿಸಬೇಕು.

ಸೂತ್ರ:— ಅಯ್ಯಾ, ನಟರಾಜ! ಮೇಲೆ ಹೇಳಿದ ವಿಚಾರಗಳೆಲ್ಲವೂ ನಿನ್ನ ಸ್ಮೃತಿಪಥದಲ್ಲಿ ದೃಢವಾಗಿರಲಿ. ನಾವು ಈಗ ತೋರಬೇಕಾದ ಪ್ರದರ್ಶನವು, ಮಕ್ಕಳು ಮುಂದೆ ಮುಂದಿಗಳಾಗುವಂತೆ ಮಾಡಬೇಕೆಂಬ ಉದ್ದೇಶವಾಗಿರುವದು; ಇದಕ್ಕಾಗಿ ಬಾಲ್ಯಸುಶಿಕ್ಷಣ, ಪ್ರೌಢಶಿಕ್ಷಣಗಳಲ್ಲಿ ಅವರ ಮನೋಧರ್ಮವು ಎಂತಹದಾಗಿರಬೇಕೆಂಬುದನ್ನು ಬಹು ಜಾಗರೂಕತೆಯಿಂದ ತೋರಿಸಬೇಕು.

ನಟ:— ಹೇಗೆಂಬುದನ್ನೂ ನಿರೂಪಿಸಬೇಕು.

ಸೂತ್ರ:— ಹೇಗೆಂದರೆ-ನಾವು ತೋರುವ ಉದಾಹರಣೆಯಲ್ಲಿ ಪ್ರಧಾನಪಾತ್ರದ ಸ್ವಭಾವ, ಧರ್ಮ, ಧ್ಯೇಯಗಳೆಂತಹವೆಂಬುದನ್ನು ತಿಳಿದು, ಅದಕ್ಕನುಗುಣವಾದ ವೇಷ-ಭಾಷೆಗಳನ್ನು ಕಾಲಕ್ಕೆ ತಕ್ಕಂತೆ ಉಪಯೋಗಿಸಬೇಕು. ಅಲ್ಲದೆ, ನಾಟ್ಯವರ್ಗದವರು ಮದ್ಯವೇ ಮೊದಲಾದ ಮಾದಕ ದ್ರವ್ಯವನ್ನು ಖಂಡಿತವಾಗಿಯೂ ಸೇವಿಸಕೂಡದೆಂದು ಕಟ್ಟುಮಾಡಬೇಕು. ಏಕೆಂದರೆ-ಮಾದಕದ್ರವ್ಯಸೇವನೆಯಿಂದ ಅದರಲ್ಲಿ ತಾರತಮ್ಯ ಜ್ಞಾನವೂ, ಜ್ಞಾಪಕಶಕ್ತಿಯೂ ತಪ್ಪಿಹೋಗಿ, ಬುದ್ಧಿ ನಷ್ಟವಾಗುವದು. ಅದರಿಂದ ಅವರು ಅಕ್ರಮದಿಂದ ಅಭಾಸವನ್ನೇ ಉಂಟುಮಾಡುವರು. ಹಾಗಾಗದಂತೆ ನೋಡಿಕೊಳ್ಳಬೇಕೆಂಬುದೇ ನನ್ನ ಹಿತಸೂಚನೆಯಾಗಿದೆ.

ನಟ:— ಆದರೆ, ನಾಟ್ಯವರ್ಗದವರು ರಾತ್ರಿಯೆಲ್ಲ ನಿದ್ದೆಗೆಟ್ಟು, ಕೂಗಿ ಕೂಗಿ ಕಂಠಶೋಷಣ ಮಾಡಿಕೊಳ್ಳಬೇಕಾಗಿರುವುದು. ಅದಕ್ಕಾಗಿ ಅಷ್ಟು ಆಯಾಸವುಂಟಾಗದಿರಬೇಕೆಂದು ಮಾದಕದ್ರವ್ಯವನ್ನು ಸೇವಿಸುವುದೇ ಅವರಿಗೆ ವಾಡಿಕೆಯಾಗಿ ಬಂದಿರುವುದು. ಅದನ್ನು

ಹೇಗೆ ತಪ್ಪಿಸುವುದು?

ಸೂತ್ರ:— ನಟರಾಜ! ಅದನ್ನು ಯಾರೇ ಆಗಲಿ ಹತ್ತಿರಕ್ಕಾದರೂ ಸೇರಿಸುವುದು ಸರಿಯಲ್ಲ. ಮದ್ಯಸೇವನೆಯಿಂದ ಅವರ ಮಿದುಳಿನಲ್ಲಿ ಮತ್ತು ಅವರ ಹೃತ್ಕೋಶದಲ್ಲಿರುವ ಸ್ನಿಗ್ಧರಸವೇ ಮಾಯವಾಗಿ, ಅನೇಕ ದುರ್ವಿಷಯಗಳು ಅಂಕುರವಾಗುವುವು. ದೇಶಹಿತೈಷಿಗಳು ಅಂತಹ ತಾಮಸವೃತ್ತಿಯನ್ನು ಹಿಡಿಯದೆ, ಯಾವಾಗಲೂ ಸಾತ್ವಿಕವೃತ್ತಿಯನ್ನೇ ಅವಲಂಬಿಸಬೇಕು. ಸಾತ್ವಿಕವೃತ್ತಿಗೆ ಸಾತ್ವಿಕಾಹಾರವೇ ಬೇಕು. ದುರಾಹಾರ, ಅಪೇಯಪಾನ, ದುರ್ವಿಷಯಚಿಂತನೆಗಳು ಸರ್ವಥಾ ಕೂಡದು

ನಟ:— ಹಾಗಾದರೆ, ಅವರ ಮನೋಲ್ಲಾಸಕ್ಕೂ, ಶಕ್ತಿವೃದ್ಧಿಗೂ, ಸ್ವರೋತ್ತೇಜನಕ್ಕೂ ಯಾವ ಅನುಪಾನವನ್ನು ವಿಧಿಸಬೇಕು?

ಸೂತ್ರ:— ನಟರಾಜ! ಕೇಳು. ನಮ್ಮ ಪೂರ್ವಜರು ಯಾವ ಸೂತ್ರವನ್ನು ಮುಂದಿಟ್ಟುಕೊಂಡು ನಡೆಯುತ್ತಿದ್ದರೋ, ಅದನ್ನೇ ನಾವೂ ಅನುಸರಿಸಬೇಕಲ್ಲದೆ, ನಮ್ಮ ಜನ್ಮಭೂಮಿಗೂ, ದೇಹಧರ್ಮಕ್ಕೂ ಮತ್ತು ನಮ್ಮ ಮತಾಚಾರ–ಪೂರ್ವಸಂಪ್ರದಾಯಗಳಿಗೂ ಹಾನಿಯನ್ನುಂಟುಮಾಡುವ ಪಾಶ್ಚಾತ್ಯ ಪದ್ಧತಿಯನ್ನು ಹಿಡಿಯುವುದು ಸರಿಯಲ್ಲ. ಹಾಗೆ ನಮ್ಮ ನಾಟ್ಯವರ್ಗದವರು ಸೇವಿಸಬೇಕಾದರೆ, ಸಕ್ಕರೆ-ಕೇಸರಿಗಳಿಂದ ಕೂಡಿದ ಗೋಕ್ಷೀರವನ್ನೇ ಸೇವಿಸಲಿ. ಗೋಕ್ಷೀರಕ್ಕೂ ಮಿಗಿಲಾದ ಪಾನವೂ, ಆಹಾರವೂ ಮತ್ತೊಂದಿರುವದಿಲ್ಲ. ಆದರಿಂದ ಎಳೆಮಿದುಳಿಗೆ ಮತ್ತಷ್ಟು ರಸವಿಷಯವಿಜ್ಞಾನವು ಸ್ಫುರಿಸುವದಲ್ಲದೆ, ಮನಸ್ಸು ಶಾಂತಸ್ಥಿತಿಯಲ್ಲಿದ್ದು, ಪ್ರತಿಯೊಂದು ಕೆಲಸವನ್ನೂ ಜಾಗರೂಕತೆಯಿಂದ ನಿರ್ವಹಿಸಿ, ಸತ್ಸಹವಾಸ-ಸಾರಾಸಾರ ವಿಚಾರಗಳಿಂದ ಅರ್ಥಸಿದ್ಧಿ ಹೊಂದುವಂತೆ ಮಾಡುವುದು.

ತೆರೆಯಲ್ಲಿ: " ಸಾಧು! ಭರತಾಚಾರ್ಯನೆ! ಸಾಧುಸಾಧು!! ನಿನ್ನೀ ಉಪದೇಶಾಮೃತವರ್ಷವು ಸಕಲ ಜನಾಂಗಕ್ಕೂ ಜ್ಞಾನವನ್ನುಂಟುಮಾಡುವುದಾಗಿದ್ದರೆ, ಆಗ

ಲೀಗ ನಿನ್ನ ಪ್ರಯತ್ನವು ಸಾಧು.”

ನಟಿ:—(ವಿಸ್ಮಯದಿಂದ ತೆರೆಯಕಡೆ ತಿರುಗಿ) ‘ಆರ್ಯ! ಅದಾರು? ಸಾಧುವಾದನ ಮಾಡುತ್ತ ಈ ಕಡೆಯೇ ಬರುತ್ತಿರುವರು?’

ಸೂತ್ರ:—(ತೆರೆಯಕಡೆ ನೋಡಿ ಸಂಭ್ರಮದಿಂದ) ‘ನಟರಾಜ! ಈತನೇ ಸ್ವರ್ಣನಗರಿಗೆ ಒಡೆಯನಾದ ಶ್ರೀಮಂತರಾಯನ ಸಚಿವನೂ, ಹಿತಚಿಂತಕನೂ, ನ್ಯಾಯಮೂರ್ತಿಯೂ ಆದ ‘ಕ್ಷೇಮದರ್ಶಿ’ ನಾಮಕ ಸುಬ್ರಾಹ್ಮಣನು. ಈತನು ರಮಾನಂದ ಕುಮಾರನ ಅಭ್ಯುದಯಾಕಾಂಕ್ಷಿಯಾಗಿ, ವಿದ್ಯಾವಾಗೀಶ ಮಹಾಮಹೋಪಾಧ್ಯಾಯರ ಬಳಿಗೆ ಬರುತ್ತಿರುವನು. ಇನ್ನು ನಾವಿಲ್ಲಿ ವಿಳಂಬಿಸುವುದು ಸರಿಯಲ್ಲ. ಮುಂದಿನ ಪಾತ್ರಗಳನ್ನು ಸಿದ್ಧಪಡಿಸುವಾ ನಡೆ.’ (ಇಬ್ಬರೂ ತೆರಳುವರು.)

ಇದು ಪ್ರಸ್ತಾವನೆ.

॥ ಶ್ರೀ ॥

# ಪ್ರಥಮಾಂಕ ಪ್ರಾರಂಭ.

( ಕ್ಷೇಮದರ್ಶಿಯ ಪ್ರವೇಶ. )

ಕ್ಷೇಮ:— ( ಮೇಲೆ ನೋಡಿ ) ತ್ರಿಕಾಲವಂದ್ಯನಾದ ಭಗವಾನ್ ದಿನನಾಥನಿಗೆ ವಂದನೆ. ( ಸಭೆಯ ಕಡೆಗೆ ತಿರುಗಿ ) ಲೋಕದಲ್ಲಿ ಪ್ರತಿ ಮಾನವನ ಉನ್ನತಿಗೂ, ಅವನತಿಗೂ ಸಹವಾಸವೇ ಕಾರಣವೆನ್ನ ಬೇಕು. ಸಹವಾಸವು ಸರಿಯಾಗಿಲ್ಲದಿದ್ದರೆ, ಸತ್ಕುಲದಲ್ಲಿ ಹುಟ್ಟಿದ ಮಾತ್ರದಿಂದ ಉನ್ನತಿಯನ್ನು ಪಡೆಯಲಾರನು. ಇದಕ್ಕೆ ಉದಾಹರ ಣೆಗೆಂದರೆ ನಮ್ಮ ಶ್ರೀಮಂತನ ಕುಮಾರರೀರ್ವರ ವಿಚಾರವನ್ನು ತೆಗೆದು ಕೊಂಡರೆ ಸಾಕಾಗಿದೆ. ಆದರೆ, ಸುಜನರ ಸಹವಾಸವನ್ನು ಹೊಂದು ವುದಕ್ಕೆ ಬಾಲ್ಯ ಸುಶಿಕ್ಷಣೆ ಸಹಕಾರಿಯಾಗುವುದೆಂದರೆ ತಪ್ಪಾಗದು. ಅದಿಲ್ಲವಾದರೆ ಪಾತ್ರಸ್ವರೂಪಜ್ಞಾನವೂ, ಅದರಿಂದಾಗುವ ಫಲಾನು ಭವವೂ ಅವರ ಮನಸ್ಸಿಗೆ ಹೊಳೆಯಲಾರವು. ಈ ವಿಚಾರದಲ್ಲಿ ತಾಯ್ತಂದೆಗಳೂ, ಪೋಷಕರೂ ಅಥವಾ ಗುರುಜನರೂ ಬಹು ಜಾಗರೂಕರಾಗಿರಬೇಕಾದುದು ಅತ್ಯಾವಶ್ಯಕವು. ( ಕೆಲವು ಹೊತ್ತು ಸುಮ್ಮನಿದ್ದು ಬಳಿಕ ಎಚ್ಚತ್ತು ) ಏನಿದು ! ಸಹವಾಸದ ಫಲಾನುಭವದ ವಿಚಾರವನ್ನು ವಿಮರ್ಶಿಸುತ್ತ, ನಾನು ಬಂದಕೆಲಸವನ್ನೇ ಮರೆತಿದ್ದೆನು. ಈಗಾಗಲೇ ಬಿಸಲೇರುತ್ತ ಬರುತ್ತಲಿದೆ. ಇನ್ನು ತಡಮಾಡಿದರೆ ನನಗೆ ಮಹೋಪಾಧ್ಯಾಯರ ದರ್ಶನವು ದುರ್ಲಭವಾದೀತು. ನಾನಿನ್ನು ಹೊರಡುವೆನು. (ಹೊರಡುವನು)

ಸ್ಥಾನ ೧:— ವಿದ್ಯಾಪಾಗೀಶವ ಆಹ್ನಿಕ ಸ್ಥಳ.

( ಕ್ಷೇಮದರ್ಶಿಯು ಪ್ರವೇಶಿಸಿ, ಮುಂದೆ ಬಗ್ಗಿನೋಡಿ ) ಆಹಾ! ಇದ ಲ್ಲವೆ, ಪೂಜ್ಯರ ವಿದ್ಯಾಭವನವು? ( ಮುಂದಕ್ಕಡಿಯಿಟ್ಟು ನೋಡಿ )

ಪೂಜ್ಯರಾದ ಮಹೋಪಾಧ್ಯಾಯರು ಧ್ಯಾನಾಸಕ್ತರಾಗಿ ಇಲ್ಲಿಯೇ ಕುಳ್ಳಿರುವರು. ಅಬ್ಬ, ಎಂತಹ ತೇಜಸ್ಸು! ಎಷ್ಟರ ಶಾಂತತೆ!! ಎಷ್ಟು ಗಾಂಭೀರ್ಯ!!! ಸಾಧು, ಪುಣ್ಯಪುರುಷ! ಸಾಧು ಸಾಧು!! ವಿದ್ಯಾವಾಗೀಶ ನಾಮದಿಂದ ಮಾನವಜನ್ಮವನ್ನೆತ್ತಿರುವ ಸಾಕ್ಷಾತ್ ಸರಸ್ವತಿಯೇ ಈ ಮೂರ್ತಿಯಲ್ಲವೇ? ನಿಜ! ನಿಜ!! ನಿಜ!!! ಈಗ ತಿಳಿದೆನು.

ಇದು ಲಕ್ಷ್ಮೀಸ್ಥಾನವಾಪಜ್ಜಲಧಿಗಿದು ಮಹಾಯಾನಪಾತ್ರಂ ನಿಯೋಗ ।
ಕ್ಕಿದು ಮುಖ್ಯಂ ಕದ್ದುಕೊಂಬಂಗರಿದು ಹೃದಯಸುಸ್ಥಾಯಿ ತಾಂ ಸರ್ವಧರ್ಮ ॥
ಕ್ಕಿದು ಮೂಲಂ ರಾಜವಶ್ಯಕ್ಕಿದು ಗುರುಪದಮುತ್ತುಂಗ ಮಾಂಗಲ್ಯಕಾರ್ಯ ।
ಕ್ಕಿದು ಮೂಲಸ್ಥಂಭವಾದತ್ತಿಳೆಗೆ ಮಿಗಿಲು ವಿದ್ಯಾಧನಂ ಸಾರಮತ್ತೆ ॥

(ಪದ್ಯಸಾರ)

ಎಂಬ ಕವಿವಚನದಂತೆ ಸರ್ವಾರ್ಥಸಿದ್ಧಿಪ್ರದಸ್ತುವಾದ ವಿದ್ಯೆಯು ಇಲ್ಲಿಯೇ ಸಾಕ್ಷಾತ್ಕರಿಸಬೇಕಲ್ಲದೆ ಮತ್ತೆಲ್ಲಿಯೂ ಇಲ್ಲ. ದರ್ಶನಮಾತ್ರದಿಂದಲೇ ಮನೋಲ್ಲಾಸವನ್ನುಂಟುಮಾಡುತ್ತಿರುವ ಈ ಪುಣ್ಯಮೂರ್ತಿಯಲ್ಲಿ ಗುರುಕುಲ ವಾಸಮಾಡಿ, ವಿದ್ಯಾಲಾಭವನ್ನು ಹೊಂದುವುದಾದರೆ, ನಮ್ಮ ಕುಮಾರನ ಅದೃಷ್ಟಕ್ಕೆ ತುದಿಮೊದಲೇ ಇಲ್ಲವೆನ್ನಬೇಕು. ಇರಲಿ; ಇನ್ನು ಕಾಣಿಸಿಕೊಳ್ಳುವೆನು. (ಮುಂದೆ ಬಂದು ವಿನೀತನಾಗಿ) ಸಾಧುವರೇಣ್ಯ! ಪಾದಸನ್ನಿಧಿಯಲ್ಲಿ ಆಶ್ರಿತನಾದ ಕ್ಷೇಮದರ್ಶಿ ನಾಮಕ ದ್ವಿಜನು ನಮಸ್ಕರಿಸುವನು. (ವಂದಿಸುವನು)

ವಿದ್ಯಾ:— (ಕಣ್ದೆರೆದುನೋಡಿ ಪ್ರಸನ್ನತೆಯಿಂದ) 'ಶ್ರೇಯೋಸ್ತು; ಸುಬ್ರಾಹ್ಮಣ! ಕುಳಿತುಕೋ'

ಕ್ಷೇಮ:— (ಕುಳಿತು ವಿನಯದಿಂದ) 'ಅನುಗೃಹೀತನಾದೆನು.'

ವಿದ್ಯಾ— ಬಂದುದೇನು ?

ಕ್ಷೇಮ:— ಶ್ರೀಮಂತನ ಆಜ್ಞಾನುವರ್ತಿಯಾಗಿ ಬಂದಿರುವೆನು.

ವಿದ್ಯಾ:- ಉದ್ದೇಶವೇನು ?

ಕ್ಷೇಮ:— " ಮಕ್ಕಳಿಗೆ ತಂದೆ ಬಾಲ್ಯದೊಳಕ್ಕರ ವಿದ್ಯೆಗಳನರುಪದಿರ್ದೊಡೆ ಕೊಂದಂ " ಎಂಬ ನಾಣ್ಣುಡಿಯುಂಟಷ್ಟೆ?

ವಿದ್ಯಾ:— ಮತ್ತೇನು ?

ಕ್ಷೇಮ:— ಶ್ರೀಮಂತನಿಗೆ ರಮಾನಂದನೆಂಬ ಕುಮಾರನಿರುವನು.

ವಿದ್ಯಾ:— (ತಲೆದೂಗಿ) ಅಭಿಪ್ರಾಯವಾಯಿತು. ಸಂತೋಷ !

ಕ್ಷೇಮ:— ಹಾಗಿದ್ದರೆ, ದರ್ಶನಾಕಾಂಕ್ಷಿಯಾಗಿರುವ ಶ್ರೀಮಂತನಲ್ಲಿ ಅನುಗ್ರಹಿಸಬೇಕೆಂದು ಕೋರುವೆನು.

ವಿದ್ಯಾ:— ಅಗತ್ಯವಾಗಿಯೂ ಆಗಲಿ. ಮತ್ತೇನು ?

ಕ್ಷೇಮ:— ಆತುರನಾಗಿರುವ ಶ್ರೀಮಂತನಲ್ಲಿಗೆ ಹೊರಡಲು ಈಗಲೇ ಸುಮುಹೂರ್ತವಾಗಿದೆ.

ವಿದ್ಯಾ:— (ಎದ್ದುನಿಂತು) ಹಾಗಿದ್ದರೆ ಹೊರಡಬಹುದು; ನನ್ನ ತಡೆಯಿಲ್ಲ.

(ಕ್ಷೇಮದರ್ಶಿಯು ವಿದ್ಯಾವಾಗೀಶನೊಡನೆ ಹೊರಡುವನು.)

ಸ್ಥಾನ ೨:—**ಶ್ರೀಮಂತನ ಮಂತ್ರಾಲಯ.**

( ಮಂತ್ರಾಲಯದಲ್ಲಿ ಕರಣಿಕನೊಡನೆ ಶ್ರೀಮಂತನ ಪ್ರವೇಶ.)

ಶ್ರೀಮಂತ:— ಅಯ್ಯ, ವಿನಯಂಧರ! ಸಮಾಚಾರವೇನು?

ವಿನಯಂ:— ಮಹಾಸ್ವಾಮಿ ! ತಮ್ಮ ಮೈದುನರ ಪತ್ರವು ಬಂದಿದೆ.

ಶ್ರೀಮಂತ:— ವಿಚಾರವೇನಿರಬಹುದೋ ವಾಚಿಸು.

ವಿನಯಂ:— (ಕಾಗದವನ್ನು ಬಿಚ್ಚಿ ಓದುವನು.)

" ಪೂಜ್ಯರಾದ ಶ್ರೀಮಂತರ ಸಮ್ಮುಖದಲ್ಲಿ, ವಿಧೇಯನಾದ

ಸತ್ಯವ್ರತನು ವಂದನಾಪೂರ್ವಕವಾಗಿ ನಿವೇದಿಸುವುದೇನೆಂದರೆ:—

ತಮ್ಮ ಆಯುಷ್ಮಂತನಾದ ರವಿವರ್ಮನನ್ನು ತಮ್ಮ ನಿರೂಪದಂತೆಯೇ ಸರ್ವಪ್ರಯತ್ನದಿಂದಲೂ ಪರೀಕ್ಷಿಸಿದುದಾಯಿತು. ಈ ಕಾಲದ ಸೊಕ್ಕಿನ ಮಕ್ಕಳಲ್ಲಿ ಕಾಣುವ ಅವಿಚಾರ, ದುರಹಂಕಾರ, ಪರಸ್ವಾಪಹಾರ, ದುರಾಹಾರ, ವಿಹಾರಗಳೆಲ್ಲವೂ ತೋರಿಬಂದುವು. ಇದಕ್ಕೆ ಕಾರಣಗಳೇನೆಂದು ವಿಚಾರಮಾಡುವಲ್ಲಿ, ಸಹವಾಸವು ಸರಿಯಾಗಿಲ್ಲವೆಂದು ತಿಳಿದುಬಂದಿತು. ಇದಕ್ಕಾಗಿ ಪ್ರಯಾಸಪಟ್ಟು, ನಯಭಯದಿಂದ ಕುಮಾರನಿಗೆ ಬುದ್ಧಿಗಲಿಸಿ, ದುಸ್ಸಹವಾಸವನ್ನು ಬಿಡಿಸಿ, ಕೇವಲ ಮನೆಯವರೊಡನೆ ಮಾತ್ರವೇ ವ್ಯಾಸಂಗಿಸುವಂತೆ ಮಾಡಿರುವುದು. ಈ ವರೆಗೆ ಅವಿಧೇಯನಾಗಿದ್ದವನು, ಈಗೀಗ ವಿನಯವನ್ನು ಅಭ್ಯಾಸಕ್ಕೆ ತರುತ್ತಿರುವುದರಿಂದ ಮುಂದೆಯಾದರೂ ಸುಸ್ಥಿತಿಗೆ ಬಂದಾನೆಂಬ ಆಶಾಂಕುರವುಂಟಾಗಿದೆ. ಆದುದರಿಂದ ಈ ವೇಳೆಯಲ್ಲಿ ಅವನ ಮನಸ್ಸು ಪರಿಪಕ್ವ ಹೊಂದುವಂತೆ, ನಯಮಾರ್ಗದಲ್ಲಿಯೇ, ನೀತಿಬೋಧೆಗಳನ್ನು ತಮ್ಮ ಸ್ವಹಸ್ತಾಕ್ಷರದಿಂದಲೇ ಬರೆದು ಕಳುಹುತ್ತಿರಬೇಕೆಂದು ಕೋರುತ್ತಿರುವೆನು. ಈ ವಿಚಾರವನ್ನು ನನ್ನ ಪೂಜ್ಯಭಗಿನಿಗೆ ನಿವೇದಿಸಬೇಕಲ್ಲದೆ, ರವಿವರ್ಮನನ್ನು ಬಾಲ್ಯದಿಂದ ಮುದ್ದಿಸಿ, ಬೆಳೆಸಿದುದಕ್ಕೆ ಈಗ ಹೊಂದುತ್ತಿರುವ ಫಲವನ್ನು ನೆನಪಿನಲ್ಲಿಟ್ಟು, ರಮಾನಂದ ಕುಮಾರನ ಸುಶಿಕ್ಷಣದಲ್ಲಿಯಾದರೂ ವಿಶೇಷಗಮನವಿಡಬೇಕೆಂದೂ, ಆತನ ಶಿಷ್ಟಾಚಾರದ ಮಹಿಮೆಯಿಂದಲಾದರೂ ರವಿವರ್ಮನು ಸನ್ಮಾರ್ಗಗಾಮಿಯಾಗುವಂತೆ ಭಗವಂತನು ಅನುಗ್ರಹಿಸಬೇಕೆಂದೂ ಕೋರುತ್ತಿರುವೆನು.

ಇತಿ ನಿರಂತರ ವಿಧೇಯನಾದ

ಸತ್ಯವ್ರತ ''

ಶ್ರೀಮಂತ:— ಅಯ್ಯ! ಈ ವರೆಗೆ ಕುಶಲವಾರ್ತೆಯನ್ನೇ ಕೇಳದಿದ್ದ ನನಗೆ, ಇಂದು ಮಗನು ಒಳ್ಳೆಯ ದಾರಿಗೆ ಬರುವನೆಂಬ

ಸುದ್ದಿಯೂ ಸಂತೋಷಪ್ರದವೇ ಸರಿ. ಹೇಗಾದರೂ ಆತನು ದಾರಿಗೆ ಬಂದರೆ ಸಾಕಾಗಿದೆ.

ಕರಣಿಕ:— ಸ್ವಾಮಿ! ತಮ್ಮ ಪರಿಶುದ್ಧಾಂತ:ಕರಣದ ತಪೋಬಲದಿಂದ ಎಲ್ಲವೂ ಶುಭವೇ ಆಗುವುದು.

ತೆರೆಯಲ್ಲಿ—"ಇತ್ತ ಬರಬೇಕು. ಇಲ್ಲಿಯೇ ಶ್ರೀಮಂತನಿರುವುದು."

ಕರಣಿಕ:— (ತೆರೆಯ ಕಡೆಗೆ ನೋಡಿ) ಇದೊ ಇದೊ, ಉಪಾಧ್ಯಾಯರೊಡನೆ ಪ್ರಧಾನಿಯೇ ಬರುವಂತಿದೆ.

ಶ್ರೀಮಂತ:—' ಎಲ್ಲಿ ? ' (ಎಂದು ಸಂಭ್ರಮದಿಂದ ಎದ್ದು ನಿಲ್ಲುವನು)

(ಕ್ಷೇಮದರ್ಶಿಯೊಡನೆ ವಿದ್ಯಾವಾಗೀಶನ ಪ್ರವೇಶ.)

ಶ್ರೀಮಂತ:—(ಕೈಮುಗಿದು) ಪೂಜ್ಯರಿಗೆ ವಂದನೆ ! ಸುಖಾಸೀನರಾಗಿ ಅನುಗ್ರಹಿಸಬೇಕೆಂದು ಪ್ರಾರ್ಥನೆ.

ವಿದ್ಯಾ:— ಕಲ್ಯಾಣಮಸ್ತು; ಎಲ್ಲರೂ ಕುಳ್ಳಿರಿ.

(ಎಂದು ಎಲ್ಲರೊಡನೆ ಕುಳಿತುಕೊಳ್ಳುವನು.)

ಶ್ರೀಮಂತ:— ಪೂಜ್ಯರೆ! ಸತ್ಪುರುಷರ ಸಂಗತಿಗೂ ಹೆಚ್ಚಾದ ತಪೋಶಕ್ತಿಯಿಲ್ಲವಾದುದರಿಂದ, ತಮ್ಮ ಇಂದಿನ ದರ್ಶನ-ಸಂಭಾಷಣಾದಿಗಳಿಂದ ನಾನೇ ಕೃತಾರ್ಥನಾದೆನೆಂದು ಭಾವಿಸುತ್ತೇನೆ.

ವಿದ್ಯಾ:— ಸಂತೋಷ; ಕರೆಯಿಸಿದ ಉದ್ದೇಶವೇನು ?

ಶ್ರೀಮಂತ:— ನನ್ನ ದ್ವಿತೀಯ ಪುತ್ರ, ರಮಾನಂದ ಕುಮಾರನನ್ನು ಪ್ರೌಢಶಿಕ್ಷಣಕ್ಕೆಂದು ತಮ್ಮ ವಶಪಡಿಸುವ ಸಂಕಲ್ಪ.

ವಿದ್ಯಾ:— ಕುಮಾರನ ವಯಸ್ಸು?

ಶ್ರೀಮಂತ:— ಹದಿನಾರು.

ವಿದ್ಯಾ:— ಈ ವರೆಗೆ ಆಗಿರುವ ವ್ಯಾಸಂಗ?

ಶ್ರೀಮಂತ:— ಜ್ಞಾನೋತ್ಪತ್ತಿಯಾಗುವವರೆಗೆ, ಎಂದರೆ ಪ್ರಾಥಮಿಕ ಶಿಕ್ಷಣಾಭಾಗವೆಲ್ಲವೂ ಕ್ರಮವಾಗಿ ನಡೆದಿರುವುದು.

ವಿದ್ಯಾ:— ಶಿಕ್ಷಿತ ಸ್ಥಲವೊ!

ಶ್ರೀಮಂತ:— ಬಾಲ್ಯಶಿಕ್ಷಣವು ಎಂದರೆ-ಕುಮಾರನ ೭-೮ ವರ್ಷಗಳ ವರೆಗೆ ತಾಯಿಯ ಸುಶಿಕ್ಷಣೆಯೊಂದೇ ನಡೆಯುತ್ತಿದ್ದು, ಅಲ್ಲಿಂದೀಚೆಗೆ ನಮ್ಮ ಕ್ಷೇಮದರ್ಶಿಯ ಶಿಕ್ಷಣೆಯೂ, ನಮ್ಮಿಬ್ಬರ ವಿಚಾರಣೆಯೂ ನಡೆದಿರುತ್ತವೆ.

ವಿದ್ಯಾ:— ಹಾಗಿದ್ದರೆಯೇ ಮಕ್ಕಳು ಮುಂದಿಗಳಾಗುವರು. ಇಲ್ಲವಾದರೆ, ಅವರ ಮೂರ್ಖರೋಗಕ್ಕೆ ಮದ್ದೇ ಇಲ್ಲವಾಗುವದು.

ಶ್ರೀಮಂತ:—(ನಿಟ್ಟುಸಿರಿಟ್ಟು) ನನ್ನ ಜೇಷ್ಠಪುತ್ರನು ಈ ಬಗೆಯ ಶಿಕ್ಷಣೆಗೆ ಒಳಪಡದಿದ್ದುದರಿಂದಲೇ ಅವಿಧೇಯನಾಗಿ ಕೆಡುತ್ತಿರುವುದು.

ವಿದ್ಯಾ:— ಅದು ಅವನ ತಪ್ಪೇನೂ ಅಲ್ಲ. ಮಕ್ಕಳ ದುರ್ವೃತ್ತಿಗೆ ತಾಯ್ತಂದೆಗಳ ಅಥವಾ ಇತರ ಮುಖ್ಯ ಪೋಷಕರ ಅತಿಯಾದ ಲಾಲನೆ, ಅವಿಚಾರಗಳೇ ಕಾರಣಗಳು. ಇದಕ್ಕಾಗಿಯೇ " ಸುತ ಕೆಡಗು, ಲಾಲನೆಗಳಲಿ " ಎಂಬ ರೂಢಿವಚನವಿರುವುದು.

ಶ್ರೀಮಂತ:— ನಿಜ! ಆಗ ನಮ್ಮ ಅಭಿಮಾನದಿಂದ ಬೆಳೆಯಿಸಿದ ಫಲವು, ಈಗ ಅನುಭವಿಸುವುದಕ್ಕೆ ಕಷ್ಟವಾಗಿದೆ. ಏನು ಮಾಡುವ? ಅವನನ್ನೂ ಇಲ್ಲಿಗೆ ಕರೆಯಿಸಿಕೊಳ್ಳಬೇಕೆಂದು ಯೋಚಿಸಿದ್ದೇನೆ.

ವಿದ್ಯಾ:— ಆಗಲಿ, ಸುಕುಮಾರ ರಮಾನಂದನನ್ನು ಬರಮಾಡಬಹುದಷ್ಟೆ!

(ಶ್ರೀಮಂತ-- ಕರಣಿಕನ ಮುಖವನ್ನು ನೋಡುವನು. ಕರಣಿಕನು ಎದ್ದುಹೋಗಿ, ಮತ್ತೆ ಕುಮಾರನೊಡನೆ ಪ್ರವೇಶಿಸುವನು.)

ರಮಾನಂದ:— (ಮುಂದೆ ಬಂದು ಶ್ರೀಮಂತನ ಬಳಿಯಲ್ಲಿ ನಿಂದು,-- ವಿನೀತನಾಗಿ) ಪೂಜ್ಯರಿಗೆ ವಂದನೆ! ಅಪ್ಪಣೆಯೇನು?

ಶ್ರೀಮಂತ:— (ಸಂಭ್ರಮದಿಂದ ಮಗನ ಕೈಹಿಡಿದು) ' ಮಗುವೆ! ಕುಲಕ್ಕೆ ರಂಜನನೇ ಕುಮಾರನು ' ಎಂದು ಬಲ್ಲವರಾಡುವರು. ವಂಶವರ್ಧನನಾದ ಸುಪುತ್ರನೆನ್ನಿಸಬೇಕಾದರೆ, ಆತನಲ್ಲಿ ಪ್ರಜ್ಞೆಯು ಚೆನ್ನಾಗಿರಬೇಕು. ಅದೂ ವಿದ್ಯಾರ್ಜನೆಯಿಂದಲೇ ದೊರೆಯುತಕ್ಕುದು. ವಿದ್ಯೆ

ಯೆಂಬುದು ಸಾಮಾನ್ಯವಿಷಯವಲ್ಲ; ಅದರ ಪ್ರಭಾವವು ಅದ್ಭುತವು! ಹೇಗೆನ್ನುವೆಯೋ —

“ ಮಾತೇವರಕ್ಷತಿ, ಪಿತೇವ ಹಿತೇನಿಯುಙ್ಕ್ತೇ |
ಕಾಂತೇವಚಾಭಿರಮಯತ್ಯಪನೀಯಖೇದಂ ||
ಕೀರ್ತಿಂಚ ದಿಕ್ಷು ವಿಮಲಾಂ ವಿತನೋತಿಲಕ್ಷ್ಮೀಂ |
ಕಿಂ-ಕಿಂ-ನಸಾಧಯತಿ? ಕಲ್ಪಲತೇವ ವಿದ್ಯಾ || ” *

ಎಂದು ಸೂತ್ರವಿರುವುದರಿಂದ ಅಂತಹ ಕಲ್ಪಲತೆಯನ್ನು ಕೈವಶಪಡಿಸಿಕೊಳ್ಳಲು ಸದ್ಗುರುಸೇವೆಯನ್ನು ಮಾಡಬೇಕಾಗಿರುವುದು.

ರಮಾನಂದ:— ಶಿರಸಾವಹಿಸಿದೆನು.

ಶ್ರೀಮಂತ:— ಮಗುವೆ! ‘ಗುರುರ್ದೈವಂ ವಿದ್ಯಾರ್ಥಿಗೆ’ ಎಂದಿರುವದರಿಂದ ಇನ್ನು ಮುಂದೆ ನಿನಗೆ ಪರದೈವಸ್ವರೂಪವಾಗಿರುವ ಗುರುವರರೇ— ಇಲ್ಲಿ ಮಂಡಿಸಿರುವರು. ಇವರಿಗೆ ಭಕ್ತಿಪೂರ್ವಕವಾಗಿ ವಂದಿಸು.

ರಮಾನಂದ:— (ವಿನಯದಿಂದ ಬಂದು ವಿದ್ಯಾವಾಗೀಶನಿಗೆ ಕೈಮುಗಿಯುತ್ತ) ಪೂಜ್ಯರಿಗೆ ವಂದನೆ.

ವಿದ್ಯಾ:— (ಕೈಹಿಡಿದೆತ್ತಿ) ವತ್ಸ! ಯಶಸ್ವಿಯಾಗಿ ಬಾಳುವೆ.

ರಮಾನಂದ:— ಪೂಜ್ಯರೆ! ಅನುಗ್ರಹಬುದ್ಧಿಯು ಬಾಲಕನ ವಿಷಯದಲ್ಲಿ ಸ್ಥಿರವಾಗಿರಬೇಕು.

ವಿದ್ಯಾ:— ಭಲೆ! ಕುಮಾರ! ಮೇಲುಮಾತಾಡಿದೆ. ಅಹುದು!

---

* ಪೋಷಣೆಯಲ್ಲಿ ತಾಯಿ; ವಿವೇಕಬೋಧೆಯಲ್ಲಿ ತಂದೆ; ಕ್ಲೇಶನಿವಾರಣೆಯಲ್ಲಿ ಅಭಿರಾಮ (ಆಹ್ಲಾದ) ಗುಣಾನ್ವಿತೆಯಾದ ಕಾಂತೆ; ದಿಗಂತವ್ಯಾಪಕವಾದ ಯಶಸ್ಸು; ನಿರ್ದುಷ್ಟವಾದ--ಶಾಶ್ವತವಾದ ಸಂಪತ್ತಿ; ಇಂತಿಷ್ಟು--ಇನ್ನೂ--ಅನೇಕ ಗುಣಗಳಿಂದ--ಸುಖ--ಭೋಗ--ಸಂಪದ ಅಭ್ಯುದಯಗಳನ್ನು ಕೊಡುವ--ಸಾಕ್ಷಾತ್ ಕಲ್ಪಲತೆಯಾದ ವಿದ್ಯೆಯು ಮತ್ತಾವುದನ್ನು ತಾನೆ ಸಾಧಿಸಿಕೊಡಲಾರದು? ಎಂಬ ಅಭಿಪ್ರಾಯ.

ನೀನೇ ವಿದ್ಯಾಧೀಶ್ವರಿಯ ಕೃಪಾಪಾತ್ರನಾದವನು. ಮೆಚ್ಚಿದೆ! ನಿನ್ನ ತಂದೆಯ ಹಿತವಾದವನ್ನು ಮರೆಯದಿರು.

ರಮಾನಂದ:— ( ಭ್ರಾಂತನಂತೆ ನೋಡುತ್ತ.) ಆರ್ಯರೆ! ವಿದ್ಯಾ ಸ್ವರೂಪ-ಸ್ವಭಾವಗಳನ್ನು ಸ್ವಲ್ಪಮಾತ್ರವೂ ತಿಳಿಯಲಾರದಿರುವ ನನಗೆ ಇಷ್ಟರ ಹೊಗಳಿಕೆಯೇಕೆ!

ವಿದ್ಯಾ:— (ಸಂತೋಷದಿಂದ) ಸುಕುಮಾರ! ಇದೇ–ಈ ವಿನಯ ಗುಣವೇ ನಿನಗೆ ಭೂಷಣವಾಗಿರಬೇಕು. ನಿಜ, ಈ ವಿನಯದಿಂದಲೇ ನೀವು ಅರ್ಥಸಿದ್ಧಿ ಹೊಂದಬೇಕು. ನಿಮ್ಮಲ್ಲಿ ನೂತನಶಕ್ತಿಯುತ್ಪನ್ನವಾಗುವಂತೆ ಪ್ರೋತ್ಸಾಹಿಸುವದೇ ನಮ್ಮ ಗುಣವಾಗಿರಬೇಕು. ಅದಿರಲಿ; ವಿದ್ಯಾಪ್ರಭಾವವನ್ನು ಕೇಳಿದೆಯಲ್ಲವೆ? ಹಾಗಾದರೆ ಕೇಳು—

“ ಮುರಿದುನರಾಧಿಪಂಗೆ ಕೊಳಬಾರದು,--ಕಿಚ್ಚಿನೊಳಿಟ್ಟೊಡೆ ಬೇಯದಿ |
ತ್ತರೆ ಮಗುಳ್ದುತ್ತರೋತ್ತರದೆ ಪೆರ್ಚುವುದಕ್ಕರ ವಿದ್ಯೆ ನೀರೊಳುಂ ||
ನೆರೆಯದು ಗಾಳಿಯಿಂಕಿಡದು ತಸ್ಕರಭಾಧೆಗಸಾಧ್ಯಮಿಂತಿದಂ |
ಮರೆಯದೆ ನಿಚ್ಚಮೋದುವುದು, ಓದಲಿಹಕ್ಕೆ ಪರಕ್ಕೆ ಸಾಧನಂ || ” (ಪ.ಸಾ.)

ಇಂತಹ ಸುಖಾಧಾರವಾದ ವಸ್ತುವನ್ನು ಪಡೆದು, ಆತ್ಮಾನಂದ ಸಾಮ್ರಾಜ್ಯದಲ್ಲಿ ನಲಿದಾಡಬೇಕೆಂಬುದು ಪ್ರತಿಯೊಬ್ಬರಿಗೂ ಇರಬೇಕು. ಈ ಅಭಿಲಾಷೆಯಿಲ್ಲದೆ, ಬರಿಯ ಊಟ ನಿದ್ರೆಗಳಲ್ಲಿಯೇ ಬೆರೆದಿರುವವರಾರೋ, ಅವರನ್ನು ಯಾರೂ ಮನುಷ್ಯರೆಂದು ಹೇಳಬಾರದು. ಏಕೆಂದರೆ— “ ವಿದ್ಯಾವಿಹೀನಃ ಪಶುಃ ” ಎಂದಿರುವುದು.

ರಮಾ:— ಪೂಜ್ಯರೆ! ಗುರುಜನರಲ್ಲಿ ನಾನು ಮತ್ತೆಮತ್ತೆಯೂ ಕೇಳತಕ್ಕುದೇನು? ನನ್ನ ಅಭ್ಯುದಯಕ್ಕೆ ತಾವುಗಳೇ ಕಾರಣರಾಗಿರುವಿರಲ್ಲವೆ!

ದ್ವಾರಪಾಲಕ:— (ಓಡಿಬಂದು) ಪ್ರಭುಗಳಿಗೆ ಶುಭವರ್ತಮಾನವು. ರವಿವರ್ಮ ಕುಮಾರರು ಈಗಲೇ ಬರುತ್ತಿರುವರು.

ಶ್ರೀಮಂತ:— (ಚಕಿತನಾಗಿ) ಹಾಗೆಂದರೇನು? ನೆನೆದಂತೆ ಬಂದ

ರೆನ್ನುವುದು ಆಶ್ಚರ್ಯ! ವಿಚಾರವೇನೋ ಇರಬೇಕು. ಇರಲಿ; ಸಂತೋಷ! ಬೇಗ ಬರಲಿ!

(ದ್ವಾರಪಾಲಕನು ಕೈಮುಗಿದು ಹೊರಟು ಹೋಗುವನು.)

(ರವಿವರ್ಮನ ಪ್ರವೇಶ.)

(ರವಿವರ್ಮನು ಶ್ರೀಮಂತನ ಮುಂದೆಬಂದು ತಲೆಬಾಗಿ ನಿಲ್ಲುವನು.)

ಶ್ರೀಮಂತ:— (ಕೈಹಿಡಿದು) ಆಯುಷ್ಮಂತನೆ! ಸುಕ್ಷೇಮಿಯಾಗಿರುವೆಯಷ್ಟೆ!

ರವಿ:— ತಮ್ಮ ಅನುಗ್ರಹದಿಂದ ಇಂದಿನವರೆಗೆ ಸುಕ್ಷೇಮ.

ಶ್ರೀಮಂತ:— ನಿನ್ನ ಮಾವನು ಸಪರಿವಾರನಾಗಿ ಕುಶಲಿಯೆ?

ರವಿ:— ಕುಶಲಿ.

ಶ್ರೀಮಂತ:— ನಿನ್ನ ಮಾವನು ಕಳುಹಿದ ಪತ್ರವು ಇದೇ ನನ್ನ ಕೈಸೇರಿತು. ಅದರಲ್ಲಿ ನೀನು ಅಲ್ಲಿಯೇ ವ್ಯಾಸಂಗಮಾಡುತ್ತಿರುವುದಾಗಿ ತಿಳಿದಿತು. ಇದೇನು! ಕರೆಯಿಸಿದಂತೆಯೇ ಬಂದೆ?

ರವಿ:— ಅಲ್ಲಿ ನನ್ನ ವಿದ್ಯಾವ್ಯಾಸಂಗಕ್ಕೆ ಸರಿಯಾದ ಸಹಾಧ್ಯಾಯಿಗಳಾಗಲೀ, ಬೋಧಕರಾಗಲೀ ಇಲ್ಲ. ಅಲ್ಲದೆ ನನಗೆ ತಮ್ಮ ಅಸನ್ನಿಧಾನದಲ್ಲಿರಲು ಮನಸ್ಸು ಸಮ್ಮತಿಸಲಿಲ್ಲ. ಇದಕ್ಕಾಗಿ ನೆನೆದಂತೆ ಹೊರಟು ಬಂದೆನು.

ಶ್ರೀಮಂತ:—ನಿನ್ನ ಮಾವನ ಒಪ್ಪಿಗೆಯನ್ನು ಪಡೆದು ಬಂದೆಯೊ! ಇಲ್ಲವೊ?

ರವಿ:—ಆತನ ಒಪ್ಪಿಗೆಯಿಂದಲೇ ಇಲ್ಲಿಗೆ ಬರುವಂತಾಯಿತು.

ಶ್ರೀಮಂತ:— ಒಳ್ಳೆಯದು. ನಾನೇ ನಿನ್ನನ್ನು ಕರೆಯಿಸಿಕೊಳ್ಳಬೇಕೆಂದಿದ್ದೆನು. ಇದೋ ನೋಡು, ಇವರೇ ಸಾಕ್ಷಾತ್ ಅಭಿನವ ಬೃಹಸ್ಪತ್ಯಾಚಾರ್ಯರು. ಮಹನೀಯರಾದ ಇವರಲ್ಲಿ ಗುರುಕುಲವಾಸ ಮಾಡಿ, ವಿದ್ಯಾಲಾಭವನ್ನು ಪಡೆಯಬೇಕೆಂದು ನಿನ್ನನ್ನೂ, ನಿನ್ನ ಸಹಜಾತನನ್ನೂ ಇವರಿಗೆ ಒಪ್ಪಿಸುವುದರಲ್ಲಿರುವೆನು. ಮೊದಲು ಇವರಿಗೆ

ನಮಸ್ಕರಿಸು.

ರವಿ:— 'ನನ್ನ ಅಭಿಮತವೂ ಅದೇ ಆಗಿರುವುದು.' ( ಮುಂದೆ ಬಂದು ವಿದ್ಯಾವಾಗೀಶನಿಗೆ ತಲೆಬಾಗಿ ವಂದಿಸುತ್ತ ) 'ಗುರುಸನ್ನಿಧಿಯಲ್ಲಿ ಪಿತೃವಾಕ್ಯದಿಂದ ಪ್ರೇರಿತನಾದ ನಾನು ವಂದಿಸುವೆನು.'

ವಿದ್ಯಾ:— ಭಗವಂತನು ಅನುಗ್ರಹಿಸಲಿ.

ಶ್ರೀಮಂತ:— ಪೂಜ್ಯರೆ! ಸುಕುಮಾರರನ್ನು ತಮ್ಮ ವಶಕ್ಕೊಪ್ಪಿಸಿರುವೆನು. ಇನ್ನು ಮುಂದೆ ಇವರ ಶಿಕ್ಷಣವಿಚಾರವೆಲ್ಲವೂ ತಮ್ಮನ್ನೇ ಸೇರಿರುವುದು. ಹೆಚ್ಚು ಹೇಳಲಾರೆನು. ಇವರಲ್ಲಿ ದುರ್ಗುಣಗಳನ್ನು ಕಂಡಾಗ ಸೂಕ್ತತೋರಿದಂತೆ ದಂಡಿಸುವುದಕ್ಕಾಗಲೀ, ಮತ್ತಾವ ಪ್ರೋತ್ಸಾಹಕ್ಕಾಗಲೀ ತಾವು ಸಂಪೂರ್ಣ ಸ್ವತಂತ್ರರಾಗಿರುವಿರಿ. ಈ ಭಾಗದಲ್ಲಿ ಹಿಂದೆಗೆಯದೆ, ಸರ್ವವಿಧದಲ್ಲಿಯೂ ಇವರು ತಮ್ಮ ಪುತ್ರವರ್ಗಕ್ಕೆ ಸೇರಿದವರೆಂದೇ ತಿಳಿದು, ಇವರನ್ನು ಪರಿಗ್ರಹಿಸಬೇಕೆಂಬುದೇ ನನ್ನ ಪ್ರಾರ್ಥನೆ.

ವಿದ್ಯಾ:— ಅಯ್ಯ! ನೀನು ನನಗೆ ಇಷ್ಟುದೂರ ಹೊಗಳಿ ಹೇಳಬೇಕಾಗಿಲ್ಲ. ನನ್ನ ಕೆಲಸವನ್ನು ನಾನು ಮನಃಪೂರ್ವಕವಾಗಿ ಮಾಡದೆ ಬಿಡುವೆನೆಂದು ಶಂಕಿಸಬೇಡ. ಇನ್ನು ಮುಂದೆ ನೀನು ಪುತ್ರರ ವ್ಯಾಸಂಗವಿಚಾರದಲ್ಲಿ ಚಿಂತಿಸದೆ, ನಿರಾತಂಕದಿಂದ ನಿನ್ನ ದೇಶಸೇವೆಯಲ್ಲಿ ನಿರತನಾಗಿರಬಹುದು.

ಶ್ರೀಮಂತ:— (ರವಿವರ್ಮ-ರಮಾನಂದರನ್ನು ಕುರಿತು) 'ಸುಕುಮಾರರೆ! ನಿಮಗೆ ಹೆಚ್ಚು ಹೇಳಲಾರೆನು. ನಿಮಗೆ ಈ ಪುಣ್ಯಮೂರ್ತಿಯೇ ಪರಮಗುರು, ಮತ್ತು ತಂದೆ. ಈತನ ಪರಿವಾರವೇ ನಿಮ್ಮ ಬಂಧುವರ್ಗ. ಈತನ ಸೇವೆಯೇ-ಆಜ್ಞಾನುವರ್ತನವೇ ನಿಮ್ಮ ನಿತ್ಯನೈಮಿತ್ತಿಕವೃತ್ತಿ. ಇದನ್ನು ತಿಳಿದು ಮನಸ್ಸು, ವಾಕ್ಕು, ಕರ್ಮಗಳಲ್ಲಿಯೂ ನಿಷ್ಕಾಪಟ್ಯದಿಂದಿದ್ದರೆ, ಭಗವಂತನೂ ನಿಮಗೆ ಸಹಾಯಕನಾಗುವನು. ಇನ್ನು ಇವರೊಡನೆ ಹೊರಡಲನುವಾಗಿರಿ.

(ರಮಾನಂದನು ಕೌತುಕದಿಂದ ಕ್ಷೇಮದರ್ಶಿಯನ್ನು ನೋಡುವನು.)

ಕ್ಷೇಮದರ್ಶಿ:— ( ಶ್ರೀಮಂತನನ್ನು ಕುರಿತು ) ' ಸುಕುಮಾರರು ಹೊರಡುವುದಕ್ಕೆ ಮೊದಲು, ಮಾತೃಸಮ್ಮುಖದಲ್ಲಿ ಅನುಮತಿಯನ್ನು ಪಡೆಯಬೇಕೆಂಬ ಕುತೂಹಲದಲ್ಲಿರುವರು. ಆದುದರಿಂದ, ಗುರುಗಳೂ ಕುಮಾರರೊಡನೆ ದೇವಿಯವರಿಗೆ ಸಂದರ್ಶನಲಾಭವಿತ್ತು, ಬಳಿಕ ತೆರಳಬೇಕೆಂಬುದೇ ನನ್ನ ಪ್ರಾರ್ಥನೆ.

ಶ್ರೀಮಂತ:— ಪೂಜ್ಯರೆ! ತಮ್ಮ ಅಭಿಮತವೇನು?

ವಿದ್ಯಾ:— ( ಎದ್ದುನಿಂತು) 'ಯುಕ್ತವಿಚಾರವು. ತಪಸ್ವಿನಿಯಾದ ನಿನ್ನ ಪತ್ನಿಯನ್ನು ನೋಡಬರುವದು ನನಗೂ ಸಮ್ಮತವೇ ಆಗಿದೆ. ಕುಮಾರರು ಮಾತೃದೈವವನ್ನು ವಂದಿಸಿ, ಆಶೀರ್ವಾದ ಹೊಂದಿಯೇ ಹೊರಡಬೇಕು–ನಡೆಯಿರಿ. ನಾವೆಲ್ಲರೂ ಇನ್ನು ಹೊರಡುವ.

[ಎಲ್ಲರೂ ಹೊರಡುವರು.]

ಸ್ಥಾನ ೩:— ವಸುಮತೀ ದೇವಿಯ ಅಂತಃಪುರ.

(ಚೇಟಿಯೊಡನೆ ಶ್ರೀಮಂತನ ಪತ್ನಿಯಾದ ವಸುಮತೀದೇವಿಯ ಪ್ರವೇಶ.)

ವಸುಮತಿ:— ಸಖಿ! ನಿಜವಾಗಿ ಹೇಳುವೆಯಾ? ರವಿವರ್ಮ ಕುಮಾರನು ಬಂದುದನ್ನು ನೀನು ನೋಡಿದೆಯಾ?

ಚೇಟಿ:— ದೇವಿ! ನಾನು ನೋಡಿಯೇ ಬಂದು ಹೇಳಿದೆನಲ್ಲದೆ, ಸುಳ್ಳನ್ನು ಹೇಳಿಲ್ಲ. ಕುಮಾರನು ನಿಜವಾಗಿಯೂ ಬಂದಿರುವನು.

ವಸುಮತಿ:— ಒಂಟಿಯಾಗಿ ಬಂದನೋ? ಯಾರನ್ನಾದರೂ ಜತೆಗೊಂಡು ಬಂದನೊ?

ಚೇಟಿ:— ಅವನ ಸಂಗಡ ನಾಲ್ವರು ಬಂದಿರುವರು. ಆದರೆ ಅವರಲ್ಲಿ ಯಾರೂ ಇಲ್ಲಿಗೆ ಬಂದಿಲ್ಲ. ಎಲ್ಲರೂ ಬೇರೆಕಡೆಯಲ್ಲಿ ಉಳಿದಿರುವರು. ರವಿವರ್ಮಕುಮಾರನೊಬ್ಬನೇ ಇಲ್ಲಿಗೆ ಬಂದಿರುವನು.

ವಸುಮತಿ:— ಹಾಗಾದರೆ ನನ್ನನ್ನು ನೋಡಲು ಇನ್ನೂ ಬರಲಿಲ್ಲವೇಕೆ?

ಚೇಟಿ:— ಬಂದವನು ನೆಟ್ಟಗೆ ತಂದೆಯ ಬಳಿಗೆ ಹೊರಟು ಹೋದನು.

ವಸು:— ಸುಕುಮಾರ–ರಮಾನಂದನು ಎಲ್ಲಿರುವನು?

ಚೇಟಿ:— ಮಂತ್ರಾಲಯದಲ್ಲಿ ತಂದೆಯಬಳಿಯಲ್ಲಿರುವನು.

ವಸು:— ಕುಮಾರನನ್ನು ಪ್ರೌಢಶಿಕ್ಷಣಕ್ಕಾಗಿ ಗುರುಕುಲ ವಾಸಕ್ಕೆ ಕಳುಹಬೇಕೆಂದು ಗೊತ್ತಾಗಿದ್ದ ದಿನವೇ ಇದಲ್ಲವೆ?

ಚೇಟಿ:— ಅಹುದು. ಅದಕ್ಕಾಗಿಯೇ ಮಹಾಮಹೋಪಾಧ್ಯಾಯರಾದ ವಿದ್ಯಾವಾಗೀಶರನ್ನು ಕರೆತಂದಿರುವರು.

ವಸು:— (ಕುತೂಹಲದಿಂದ) 'ಆ ಮಹನೀಯರೇ ಇಲ್ಲಿಗೆ ಬಂದಿರುವರೆ? ಹಾಗಿದ್ದರೆ, ನಮ್ಮ ಮತ್ತು ಸುಕುಮಾರರ ಸುಕೃತಗಳಿಗೆ ಮೇರೆಯೇ ಇಲ್ಲದಂತಾಗುವುದೆಂದು ಭಾವಿಸುತ್ತೇನೆ.

ಚೇಟಿ:— (ತೆರೆಯ ಕಡೆ ನೋಡಿ) 'ದೇವಿ! ಇದೋ, ರವಿವರ್ಮ ಕುಮಾರನೇ ಬರುತ್ತಿರುವನು.'

(ರವಿವರ್ಮನ ಪ್ರವೇಶ.)

ವಸು:— (ಹರ್ಷಾತಿರೇಕದಿಂದ) 'ವತ್ಸ! ಸುಖವಾಗಿರುವಿಯಷ್ಟೆ? ಬಾ, ಕುಳಿತುಕೊ.'

ರವಿ:— (ಮುಂದೆ ಬಂದು, ತಾಯಿಗೆ ನಮಸ್ಕರಿಸಿ, ಆಕೆಯ ಬಳಿಯಲ್ಲಿ ಕುಳಿತು) ಅಮ್ಮ! ನಿಮ್ಮ ಆಶೀರ್ವಾದದಿಂದ ಸುಖವಾಗಿದ್ದೇನೆ. ನೀವು ಮಗನ ಕ್ಷೇಮಲಾಭವನ್ನು ಕೇಳದಿದ್ದರೂ, ನಾನೇ ನಿಮ್ಮನ್ನು ಬಿಟ್ಟಿರಲಾರದೆ ಬಂದಿರುವೆನು.

ವಸು:— ಮಗುವೇ, ನಿನ್ನನ್ನು ಬಿಟ್ಟಿರಬೇಕೆಂದು ನನ್ನ ಇಷ್ಟವಾಗಿಲ್ಲ. ಆದರೆ ಮಾಡತಕ್ಕುದೇನು? ಸೋದರಮಾವನ ಬಳಿಯಲ್ಲಿಯಾದರೂ ವ್ಯಾಸಂಗಿಸಲೆಂಬ ಆಶೆಯಿಂದ ಬಿಟ್ಟಿದ್ದೆವು; ಅಷ್ಟೆ.

ರವಿ:— ಹೇಗಾದರೂ ಮಾಡಿರಿ; ಅಮ್ಮ! ನನ್ನ ವಿಷಯದಲ್ಲಿ ನೀವು ಹೇಗಾದರೂ ಇರಬಹುದು. ಆದರಿಂದ ನನಗೇನೂ ವ್ಯಸನ

ವಿಲ್ಲ. ರಮಾನಂದಕುಮಾರನಲ್ಲಿಯಾದರೂ ನೀವು, ನನ್ನಲ್ಲಿ ತೋರುವ ಉಪೇಕ್ಷೆಯನ್ನು ತೋರಿಸದೆ, ಪೂರ್ಣಾಭಿಮಾನವನ್ನಿಟ್ಟಿರುವುದಕ್ಕಾಗಿ ಸಂತೋಷಿಸುತ್ತೇನೆ.

ವಸು:— ಸುಕುಮಾರ! ನೀನು ಹಾಗೆ ಹೇಳುವುದು ಸರಿಯಲ್ಲ. ಹೆತ್ತ ಮಕ್ಕಳಲ್ಲಿ ಪಕ್ಷಪಾತವನ್ನು ತೋರುವುದು, ತಾಯಿ—ತಂದೆಗಳ ಶೀಲವಲ್ಲ. ಅವರ ಪ್ರೀತಿಯು ಮಕ್ಕಳೆಲ್ಲರಲ್ಲಿಯೂ ಒಂದೇ ಬಗೆಯದಾಗಿರುವುದು.

ರವಿ:— (ತಲೆದೂಗುತ್ತ ವ್ಯಂಗಸ್ವರದಿಂದ) ‹ಅಮ್ಮ! ಅದು ಸುಳ್ಳು ಮಾತು; ನಾನು ಅದನ್ನು ನಂಬಲಾರೆನು. ಏಕೆಂದರೆ, ಈಗ ನೋಡಿರಿ; ರಮಾನಂದನೂ ನಿಮ್ಮ ಮಗನು; ನಾನೂ ನಿಮ್ಮ ಮಗನು. ರಮಾನಂದನ ವಿಷಯದಲ್ಲಿ ನಿಮ್ಮಿಬ್ಬರ ಪ್ರೇಮಾತಿಶಯವೂ ಅದರಿಂದ ಇತರರು ತೋರುವ ಗೌರವವೂ ಎಷ್ಟರಮಟ್ಟಿಗಿರುವುದೆಂಬುದನ್ನೂ, ನನ್ನ ವಿಚಾರವಾಗಿ ನಿಮಗಿರುವ ಆಗ್ರಹ, ಉದಾಸೀನಗಳೂ ಅದರಿಂದ ಇತರರು ತೋರುತ್ತಿರುವ ಅಗೌರವವೂ ಎಷ್ಟಿರಬಹುದೆಂಬುದನ್ನೂ ಚೆನ್ನಾಗಿ ವಿಚಾರಮಾಡಿ ನೋಡಿ ಹೇಳಿರಿ! ಹಾಗಾದುದೇಕೆ? ನನ್ನ ದುರದೃಷ್ಟಫಲವೊ? ಇಲ್ಲವೆ ನಿಮ್ಮ ಪಕ್ಷಪಾತವೋ? ಯಾವುದು?

ವಸು:— (ನಿಟ್ಟುಸಿರಿಟ್ಟು) ಮಗುವೆ, ನಿನ್ನ ಈ ವಿಕಲ್ಪವು ಸಾಧುವಾಗಿಲ್ಲ. ಹೆತ್ತವರ ವಿಶ್ವಾಸವು ಮಕ್ಕಳೆಲ್ಲರಲ್ಲಿಯೂ ಒಂದೇ ಬಗೆಯದಾಗಿರುವುದು. ಆದರೆ ಅದು ಮಕ್ಕಳ ವಿನಯ, ಸತ್ಯ, ಕ್ಷಮಾ, ಉದ್ಯಮಶೀಲತೆಗಳ ಮೇಲಿಂದ ಪ್ರಕಾಶಕ್ಕೆ ಬರುವುದು. ಮಕ್ಕಳಲ್ಲಿ ಆ ಗುಣಗಳು ಎಷ್ಟು ಹೆಚ್ಚುತ್ತ ಬರುವುವೋ, ಅಷ್ಟೂ ತಾಯಿತಂದೆಗಳ ಅಂತರಂಗದಲ್ಲಿರುವ ವಿಶ್ವಾಸವು ಹೊರಹೊಮ್ಮಿ, ಆ ಮಕ್ಕಳ ವಿಚಾರದಲ್ಲಿ ಆದೊಂದು ಬಗೆಯ ಗೌರವವುಂಟಾಗುವುದು. ಹಾಗೆಯೇ ಮಕ್ಕಳಲ್ಲಿ ಅವಿಧೇಯತೆ, ಆಲಸ್ಯ, ಉದಾಸೀನ, ವಿಷಯಾತುರ, ಚೌರ್ಯ, ಪರದೂಷಣೆ, ದ್ವೇಷಾಸೂಯೆಗಳೇ ಉಂಟಾಗಿದ್ದರೆ, ಅವರ

ಅಸದ್ವೃತ್ತಿಗೆ ಮುಂದೆ ಒದಗಬಹುದಾದ ಅಲಂಘ್ಯಫಲಾನುಭವವನ್ನು ಕುರಿತು, ತಾಯಿತಂದೆಗಳ ಹೃದಯದಲ್ಲಿ ಸಹಿಸಲಾಗದಷ್ಟು ಕ್ಲೇಶ ವುಂಟಾಗುವುದು. ಕ್ಲೇಶವು ಹೆಚ್ಚಿದಷ್ಟು ವಿಶ್ವಾಸವು ಅಂತಸ್ಥವಾಗುತ್ತ ಬಂದು, ಆ ಮಕ್ಕಳನ್ನು ದಾರಿಗೆ ತರಬೇಕೆಂಬ ಆಕಾಂಕ್ಷೆಯಿಂದ ಪ್ರಬಲಪ್ರಯತ್ನವನ್ನು ಹಿಡಿಯಬೇಕಾಗುವುದು. ಹಾಗೆ ಹಿಡಿಯುವ ಪ್ರಯತ್ನದಿಂದ ಮಕ್ಕಳ ವಿಚಾರದಲ್ಲಿ ತಮ್ಮ ಸಂಪೂರ್ಣ ಸ್ವಾತಂತ್ರ್ಯ, ದರ್ಪ, ಕಾಠಿಣ್ಯಗಳನ್ನು ಕಾಲಕ್ಕೆ ತಕ್ಕಂತೆ ಉಪಯೋಗಿಸುತ್ತ ಬರಬೇಕಾದೀತು. ಈ ಮರ್ಮವನ್ನು ತಿಳಿಯದೆ, ತಮ್ಮ ಮಕ್ಕಳಲ್ಲಿ ತಾವೇ ಪಕ್ಷಪಾತಬುದ್ಧಿಯುಳ್ಳವರಾಗಿರುವರೆಂಬ ಅಪವಾದವು, ಪಾಪ! ತಾಯಿತಂದೆಗಳ ತಲೆಯ ಮೇಲೆ ಬೀಳುತ್ತಿರುವುದು. ಈಗಲಾದರೂ ತಿಳಿಯಿತೆ?

ರವಿ:— ಅಮ್ಮ! ಹೋಗಲಿ; ರಮಾನಂದನೇ ನಿಮ್ಮ ಮೆಚ್ಚಿಕೆಗೆ ತಕ್ಕ ಮಗನಾಗಿರಲಿ; ಸಂತೋಷ. ನಾನು ನಿಮ್ಮ ಉದಾಸೀನಕ್ಕೆ ಕಾರಣನಾಗಿದ್ದ ಮಾತ್ರದಿಂದ ಕೊರತೆಯೇನು ? ನೀವು ನನ್ನನ್ನು ಉಪೇಕ್ಷಿಸಿ ಹೊಡೆದಟ್ಟಿದರೂ, ನಾನು ನಿಮ್ಮನ್ನು ಬಿಟ್ಟು, ಅನ್ಯರ ಆಶ್ರಯದಲ್ಲಿರಲಾರೆನು; ಇದು ನಿಜ!

ವಸು:— ಅಪ್ಪ! ಇನ್ನೂ ನಿನ್ನ ಮನಸ್ಸಿನ ಸಂಶಯ-ಕ್ಲೇಶಗಳು ಹೋಗಲಿಲ್ಲವೇ? ರಮಾನಂದನ ವಿಷಯದಲ್ಲಿ ನಿನಗಿಷ್ಟು ಅಸಮಾಧಾನವಿರಬಾರದು. ನೀನು ನಮಗೆ ಹಿರಿಯ ಮಗನು; ರಮಾನಂದನಿಗೆ ದೊಡ್ಡವನು. ಹೀಗಿರುವ ನೀನು ನಮಗೂ, ನಮ್ಮ ಮನೆತನಕ್ಕೂ, ನಮ್ಮ ನೆಂಟರಿಷ್ಟರಿಗೂ ಆಹ್ಲಾದದಾಯಕನಾದ ಮಗನೆನ್ನಿಸುವುದು ನಿನ್ನ ಕರ್ತವ್ಯವೆಂದೇಕೆ ತಿಳಿಯಲಿಲ್ಲ ? 'ಹಿರಿಯನ ಚಾಳಿ ಕಿರಿಯನಿಗೆ' ಎಂಬ ನಾಣ್ನುಡಿಯಂತೆ ನಿನ್ನ ನಡೆನುಡಿಯನ್ನೇ ನಿನ್ನ ಸಹಜಾನುಜರೂ ಅನುಸರಿಸಬೇಕಾಗಿರುವಲ್ಲಿ, ಅವರನ್ನು ವಿದ್ಯಾಬುದ್ಧಿಗಳಲ್ಲಿ ಸುಶಿಕ್ಷಿತರನ್ನಾಗಿ ಮಾಡುವ ಪಾಂಡಿತ್ಯವು, ನಿನ್ನಲ್ಲಿರಬೇಕ

ಲ್ಲವೆ? ಇದಕ್ಕೆ ತಕ್ಕಷ್ಟು, ನಿನ್ನ ವಯೋಮಾನಕ್ಕೆ ಒಪ್ಪುವಷ್ಟು ಪ್ರತಿಭಾವಿಶೇಷವು ನಿನ್ನಲ್ಲಿರಬೇಡವೆ? ಚೆನ್ನಾಗಿ ಯೋಚಿಸಿನೋಡು. ಇವುಗಳಲ್ಲಿ ನೀನು ವಿಶೇಷ ಗಮನವಿಟ್ಟು ಶ್ರಮಸಹಿಷ್ಣುತೆಯಿಂದ ಅದನ್ನು ಅಭ್ಯಾಸಮಾಡಬೇಕೆಂಬುದೇ ನಮ್ಮ ಮುಖ್ಯ ಆಶಯವಾಗಿದೆ. ಅಷ್ಟೇ ಅಲ್ಲದೆ, ನಿನ್ನಲ್ಲಿ ನಮಗೆ ಉದಾಸೀನಕ್ಕೆ ಕಾರಣವಿಲ್ಲ. ನಿನ್ನ ಶ್ರೇಯೋಭಿವೃದ್ಧಿಗಾಗಿ ನಿನ್ನ ತಂದೆ ಪಡುತ್ತಿರುವ ಶ್ರಮವನ್ನು ಇಲ್ಲಿ ನಿನಗೆ ಹೇಗೆ-ಎಷ್ಟೆಂದು ವಿವರಿಸಿ ತಿಳಿಸಲಿ?

ಮಗುವೆ! ಇನ್ನಾದರೂ ಸಮಾಧಾನವನ್ನು ಹೊಂದು. ನಿನ್ನ ಒಡಹುಟ್ಟಿದವರಲ್ಲಿ ಮರುಕವನ್ನೂ, ನಿನ್ನ ಒಡನಾಡಿಗಳಲ್ಲಿ ಅಕೃತ್ರಿಮ ಸ್ನೇಹವನ್ನೂ, ನಿನ್ನ ಆಪ್ತವರ್ಗದಲ್ಲಿ ವಿಶ್ವಾಸಗೌರವವನ್ನೂ, ನಿನ್ನನ್ನು ಹೆತ್ತ ತಾಯಿತಂದೆಗಳಲ್ಲಿ ಮತ್ತು ಇತರ ಗುರು ಜನರಲಿ ದೈವಿಕಪ್ರೇಮದ ವಿಶುದ್ಧವಾದ ಭಕ್ತಿಭಾವವನ್ನೂ ಪ್ರದರ್ಶಿಸುವುದು ನಿನ್ನ ಮುಖ್ಯಧರ್ಮವೆಂದು ಚೆನ್ನಾಗಿ ನಂಬು. ಸುಕುಮಾರ! ಮತ್ತೇನು ಹೇಳಲಿ?

ರವಿ:— (ತಲೆದೂಗುತ್ತ) ಅಮ್ಮ! ನೀವು ಏನನ್ನು ಹೇಳಿದರೂ ಕೇಳಲು ಹಿಂತೆಗೆಯುವವನಲ್ಲ. ಮತ್ತೆಯಾರ ವಿಚಾರದಲ್ಲಿಯಾದರೂ ನಾನು ಅವಿಧೇಯನಾಗಿರುವೆನಲ್ಲದೆ, ನಿಮ್ಮ ವಿಚಾರದಲ್ಲಿ ನನ್ನ ಮನೋಭಾವವು ಹೇಗಿರುವುದೆಂಬುದನ್ನು ಮಾತ್ರ ಹೇಳಿ ತಿಳಿಸಲಾರೆನು.

ವಸು:— (ಆನಂದೋದ್ರೇಕದ ಗದ್ಗದಸ್ವರದಿಂದ) 'ಸುಕುಮಾರ! ನಮ್ಮ ವಿಚಾರದಲ್ಲಿ ಈಗ ನಿನಗಿರುವ ಗೌರವವೇ ಮುಂದೆಯೂ, ಎಂದೆಂದೂ ಸ್ಥಿರವಾಗಿರುತ್ತಿದ್ದರೆ, ನೀನು ಸುಪುತ್ರನೆನ್ನಿಸುವುದರಲ್ಲಿ ಸಂಶಯವಿಲ್ಲ. ಆದರೆ ಈ ಕಾಲದ ಸೊಕ್ಕಿನ ಮಕ್ಕಳಂತೆ, ಕೇವಲ ತಮ್ಮ ಕಾರ್ಯಸಾಧನೆಯಾಗುವವರೆಗೆಮಾತ್ರ ಎಂದರೆ- ತಮ್ಮ ಬಾಹುಗಳಲ್ಲಿ ಶಕ್ತಿಯೂ ಅಂತರಂಗದಲ್ಲಿ ಇಂದ್ರಿಯಪಟುತ್ವವೂ ಅವುಗಳನ್ನು

ಮುಂಬರಿದು ಹೋಗುವಂತೆ ಮಾಡುವ ಸಹಕಾರಪಾತ್ರವೂ ಉಂಟಾಗುವವರೆಗೆ ಮಾತ್ರವೇ ತಾಯಿತಂದೆಗಳಲ್ಲಿ ವಿಧೇಯರಂತೆ ನಟಿಸುವುದೂ, ಅವುಗಳನ್ನು ಆ ತಮ್ಮ ಹಿರಿಯರಿಂದ ಸಂಪಾದಿಸಿಕೊಂಡರೆ, ಆಗಲೇ, ಅದು ಮೊದಲೇ, ಆ ತಾಯಿತಂದೆಗಳಲ್ಲಿ ಉದಾಸೀನ, ಮರ್ಯಾದೋಲ್ಲಂಘನ, ಕ್ರೂರವರ್ತನಗಳನ್ನು ತೋರಿಸುವುದೂ ಸತ್ಪುತ್ರನೆನ್ನಿಸಬೇಕಾದ ನಿನಗೆ ತಕ್ಕುದಲ್ಲವೆಂದು ಚೆನ್ನಾಗಿ ನಂಬು; ಬಲವಾಗಿ ತಿಳಿದಿರು.

ಕುಮಾರ! ಇಂದಿನವರೆಗೆ ನಿನಗಾಗಿರುವ ವೃಥಾಕಾಲಹರಣದ ಅಪಾರನಷ್ಟಕ್ಕೆ ಕಾರಣನು ನೀನೊಬ್ಬನೇ ಅಲ್ಲ. ಆದಿಯಲ್ಲಿ ಎಂದರೆ ನಿನ್ನ ಶೈಶವದಿಂದ ಮೊದಲು, ನಿನ್ನ ಬಾಲ್ಯ ಸುಶಿಕ್ಷಣೆಯ ಸೀಮೆಯವರೆಗೂ ನಾವು ಕೊಡಬೇಕಾಗಿದ್ದ ಗಮನವೇ ಮರೆಯಾಗಿದ್ದು, ನಿನ್ನನ್ನು ಅತಿಯಾಗಿ ಮುದ್ದಿಸಿ, ಉಬ್ಬಿಸಿ, ನಿನಗೆ ಮದವೇರುವಂತೆ ನಿನ್ನನ್ನು ಬಗೆಬಗೆಯಾಗಿ ನಲಿದಾಡಿಸಿ, ಹಿಗ್ಗುತ್ತಿದ್ದ ನಮ್ಮ ಅವಿಚಾರವೇ ಅಂಕುರವಾಯಿತು. ಸಹವಾಸದೋಷವೂ ಮತ್ತು ನಿನ್ನ ಆಲಸ್ಯ ಅಭಿಮಾನ, ಆಶಾಪರತೆಗಳೂ ಅದನ್ನು ಕ್ರಮಕ್ರಮವಾಗಿ ಬೆಳೆಯಿಸಿ, ಈಗ ವೃಕ್ಷರೂಪಕ್ಕೆ ತಂದಿರುವುವು. ಇನ್ನಿದರ ಫಲಾನುಭವಕ್ಕೆ ನಾವೂ ಭಾಗಿಗಳಾಗಿಯೇ ಇರುವೆವು. ಆದುದರಿಂದ, ಎಲೈ ಮಗುವೆ! ನಮ್ಮ ವಿಚಾರಶೂನ್ಯತೆಗಾಗಿ ಈಗ ಪರಿತಪಿಸುತ್ತಿರುವ ನಮ್ಮನ್ನು ನೋಡಿ, ನಿನ್ನ ಈವರೆಗಿನ ವರ್ತನವನ್ನು ಪರಿವರ್ತನಕ್ಕೆ ತರುವ ಪ್ರಯತ್ನವನ್ನು ಹಿಡಿ. ನಿನ್ನ ಮುಂದಿನ ಅಭ್ಯುದಯದಲ್ಲಿಯೂ ನಿನ್ನ ಜನ್ಮಧಾರಣೆಗೆ ಕಾರಣರೂ ಆಧಾರಭೂತರೂ ಆಗಿರುವ ಜನನೀಜನಕರನ್ನು, ಸಂತೋಷಪಡಿಸಿ ಕೃತಾರ್ಥತೆಯನ್ನು ಹೊಂದಬೇಕೆಂಬ ದೃಢಸಂಕಲ್ಪವನ್ನು ಮಾಡಿ, ಕರ್ತವ್ಯದಲ್ಲಿ ಕಯ್ಯೊಡ್ಡಿ ನಿಲ್ಲು. ಇನ್ನೇನು ಹೇಳಲಿ! ಇಂದಿಗೆ, ಇಷ್ಟಕ್ಕೆ ಸಾಕಾಗಿರಲಿ. ನೀನು ಇಂದಿನ ನನ್ನ ಹಿತವಾದವನ್ನು ಕೇಳಿ, ಮುಂದಕ್ಕೆ ಬರುವೆಯೆಂಬ ನನ್ನ ನಿರೀಕ್ಷೆಗೆ ಭಗವಂತನೇ

ಸಹಾಯಕನಾಗಿರಲಿ!

ರವಿ:—(ತಾಯಿಯ ಮುಖವನ್ನು ನೋಡಿ ತಲೆದೂಗುತ್ತ) ಅಮ್ಮ! ನಿಮ್ಮ ಮನಸ್ಸಿನಲ್ಲಿ ಹೀಗಿರುವುದು ನಿಜವಾದರೆ, ಅದು ಫಲಕಾರಿಯೇ ಆಗುವುದರಲ್ಲಿ ಏನೂ ಸಂಶಯವಿಲ್ಲ. ಆದರೆ ನೋಡಿರಿ! ನಾನು ಇಲ್ಲಿಗೆ ನಿಮ್ಮಿಂದ ಕರೆಯಿಸಲ್ಪಡದೆಯೇ ಬಂದೆನೆಂಬ ಆಗ್ರಹವು, ಅಪ್ಪನಿಗೆ ಉಂಟಾಗಿರಬಹುದು. ಆದರೆ ನಾನೇನು ಮಾಡಲಿ? ನನಗೆ ಅಲ್ಲಿರಲಾಗಲಿಲ್ಲ. ಸೋದರಮಾವನು ನಮ್ಮಲ್ಲಿ ಅಭಿಮಾನಿಯಾಗಿದ್ದರೆ, ಆತನ ಪತ್ನೀಪರಿವಾರದವರೂ ನಮ್ಮಲ್ಲಿ ಅಭಿಮಾನಿಗಳಾಗಿರುವರೆಂದು ಹೇಗೆ ನಂಬಬಹುದು? ನೀವೇ ಯೋಚಿಸಬಾರದೇ? ನಿಮ್ಮನ್ನು ಬಿಟ್ಟು, ಪರಸ್ಥಳದಲ್ಲಿ-ಪರಾಧೀನದಲ್ಲಿ ನರಳಬೇಕಾಯಿತೆಂಬ ಕೊರತೆಯೂ, ಅವರಿವರಾಡುವ ಅಪವಾದಗಳಿಂದ ಅಂತಸ್ತಾಪ ಹೊಂದಿ ಕೃಶರಾಗುವುದೂ ಇವೆರಡೇ ಫಲವಲ್ಲದೆ, ಪರಸ್ಥಳದಲ್ಲಿದ್ದ ನನಗೆ ಮತ್ತಾವ ಲಾಭವುಂಟಾಯಿತು? ಸ್ವಾಭಿಮಾನಿಗಳಿಗೆ ಪರಾಧೀನಕ್ಕೂ ಹೆಚ್ಚಾದ ನರಕಾನುಭವವಿರುವುದೇ-ಹೇಳಲಾರಿರೇನಮ್ಮ?

ವಸು:—ನೀನು ಹೇಳುವುದೆಲ್ಲವೂ ನಿಜವೇ! ಆದರೂ ಮೊದಲಿಂದಲೂ ಅತಿಯಾದ ಲಾಲನೆಯಿಂದ ಬೆಳಯಿಸಿದಕಾರಣ, ನಮ್ಮಲ್ಲಿ ಹೆಚ್ಚಿನ ಸಲಿಗೆಯುಂಟಾಗಿ, ವ್ಯಾಸಂಗದಲ್ಲಿ ಅಭಿರುಚಿಯು ಕಡಿಮೆಯಾಗುತ್ತಿದ್ದುದರಿಂದ ನಾಲ್ಕಾರು ತಿಂಗಳಮಟ್ಟಿಗಾದರೂ ಬೇರೆಯಾಗಿರಿಸಿ, ಅದರಿಂದ ನಿನ್ನ ಮನಸ್ಸಿನಲ್ಲಿ ವಿಚಾರಶಕ್ತಿ, ಅನುವರ್ತನ ಗುಣಗಳನ್ನುಂಟುಮಾಡುವ ಕಷ್ಟಸಹಿಷ್ಣುತೆಯೂ, ಅದಕ್ಕೆ ತಕ್ಕ ಧೈರ್ಯಸ್ಥೈರ್ಯಗಳೂ ನಿನಗೆ ಲಭಿಸುವಂತೆ ಮಾಡಬೇಕೆಂಬುದೇ ನಮ್ಮ ಉದ್ದೇಶವಾಗಿತ್ತಲ್ಲದೆ ಬೇರಿಲ್ಲ. ಅದು ಹಾಗಿರಲಿ; ಮಹಾಮಹೋಪಾಧ್ಯಾಯರು ಬಂದಿರುವರೆಂದು ಕೇಳಿದೆನು; ನಿಜವೆ?

ರವಿ:—ಬಂದಿರುವುದೂ ನಿಜ; ಅವರಲ್ಲಿ ವಿದ್ಯಾಭ್ಯಾಸ ಮಾಡಲು ನಮ್ಮಿಬ್ಬರನ್ನೂ ಒಪ್ಪಿಸಿದುದೂ ನಿಜ; ಅಲ್ಲದೆ, ಇಷ್ಟರಲ್ಲಿಯೇ ಅವರೂ

ಇಲ್ಲಿಗೆ ಬರುವರೆಂಬ ವಿಚಾರವೂ ನಿಜ. ಮತ್ತೇನು ಹೇಳಬೇಕು!

ಚೇಟಿ:—(ತೆರೆಯ ಕಡೆ ನೋಡಿ ಸಂಭ್ರಮದಿಂದ) ಮಂಗಳವಾಗಲಿ; ಸುಕುಮಾರ ರಮಾನಂದನಿಗೆ ಸುಖಾಗಮನವು.

(ರಮಾನಂದನ ಪ್ರವೇಶ.)

ರಮಾ:—(ವಿನೀತನಾಗಿ ಬಂದು ವಸುಮತೀದೇವಿಗೆ ವಂದಿಸಿ ಕೈಮುಗಿದು) ಪ್ರಿಯ ಜನನಿ! ಗುರುಕುಲವಾಸಕ್ಕಾಗಿ ತಂದೆಯಾಣತಿಯಿಂದ ಈಗಲೇ ಹೊರಡುವೆವು. ಸಂತೋಷದಿಂದ ನಮ್ಮನ್ನು ಹರಸಿ ಬೀಳ್ಕೊಡಬೇಕು.

ವಸು:—(ರಮಾನಂದನ ಕೈಹಿಡಿದು ಬಳಿಯಲ್ಲಿ ಕುಳ್ಳಿರಿಸಿ, ಪ್ರೀತಿವ್ಯಂಜಕ ಸ್ವರದಿಂದ) ಸುಕುಮಾರ! ವಿವೇಕಿಯಾಗಿಯೇ ಇರುವ ನಿನಗೆ ಬೇರೆ ಹೇಳುವುದೇನು? ಇಷ್ಟೆ; ಗುರುಕುಲವಾಸವು ನಿಮ್ಮ ಪುರೋವೃದ್ಧಿಗೆ ಕಾರಣವಾಗಿರಬೇಕಲ್ಲದೆ, ದುರಾಚಾರಕ್ಕೆ ದಾರಿಯನ್ನು ಕೊಡುವಂತಾಗಬಾರದು. ಗುರುಕುಲವಾಸವೆಂಬ ಈ ಬಲವತ್ತಪಶ್ಚರ್ಯೆಯೇ ನಿಮ್ಮ ಸರ್ವಾಂಗಕ್ಕೂ, ಅಪ್ರತಿಹತವಾದ ಕಾಂತಿಯನ್ನು ಕೊಡತಕ್ಕುದು. ಈ ತಪಶ್ಚರ್ಯೆಯನ್ನು ಬಿಟ್ಟರೆ,-ಕಾಂತಿಗೆ ಸ್ಥಿರತೆಯಿರುವುದಿಲ್ಲವಾದುದರಿಂದ ನೀವು ಬಹು ಜಾಗರೂಕರಾಗಿದ್ದು, ಈ ತಪೋವೃತ್ತಿಯಲ್ಲಿ ಕೃತಾರ್ಥರಾಗಿ ಬರಬೇಕು. ತಪಸ್ಸಿದ್ಧಿಯುಂಟಾಗುವದಕ್ಕೆ ಸತ್ಯವೂ, ವಿನಯವೂ ಸಮತೂಕವಾಗಿ ನಿಮ್ಮಲ್ಲಿರಬೇಕು. ಅವೆರಡರಲ್ಲಿ ಒಂದಿಲ್ಲದಿದ್ದರೂ ನಿಮ್ಮ ವ್ರತಕ್ಕೆ ಹಾನಿಯು ತಪ್ಪದು. ಅವೆರಡೂ ನಿಮ್ಮಲ್ಲಿ ದೃಢಮೂಲವಾಗಿರಬೇಕಾದರೆ, ನಿಮ್ಮಲ್ಲಿ ಪರಸ್ಪರ ಸೌಜನ್ಯವೂ ಬಲವಾಗಿರಬೇಕು. ಸೌಜನ್ಯಕ್ಕೆ ತಾಳ್ಮೆಯೇ ಮೂಲವಾದುದರಿಂದ ಅದನ್ನು ಮೊದಲು ನೀವು ಅಭ್ಯಾಸಕ್ಕೆ ತಂದಿರಬೇಕು. ತಾಳ್ಮೆಯಿಲ್ಲದಿದ್ದರೆ ನೀವು ಗುರುಕುಲವಾಸ ಮಾಡಲು ಅರ್ಹರಾಗುವುದಿಲ್ಲ. ಏಕೆಂದರೆ— "ಗುರುಕುಲವಾಸದಲ್ಲಿರುವ ವಿದ್ಯಾರ್ಥಿಗೆ ಗುರುವೇ ತಂದೆ, ಗುರುವೇ ತಾಯಿ, ಗುರುವೇ ದೈವ, ಗುರುವೇ ಸಮಸ್ತ ಸುಖಸಾಧನೆಗಳಿಗೂ ಮೂಲ" ಎಂದೀ ಬಗೆ

ಯಾಗಿ ಬಲ್ಲವರಾಡುವುದರಿಂದ, ನಿಮ್ಮ ಗುರುಕುಲವಾಸದಲ್ಲಿ ನಿಮಗೆ ಆ ಗುರುವೇ ತಂದೆಯೆಂದೂ, ಗುರುಪತ್ನಿಯೇ ತಾಯಿಯೆಂದೂ, ಗುರುಪುತ್ರರೇ ನಿಮ್ಮ ಒಡಹುಟ್ಟಿದವರೆಂದೂ, ಅವರ ಆಪ್ತೇಷ್ಟರೇ ನಿಮಗೂ ಸುಹೃತ್ತುಗಳೆಂದೂ ಭಾವಿಸಬೇಕಾದುದು ನಿಮ್ಮ ಧರ್ಮವು. ಆದುದರಿಂದ ಅಂತಹ ಗುರುಜನರಲ್ಲಿ ನೀವು ಸರ್ವಪ್ರಕಾರದಿಂದಲೂ ವಿನಯ, ಭಯ, ಭಕ್ತಿಭಾವಗಳಿಂದ ಸೇವಿಸುತ್ತಿರಬೇಕೆಂಬುದನ್ನು ಹೇಗೂ ಮರೆಯಲೇಬಾರದು.

ರಮಾನಂದ:—ತಾಯೆ! ಎಲ್ಲವನ್ನೂ ಮನಸ್ಸಿನಲ್ಲಿಟ್ಟು, ಅದರಂತೆಯೇ ನಡೆಯುವೆನು. ಸಂಶಯಪಡದೆ ಮತ್ತೇನಿದ್ದರೂ ನಿರೂಪಿಸಿ, ಅನುಗ್ರಹಿಸಬೇಕು

ವಸು:—ಮತ್ತೇನು ಹೇಳಲಿ? ರಮಾನಂದ! ನೀನೂ, ನಿನ್ನ ಅಣ್ಣನಾದ ರವಿವರ್ಮನೂ ಏಕಕಾಲದಲ್ಲಿ ಗುರುಕುಲವಾಸಕ್ಕೆ ತೆರಳುತ್ತಿರುವಿರಾದುದರಿಂದ, ಅಲ್ಲಿ ನೀವು ಒಬ್ಬರನ್ನೊಬ್ಬರು ದ್ವೇಷಿಸದೆ, ಅನ್ಯೋನ್ಯಮೈತ್ರೀ ಭಾವದಿಂದ ಯಾವಾಗಲೂ ಎಡಬಿಡದಿದ್ದು ನಿಮ್ಮ ಒಡನಾಡಿಗಳಿಗೂ ಗುರುಜನಕ್ಕೂ ಮನಸ್ಸಂತೋಷವನ್ನುಂಟುಮಾಡುವಂತಿರಬೇಕು. ಒಬ್ಬರು ಮೈಮರೆತು ಅಕ್ರಮದಲ್ಲಿ ನಡೆಯುತ್ತಿದ್ದರೆ, ಮತ್ತೊಬ್ಬರು ಅವರನ್ನು ಎಚ್ಚರಿಸಿ, ಸರಿಯಾದ ರೀತಿಗೆ ತರಬೇಕೆಂಬುದನ್ನೂ ಇತರರ ಶ್ರೇಯೋಭಿವೃದ್ಧಿಯೇ ನಮ್ಮ ಶ್ರೇಯಸ್ಸಾಧನವೆಂಬುದನ್ನೂ ನೀವು ನೆನಪಿನಲ್ಲಿಟ್ಟು ಪರಸ್ಪರ ಸಹಾಯಕರಾಗಿದ್ದು, ನಿಮ್ಮ ನಿಮ್ಮ ಗುರುಕುಲವಾಸ, ವಿದ್ಯಾಭ್ಯಾಸಗಳನ್ನು ಸಾಂಗವೆನ್ನಿಸಿಕೊಂಡು ಬರಬೇಕೆಂಬುದೇ ನನ್ನ ಹಿತಸೂಚನೆ.

ತೆರೆಯಲ್ಲಿ: "ಸಾಧು! ಸಾಧು!! ಅಹುದು; ಇದೀಗ ಸುಶಿಕ್ಷಿತಸ್ತ್ರೀಯರ ಹಿತಬೋಧೆ."

(ವಸುಮತಿಯು ಚಕಿತೆಯಾಗಿ ತೆರೆಯಕಡೆ ನೋಡಿ, ಥಿಗ್ಗನೆದ್ದು ನಿಲ್ಲುವಳು. ರಮಾನಂದ--ರವಿವರ್ಮಕುಮಾರರೂ ಎದ್ದು ತಾಯಿಯ ಬಳಿಯಲ್ಲಿ ನಿಲ್ಲುವರು.)

( ಮಹಾಮಹೋಪಾಧ್ಯಾಯನೊಡನೆ ಶ್ರೀಮಂತನ ಪ್ರವೇಶ. )

ಶ್ರೀಮಂತ:—(ಮುಂದೆ ಬಂದು) ದೇವಿ! ಮಹನೀಯರ ಸುಖಾಗಮನದಿಂದ ನಾವೆಲ್ಲರೂ ಪವಿತ್ರರಾದೆವೆಂದೇ ಭಾವಿಸಬೇಕು. ಮೊದಲು ಈ ಪೂಜ್ಯರಿಗೆ ನಮಸ್ಕರಿಸು.

ವಸು:—(ತಲೆಬಾಗಿ) ಪೂಜ್ಯರಿಗೆ ವಂದನೆ.

ವಿದ್ಯಾ:—ಶುಭಾಂಗಿ! ಭಗವಂತನು ನಿತ್ಯಕಲ್ಯಾಣವನ್ನುಂಟು ಮಾಡಲಿ.

ವಸು:—ತಪೋನಿಷ್ಠರಾದ ತಮ್ಮ ಅನುಗ್ರಹ ಬಲದಿಂದ ಎಲ್ಲವೂ ಸಿದ್ಧಿಸುವುದೆಂದೇ ನಂಬಿರುವೆನು.

ವಿದ್ಯಾ:—ತಾಯಿ! ನಿನ್ನ ಈಗಿನ ಬೋಧನೆ, ಶಿಕ್ಷಣ, ವಿಚಾರ ವಿಮರ್ಶೆಗಳೆಲ್ಲವೂ ಉಚಿತ ರೀತಿ-ನೀತಿಗಳಲ್ಲಿ ನಡೆಸಲ್ಪಟ್ಟಿದನ್ನು ನೋಡಿ, ನನಗಾದ ಸಂತೋಷವು ಅಪಾರವಾಗಿದೆ. ನಿನ್ನಂತೆಯೇ ಇತರ ಸೋದರಿಯರೆಲ್ಲರೂ ತಮ್ಮತಮ್ಮ ಮಕ್ಕಳ ಪೋಷಣೆ, ಶಿಕ್ಷಣೆ, ವಿಚಾರಣೆಗಳಲ್ಲಿ ಸಂಪೂರ್ಣಶ್ರದ್ಧೆಯನ್ನು ವಹಿಸುವುದಾದರೆ, ನಮ್ಮ ಈ ಮಾತೃಭೂಮಿಯಲ್ಲಿ ದಾರಿದ್ರ್ಯ, ರೋಗ, ಭಯ, ಸಂತಾಪಗಳೊಂದೂ ನಿಲ್ಲುವುದಿಲ್ಲವೆಂದು ಧೈರ್ಯದಿಂದ ಸಾರಿಸಾರಿ ಹೇಳಬಲ್ಲೆನು. ಹಾಗಾಗಲು ಇನ್ನೆಷ್ಟುಕಾಲದವರೆಗೆ ನಿರೀಕ್ಷಿಸಬೇಕೋ-- ತಿಳಿಯದು. ಹೇಗೂ ನೀನು ಸತೀಕುಲಾದರ್ಶಮಹಿಳೆಯಾಗಿದ್ದು, ಸತ್ಪುತ್ರವತಿಯೆನ್ನಿಸಿರುವುದಕ್ಕಾಗಿ ಅಭಿನಂದಿಸುತ್ತಿರುವೆನು!

ವಸು:—ಪೂಜ್ಯರೆ! ಈ ಸ್ತುತಿಗೆ ಪಾತ್ರರಾದವರು ನಮ್ಮ ಪತಿರಾಜರಲ್ಲದೆ ನಾನಲ್ಲ; ನಾನು ನನ್ನ ಕರ್ತವ್ಯದಲ್ಲಿ ಅಲ್ಪಾಂಶವನ್ನು ಮಾತ್ರವೇ-ಅದನ್ನೂ ಪತಿರಾಜರ ಅನುಗ್ರಹ ಬಲದಿಂದ ನಡೆಸುತ್ತಿರುವೆನು. ಅದರಲ್ಲಿಯೂ ಕೃತಾರ್ಥಳಾಗಿರುವೆನೆಂದು ಹೇಳಲಾರೆನು!

ವಿದ್ಯಾ:—(ಸಂತೋಷದಿಂದ) ಹಾಗೆ ಹೇಳುವುದೇ ಹೆಂಗಸರಿಗೆ ಉಚಿತವು. (ಶ್ರೀಮಂತನಕಡೆಗೆ ತಿರುಗಿ)-"ಅಯ್ಯಾ! ಲೋಕಯಾತ್ರೆಗೆ ಸಹ

ಚಾರಿಣೀ ಸಖಿಯಾದ ಇಂತಹ ಸಹಧರ್ಮಿಣಿಯನ್ನು ಹೊಂದಿರುವ ನೀನೇ ಸುಕೃತಶಾಲಿ.”

ಶ್ರೀಮಂತ:—(ವಿನಯದಿಂದ) ಎಲ್ಲವೂ ತಮ್ಮಂತಹ ಹಿರಿಯರ ಆಶೀರ್ವಾದದಿಂದಾದುದು. (ವಸುಮತಿಯ ಕಡೆಗೆ ತಿರುಗಿ)—ದೇವಿ! ಸುಕುಮಾರರಿಗೆ ಆವಶ್ಯಕವಾದ ಹಿತವನ್ನು ಹೇಳಿರುವೆಯಷ್ಟೆ?

ವಸು:—ನನಗೆ ತಿಳಿದಷ್ಟನ್ನು ತಕ್ಕಮಟ್ಟಿಗೆ ಹೇಳಿರುವೆನು. ಇನ್ನು ಮುಂದೆ ಹೇಳುವ ಭಾಗವು ತಮ್ಮದಾಗಿಯೇ ಇರುವುದು.

ಶ್ರೀಮಂತ:—ಸಂತೋಷ! (ರವಿವರ್ಮ-ರಮಾನಂದರನ್ನು ಕುರಿತು)-ಸುಕುಮಾರರೆ! ಇನ್ನು ಇತ್ತ ಬನ್ನಿರಿ.

ರವಿ-ರಮಾ:—(ಮುಂದೆ ಬಂದು) ಸಿದ್ಧರಾಗಿದ್ದೇವೆ; ಏನಪ್ಪಣೆ?

ಶ್ರೀಮಂತ:—ಸುಕುಮಾರರೆ! ನೀವು ಈವರೆಗೂ ಇದ್ದಂತೆ ಮುಂದೆಯೂ ಇರುವುದಕ್ಕಾಗದು. ಮುಂದೆ ನೀವು ಕಲಿಯತಕ್ಕ ಕಲೆಗಳೂ, ತಿಳಿಯತಕ್ಕ ವಿಚಾರಗಳೂ ಮತ್ತು ಮಾಡಬೇಕಾದ ಅಭ್ಯಾಸಗಳೂ ಹೇರಳವಾಗಿರುವುವು. ನೀವು ಇನ್ನೂ ಬಾಹ್ಯಪ್ರಪಂಚವನ್ನು ನೋಡಿದವರೇ ಅಲ್ಲವಾದುದರಿಂದ, ನಿಮಗೆ ಈಗ ನಾವು ಹೇಳುವ ಒಂದೆರಡು ನೀತಿವಾಕ್ಯಗಳನ್ನು ಚೆನ್ನಾಗಿ ಕಿವಿಗೊಟ್ಟು ಕೇಳಿರಿ.

ರವಿ-ರಮಾ:—ಆಜ್ಞಾಧೀನರಾಗಿಯೇ ಇರುವೆವು.

ಶ್ರೀಮಂತ:—ಬಾಲಕರೆ! ಕೇಳಿರಿ,—ಮೊದಲು ವಿದ್ಯಾರ್ಥಿಗಳಾಗಿರುವ ನೀವು, ನಿಮ್ಮ ಗುರುಕುಲವಾಸದಲ್ಲಿ, ನಿಮ್ಮ ಮನೆತನದ ಹೆಮ್ಮೆಯನ್ನು ದೂರದಲ್ಲಿ ಕಟ್ಟಿಟ್ಟು, ನಿಮ್ಮ ಇತರ ಸಂಗಡಿಗರೊಡನೆ ಸಹಜಭಾವನೆಯಿಂದಿರುವುದನ್ನು ಅಭ್ಯಸಿಸಬೇಕು. ಆ ಬಳಿಕ, ನಿಮ್ಮ ಸಂಗಡಿಗರನ್ನು ಹೀಯಾಳಿಸಿ,--ನಿಮ್ಮನ್ನು ನೀವೇ ಹೊಗಳಿಕೊಳ್ಳುವ ಕೆಟ್ಟನಡತೆಯನ್ನು ಬಿಟ್ಟುಬಿಡಬೇಕು. ಒಂದೇ ಗುರುಪೀಠದಲ್ಲಿ ಅಭ್ಯಸಿಸುತ್ತಿರುವ ನೀವೆಲ್ಲರೂ ಒಬ್ಬ ತಂದೆಯ ಮಕ್ಕಳೆಂದೇ ತಿಳಿದು,

ಎಲ್ಲರೂ ಒಡಹುಟ್ಟಿದ ಪ್ರೀತಿಯಿಂದ ಒಕ್ಕಟ್ಟಾಗಿದ್ದು, ಒಬ್ಬರಲ್ಲಿ ಮತ್ತೊಬ್ಬರು ಸದಸದ್ವಿವೇಚನೆಯನ್ನು ಮಾಡುತ್ತ ನಿಮ್ಮ ನಿಮ್ಮ ಪಾಠ ಪ್ರವಚನಗಳನ್ನು ಕ್ರಮವಾಗಿ ನಡೆಯಿಸಿಕೊಂಡು ಬರುವ ಅಭ್ಯಾಸವನ್ನು ಹಿಡಿಯಬೇಕು. ನಿಮ್ಮಲ್ಲಿ ಆಹಾರ, ನಿದ್ರೆ, ವ್ಯಯಗಳೇ ಮೊದಲಾದ ವ್ಯವಹಾರಗಳು ಮಿತರೂಪದಲ್ಲಿರಬೇಕು. ಅತಿಯಾದರೆ ನೀವೂ ದುಂದುಗಾರರೆನ್ನಿಸಿ, ನಿಮ್ಮನಿಮ್ಮ ಪಾಲಕರನ್ನೂ ದೂರಿಗೆಳೆದು ಗೋಳಿಡುವಂತೆ ಮಾಡುವಿರಿ. ಆದುದರಿಂದ, ಯಾವಾಗಲೂ ದುಂದುವೆಚ್ಚವು ನಿಮ್ಮಲ್ಲಿ ಸೇರಲಾಗದು.

ರವಿ-ರಮಾ:—ಶಿರಸಾವಹಿಸಿದೆವು.

ಶ್ರೀಮಂತ:—ಹೂಂ! ಇನ್ನು ನಿಮಗೆ ಹೆಚ್ಚು ಹೇಳಬೇಕಾದುದಿಲ್ಲ. ಈವರೆಗೆ ನಾವು ಹೇಳಿರುವುದೆಲ್ಲವನ್ನೂ ನೆನಪಿನಲ್ಲಿಟ್ಟು, ನಿಮ್ಮ ಗುರುಸನ್ನಿಧಾನದಲ್ಲಿ ಪ್ರೌಢಶಿಕ್ಷಣೆಯನ್ನು ಹೊಂದಿ ಬರುವಿರೆಂದು ದೃಢಭರವಸೆಯಿಂದ ನಿಮ್ಮನ್ನು ಬೀಳ್ಕೊಡುವೆನು. ನಿಮ್ಮ ಮೇಲಿನ ಸರ್ವಸ್ವಾತಂತ್ರ್ಯವೂ ಇಂದಿನಿಂದ ಗುರುಗಳನ್ನೇ ಸೇರಿರುವುದು. ನಿಮ್ಮಲ್ಲಿ ತೋರಿಬರಬಹುದಾದ ನ್ಯೂನಾತಿರಿಕ್ತ ದೋಷಗಳಿಗೆ ತಕ್ಕ ದಂಡವನ್ನು ವಿಧಿಸುವುದಕ್ಕಾಗಲೀ ನಿಮ್ಮಲ್ಲಿ ಪರಮೋತ್ಕೃಷ್ಟವಾದ ಸದ್ಗುಣಗಳು ತೋರಿಬಂದರೆ, ಬಹುಮಾನಿಸುವುದಕ್ಕಾಗಲೀ ಇವರು ಬಾಧ್ಯರಾಗಿರುವುದರಿಂದ, ನೀವು ಇವರ ಬಳಿಯಲ್ಲಿ ನಮ್ಮಲ್ಲಿರುವಂತೆಯೇ ಇರಬೇಕೆಂದು ಮತ್ತೊಂದುಬಾರಿ ಎಚ್ಚರಿಸಿರುವೆನು.

ತೆರೆಯಲ್ಲಿ: "ಭಗವಂತನೆ, ಭಾಸ್ಕರನೆ, ಭುವನತ್ರಯಾಧಾರನೆ, ಸರ್ವಲೋಕಸಾಕ್ಷಿವಂತನೆ! ನಿನಗಿದೆ ಅನೇಕ ವಂದನೆಗಳು. ಯಾವ ನಿನ್ನ ಉದ್ದಂಡಕಿರಣಸಮೂಹವು ಈ ಸಮಸ್ತ ಜೀವರಾಶಿಗಳಲ್ಲಿಯೂ ಅಡಗಿರುವ ದೋಷಗಳನ್ನು ಅಪಹರಿಸಿ, ಸಮಸ್ತ ಜೀವರಾಶಿಗಳೂ ವಿಗತಕಲ್ಮಷರಾಗಿ ನಿನ್ನನ್ನೇ ಭಜಿಸುವಂತೆ ಮಾಡುವ ಅದ್ಭುತಪ್ರಭಾವವುಳ್ಳವೋ, ಅಂತಹ ಚಂಡಕಿರಣದ ಮಧ್ಯಾಹ್ನಮಾರ್ತಾಂಡನಾಗಿರುವ ನಿನಗಿದೊ ವಂದನೆಗಳು." (ವಾದ್ಯಗಳ ಕೋಲಾಹಲ)

ವಸುಮತಿ:— ಆರ್ಯಪುತ್ರ! ಮಧ್ಯಾಹ್ನಕಾಲವು ಸಮಾಹಿತವಾಗಿದೆಯೆಂದು ಸೂಚಿಸುವ ಭೇರೀತಾಡನವಿದೋ ಕೇಳುತ್ತಿರುವುದು. ಸುಕುಮಾರರು ಗುರುಕುಲವಾಸಕ್ಕಾಗಿ ತೆರಳುವವರಾಗಿರುವರು. ಪರಮಕಲ್ಯಾಣಗುಣಸ್ವರೂಪರಾಗಿ ಸಾಕ್ಷಾತ್ಕರಿಸಿರುವ ಈ ಮಹನೀಯರನ್ನು ಈ ವೇಳೆಯಲ್ಲಿ ಹಾಗೆಯೇ ಬೀಳ್ಕೊಡುವುದು ಸರಿಯಾಗಿ ಕಾಣುವುದಿಲ್ಲ. ಶಿಷ್ಯರೊಡನೆ ಗುರುವರ್ಯರೂ ಆಹ್ನಿಕಕ್ರಿಯೆಗಳನ್ನು ನೆರವೇರಿಸಿ, ಭಗವದಾರಾಧನೆಯನ್ನು ಯಥಾವಿಧಿಯಾಗಿ ನಡೆಯಿಸಿ, ನಮ್ಮ ಸತ್ಕಾರವನ್ನೂ ಸ್ವೀಕರಿಸಿ, ಆ ಬಳಿಕ ಪ್ರಯಾಣವನ್ನು ಬೆಳೆಯಿಸಬಹುದೆಂಬುದು ನನ್ನ ಪ್ರಾರ್ಥನೆಯಾಗಿದೆ.

ಶ್ರೀಮಂತ:— (ವಿದ್ಯಾವಾಗೀಶನ ಕಡೆಗೆ ತಿರುಗಿ) ದೇವಿಯು ಪ್ರಾರ್ಥನೆಯನ್ನು ಅಂಗೀಕರಿಸಬೇಕೆಂದು ಕೋರುವೆನು.

ವಿದ್ಯಾ:— (ಸಂತೋಷದಿಂದ) ಹಾಗೆಯೇ ಆಗಲಿ, ನಡೆಯಿರಿ; ಎಲ್ಲರೂ ಒಟ್ಟಾಗಿ ದೇವರ ಪ್ರಾರ್ಥನೆಯನ್ನು ನಡೆಯಿಸುವ.

(ಎಲ್ಲರೂ ತೆರಳುವರು.)

---

## ಭಗವತ್ಪ್ರಾರ್ಥನೆ.

ರಾಗ— ( ಸಾಕೇಳೀದೂರು, ಛೀಕೆಲ )

ಸಾಕೇತಾಧಿಪ—ಶ್ರೀಕರರೂಪ—ಜಿತಕೋಪ—ಸತ್ವಸ್ವರೂಪ ||ಪ||
ಕರಧೃತಚಾಪ—ಖಂಡಿತತಾಪ |
ಕವಿಜನಾಲಾಪ—ಪಾಹಿಪರಂತಪ || —ಸಾಕೇತಾ ||೧||
ಅರಿಜನ ಭೀಕರ—ಕರಿವರ ಶ್ರೀಧರ |
ವರದಾಭಯಕರ—ಪರಮ ಕೃಪಾಕರ || —ಸಾಕೇತಾ ||೨||
ಇನಕುಲ ಮಂಡನ—ವನರುಹಲೋಚನ |
ಭವಬಂಧ ಮೋಚನ—ಭಕ್ತಾರ್ತಿ ಭಂಜನ || —ಸಾಕೇತಾ ||೩||
ಕ್ಷಿತಿನಾಥರಾಘವ—ಸತತಸಂಪ್ರಭವ |
ಸುತಶೇಷಗಿರೀಧವ—ವಿಜಿತಮನೋಭವ || —ಸಾಕೇತಾ ||೪||

—ಇಷ್ಟಕ್ಕೆ ಪ್ರಥಮಾಂಕವು—

॥ ಶ್ರೀಃ ॥

# ದ್ವಿತೀಯಾಂಕ

## (ಪ್ರಾರ್ಥನೆ)

ಕಂದ ||  " ಜಯ ಜಯ ಕೌಸಲ್ಯಾತ್ಮಜ ।
ಜಯ ಜಯ ಭಕ್ತಾಧೀನ ನತಸುರ ಸಮಾಜಾ ॥
ಜಯ ಜಯ ಶತರವಿ ತೇಜಾ ।
ಜಯ ಜಯ ಮಮದೇವ ಕಾಮಿತಕಲ್ಪಭೂಜ ॥ * "

---

ರಾಗ—ಹಿಂದುಸ್ಥಾನಿ (ಬಟುವಾಯ್ಯುಂದನದರೇಮಿ)

ಜಯಜಾನಕೀರಮಣ— ಜಯಕೌಸ್ತುಭಭರಣ—ಜಯಪಾವನಚರಣ ||ಪ||
ಜಯಜಯ ಕೌಸಲ್ಯಾನಂದವರ್ಧನ— ಜಯಪಾವನಚರಣ ||ಅನು||
ಜಗದೋದ್ಧರಣ—ಅಪಾರಕರುಣಾ—ಅಗಜಾರ್ಚಿತಚರಣ ||
ಖಗೇಶಗಮನ—ಜಲನಿಧಿಶಯನ—ಸುರಾರಿಕುಲಸಂಹರಣ || ಜಯ ||೧||
ಸೂನೃತಪಾಲ—ಜಾನಕೀಲೋಲ—ದೀನಜನಾವಾಲ ||
ದಾನವಕಾಲ—ಶ್ರೀವನಮಾಲ—ಮಾನಿತಗುಣಶೀಲ || ಜಯ ||೨||
ಶೇಷಗಿರೀಶ—ಶ್ರಿತಪರಿಪೋಷ—ವಾಸವಪರಿತೋಷ ||
ದೋಷವಿನಾಶ—ದಶಶಿರಧ್ವಂಸ—ಕವಿಜನ ಮಾನಸಹಂಸ || ಜಯ ||೩||

———o———

### ಸ್ಥಾನ ೧:— ವಿದ್ಯಾಶಾಲೆಯ ಬಾಲೋದ್ಯಾನದ ಮುಂಭಾಗ.

[ ರಮಾನಂದನ ಸಹಾಧ್ಯಾಯಿ ಸುಮುಖನ ಪ್ರವೇಶ.]

ಸುಮುಖ:— ( ಮೇಲೆ ನೋಡಿ ಸೂರ್ಯನಿಗೆ ಕೈಮುಗಿದು ) ಜಗದುಜ್ಜೀವನನೇ, ಲೋಕಲೋಚನನೇ, ಸರ್ವಲೋಕ ನಮಸ್ಕೃತನೆ, ಸರ್ವಲೋಕಸಾಕ್ಷಿಮಂತನೆ, ಸಚ್ಚಿದಾನಂದ ನಿಲಯನೆ, ದಯಾಘನನೆ,

---

* " ಜಯಜಯ ಮಮದೇವ, ರಾಘವ ಮದನ ವಿಭವಾ " ಎಂದಿರಬಹುದು.

ಭಕ್ತಮಂದಾರನೆ, ಭಗವಂತನಾದ ಭಾಸ್ಕರನೆ, ತ್ರಿಕಾಲವಂದ್ಯನಾದ ನಿನಗೆ ಇದೆ ಇದೆ ಈ ದೀನನ ಕೋಟಿಕೋಟಿ ವಂದನೆಗಳು! ಉದಯಾದ್ರಿಶಿಖರದಲ್ಲಿ ಅಧಿಷ್ಠಾತನಾಗಿರುವ ನಿನ್ನಲ್ಲಿ ಇದೇ ಈ ನಮ್ಮ ದೈನ್ಯಪ್ರಾರ್ಥನೆ. ಪ್ರಭಾಕರನಾದ ನಿನ್ನ ಉದಯವು ನಮ್ಮೆಲ್ಲರಿಗೂ ಸುಪ್ರಭಾತವೇ ಆಗಿ, ನಮ್ಮ ಮೋಹಾಂಧಕಾರವನ್ನು ಹೋಗಲಾಡಿಸಿ, ಜ್ಞಾನೋದಯದಿಂದ ಪರಿಷ್ಕರಿಸಲ್ಪಡುವಂತಾಗಲಿ. ನಿನ್ನೀ ಪವಿತ್ರತಮವಾದ ಕಿರಣಾಳಿಯು, ನಮ್ಮ ಹೃದಯಾಕಾಶದಲ್ಲಿ ವಿವೇಕಸೂರ್ಯನು, ಸಾರಾಸಾರ ವಿವೇಚನೆಯಿಂದ ಸ್ಥಿರಪ್ರಕಾಶವನ್ನು ಹೊಂದುವಂತೆ ಮಾಡಲಿ. ನಿನ್ನ ವಿಶ್ವರೂಪವು ನಮ್ಮ ಜಡಚೇತನಕ್ಕೆ ಚೈತನ್ಯವಿತ್ತು, ಇಹಜೀವನ ಪರಾಕಾಷ್ಠೆಯನ್ನು ಕಾಣಲು, ಕರ್ತವ್ಯಕರ್ಮ ತತ್ಪರತೆಯನ್ನು ಹೊಂದುವಂತೆ ಸದಾಕಾಲ-ಸರ್ವಾವಸ್ಥೆಗಳಲ್ಲಿಯೂ ಸಂರಕ್ಷಿಸುತ್ತಿರಲಿ.—

( ಕೆಳಗೆ ನೋಡಿ-ಭಕ್ತಿಯಿಂದ )

"ಮಾತೆ, ವಸುಂಧರೆ! ಕ್ಷಮಿಸು, ಉದಯದಿಂದ ಅಸ್ತಮಯ ಪರ್ಯಂತವೂ, ನಮ್ಮಿಂದ ಮಾಡಲ್ಪಡಬಹುದಾದ ಸಮಸ್ತ ದೋಷಗಳನ್ನೂ ಕ್ಷಮಿಸಿ, ಪುತ್ರವಾತ್ಸಲ್ಯದಿಂದ ಅನುಗ್ರಹಿಸಿ, ರಕ್ಷಿಸು.

ತಾಯೆ! ನಿನ್ನ ಅನಂತಸಂತಾನದಲ್ಲಿ ನಾನು ಕೇವಲ ಅಣುಮಾತ್ರವಾಗಿರುತ್ತೇನೆ. ಇಂತಹ ಅಖಂಡವಾದ, ಅತ್ಯದ್ಭುತವಾದ, ಅಕ್ಷಯವಾದ ನಿನ್ನ ಈ ವಿಶ್ವರೂಪವನ್ನು ಸೇವಿಸುವ ಶಕ್ತಿಯು ನನಗೆ ನಿನ್ನ ದಯೆಯಿಂದಲೇ ದೊರೆಯಬೇಕಲ್ಲದೆ, ಮತ್ತೇತರಿಂದಲೂ ದೊರೆಯಲಾರದಲ್ಲವೆ? ದೇವಿ! ವೀರಪ್ರಸವಿನಿಯಾದ ನಿನ್ನ ಅಂತಃಕರಣದ ಆಶೀರ್ವಾದವು ನಮ್ಮನ್ನು ನಿರಂತರವೂ ಎಡೆಬಿಡದೆ ರಕ್ಷಿಸುತ್ತಿರುವಲ್ಲಿ, ನಮಗೆ ಮತ್ತಾವ ಭೀತಿಗೇ ಆಗಲಿ ಕಾರಣವೆಲ್ಲಿಯದು! ಪ್ರಿಯಮಾತೆಯಾದ ನಿನ್ನ ಸೇವೆಯೊಂದರಲ್ಲಿಯೇ ನಮ್ಮ ಚಿತ್ತವು ನಿರತವಾಗಿರಬೇಕಲ್ಲದೆ, ಇತರ ದುರ್ವ್ಯಸನರೋಗದಿಂದ ವ್ಯರ್ಥ

ವಾಗುವಂತೆ ಮಾಡದಿರಬೇಕೆಂಬ ನಮ್ಮೀ ಪ್ರಾರ್ಥನೆಯು ನಿನ್ನಿಂದ ಅನುಗ್ರಹಿಸಲ್ಪಡಲಿ. ”

( ಸಭೆಯಕಡೆಗೆ ತಿರುಗಿ )

ಲೋಕದಲ್ಲಿ ಅಂತಃಶುದ್ಧಿಯಿಲ್ಲದವನಿಂದ ಯಾವ ಸತ್ಕಾರ್ಯವೂ ನೆರವೇರಲಾರದು. ಸಮಸ್ತ ಕಾರ್ಯಸಿದ್ಧಿಗೂ ಹೇತುವಾದ ಈ ಅಂತಃಶುದ್ಧಿಯು ಸಮಸ್ತ ಮಾನವರಿಗೂ ಅವಶ್ಯವಾಗಿರತಕ್ಕದ್ದು. ಯಾರಿಂದ ಈ ಅಂತಃಶುದ್ಧಿ ಅಥವಾ ಸದ್ಭಾವನೆಯು ಅಭ್ಯಾಸಮಾಡಲ್ಪಡುವುದಿಲ್ಲವೋ, ಅವರು ಪ್ರಪಂಚಕ್ಕೇ ವಿರೋಧಿಗಳಾಗಿ ಪರಿಣಮಿಸುವರು. ಅಂತಹರಿಗೆ ಸ್ವಜನರಿಲ್ಲ; ಬಂಧುಮಿತ್ರರಿಲ್ಲ; ಗುರುಹಿರಿಯರೆಂಬ ವಿವೇಚನೆ ಮೊದಲೇ ಇರುವುದಿಲ್ಲ; ಎಂದ ಬಳಿಕ ಒಡಹುಟ್ಟಿದವರ ಮಾತೇನು? ದಾಯಾದ ಮಾತ್ಸರ್ಯವೊಂದು ಅಂತಹರಿಗೆ ಸಹಾಯಕವಾಗಿದ್ದು, ಕುಲಕ್ಕೂ ಮಾನಕ್ಕೂ ಧರ್ಮಕ್ಕೂ ಅಂತಕಸ್ವರೂಪರಾಗಿ ತಿರುಗುವಂತೆ ಮಾಡಿಬಿಡುವುದೆಂದರೆ ಸಾಕಾಗಿದೆ. ಇದಕ್ಕೆ ಬೇರೆ ನಿದರ್ಶನವೇಕೆ? ಸದ್ಭಾವನಾಯೋಗದಲ್ಲಿ ಸಿದ್ಧಿಹೊಂದಿರುವ ನಮ್ಮ ಸುಕುಮಾರ-ರಮಾನಂದನನ್ನು ನೋಡಿದರೆ, ಸಹಾಧ್ಯಾಯಿಗಳಾಗಿರುವ ನಮ್ಮೆಲ್ಲರಿಗೂ ಪರಮಾನಂದವುಂಟಾಗುವುದು. ಆದರೆ, ಅಂತಹ ಬಾಲಯೋಗಿಯಮೇಲೆ ದ್ವೇಷವನ್ನು ಸಾಧಿಸುತ್ತಿರುವ ಅವನ ಅಣ್ಣ-ರವಿವರ್ಮನನ್ನು ಸ್ಮರಿಸಿದ ಮಾತ್ರಕ್ಕೆ ಭಯವೂ, ಸಂತಾಪವೂ ಏಕಕಾಲದಲ್ಲಿ ಉಂಟಾಗುತ್ತಿರುವವು. ಆತನು ಮಾವನಮನೆಯಿಂದ ಬಂದು, ರಮಾನಂದನೊಡನೆ ಗುರುಕುಲವಾಸಕ್ಕೆ ಕಳುಹಲ್ಪಟ್ಟು, ಇನ್ನೂ ನಾಲ್ಕಾರುತಿಂಗಳ ಪರಮಾವಧಿಯಲ್ಲಿಯೇ, ಯೋಗ್ಯತಾಪರಿಶೀಲನೆಗೆಂದು ನಿಯಮಿತವಾಗಿದ್ದ ಈ ಅವಧಿಯಲ್ಲಿಯೇ, ತಮ್ಮನ ಮೇಲೆಯೂ ತಮ್ಮನಿಗೆ ಅನುಯಾಯಿಗಳಾಗಿರುವ ನಮ್ಮ ಮೇಲೆಯೂ ಎಷ್ಟೊಂದು ಹಗೆತನವನ್ನು ಬೆಳಸುತ್ತಿರುವನು! ಅಭಿನ್ನೋದರರಲ್ಲಿಯೇ ಈಬಗೆಯ ಈರ್ಷ್ಯಾಸೂಯೆಗಳುಂಟಾದರೆ, ಹೇಳುವದಿನ್ನೇನು?

ಹಾ, ಕಷ್ಟ! ಕಷ್ಟ!! ಪ್ರಬಲನಾಗಿರುವ ಈತನ ಕಿರುಕುಳವನ್ನು ನಮ್ಮ ಕುಮಾರನು ನಿರ್ವಹಿಸುವುದೆಂದರೆ ಬಹುಕಷ್ಟ!!!

(ತೆರೆಯಲ್ಲಿ)"ಮಿತ್ರರೆ! ದುಷ್ಟನ ಏಳಿಗೆಯು ಸಹನಾತೀತವಾಗಿದೆ."

ಸುಮುಖ:—(ತೆರೆಯಕಡೆ ನೋಡಿ ಗಾಬರಿಯಿಂದ) ಬಂದೇ ಬಂದನು-ಧೂರ್ತನಾದ ರವಿವರ್ಮನು ತನ್ನ ಸಹಚರರೊಡನೆ ಆಲೋಚಿಸುತ್ತ ಬರುವಂತಿದೆ. ಈತನಲ್ಲಿ ಅಷ್ಟಾಗಿ ಭರವಸೆಯಿಡಬೇಡವೆಂದು ನಾವು ಎಷ್ಟು ಹೇಳಿದರೂ ರಮಾನಂದನು ಕೇಳದೆ, ಅಣ್ಣನೆಂದೂ ಗುರುವೆಂದೂ ಹಿತೈಷಿಯೆಂದೂ ಗೌರವಬುದ್ಧಿಯಿಂದ ನೋಡುತ್ತಿರುವನು. ಈ ಮಾಯಾವಿಯಾದರೋ ಕೃತ್ರಿಮಸಂಧಾನದಿಂದ, ತಮ್ಮನ ಜೀವಿತವನ್ನೇ ಕೊನೆಗಾಣಿಸಬೇಕೆಂದು ಪ್ರಯತ್ನಿಸುತ್ತಿರುವನು. ಏನು ಮಾಡುವುದು? ಭಗವಂತನೇ ಸಹಾಯಕನಾಗಿರಲಿ. ನಾನು ಈಗಲೇ ಹೋಗಿ, ಶಾಲೆಗೆ ಹೊತ್ತಾಯಿತೆಂದು ಕುಮಾರನನ್ನು ಎಚ್ಚರಿಸಿ ಕರೆತರುವೆನು. (ಎಂದು ಹೋಗುವನು.)

(ನಳ-ಕಳಿಂಗ-ರೆಂಬ ಸಹಚರರೊಡನೆ ರವಿವರ್ಮನ ಪ್ರವೇಶ.)

ರವಿ:—ಪ್ರಿಯಮಿತ್ರರೆ! ಆ ರಮಾನಂದ-ಹಂತಕನಿಂದ ನಮಗಾಗುತ್ತಿರುವ ಅಪಮಾನವನ್ನು ಹೇಗೆ ಸಹಿಸಬೇಕು? ಕುಂತಲನಗರದಲ್ಲಿಯೇ ಇದ್ದಿದ್ದರೆ, ನಮಗೆ ಇಷ್ಟುರಸಂತಾಪಕ್ಕೆ ಕಾರಣವಿರುತ್ತಿರಲಿಲ್ಲ. ಅಲ್ಲಿ ಮಾವನನ್ನು ವಂಚಿಸಿ, ಆತನ ಮನೆಯವರೊಡನೆ ವಿರೋಧವನ್ನು ಕಟ್ಟಿಕೊಂಡು, ಇಲ್ಲಿಗೆ ಬಂದುದಕ್ಕೆ ನಮಗಿದೇ ಸನ್ಮಾನವೇನು?

ಕಳಿಂಗ:—ಕುಮಾರನೆ! ಮಿಂಚಿದ ಕಾರ್ಯದಲ್ಲಿ ಚಿಂತಿಸಿ ಫಲವಿಲ್ಲ; ಮುಂದೆ ಮಂದತ್ವದಿಂದಿರುವುದು ಮಾತ್ರ ಸರಿಯಲ್ಲ.

ರವಿ:—ಮಿತ್ರರೆ! ಆ ನೀಚನ ಏಳಿಗೆಯು ನನ್ನ ಸರ್ವನಾಶ ಮಾಡುವಂತಿದೆಯೆಂದೂ, ಆತನ ಕುಟಿಲನಡತೆಯಿಂದ ವಂಚಿತರಾಗಿರುವ ತಾಯಿತಂದೆಗಳು ನನಗೆ ವಿರೋಧಿಗಳಾಗಿಯೇ ತಿರುಗಿರುವ

ರೆಂದೂ ನನ್ನ ಅಂತರಾತ್ಮವು ಹಗಲೂ ಇರುಳೂ ಕೊರಗಿ ಕೊರಗಿ ಬೇಸತ್ತು ಹೋಗುತ್ತಿರುವುದು. ಇದಕ್ಕೇನು ಮಾಡಲಿ? ಉಪಾಯ ವೇನು?

ನಳ:— ಮಿತ್ರನೆ! ವ್ಯಥಾಶೋಕದಿಂದ ಫಲವಿಲ್ಲ. ಮಾಡಬೇಕಾದುದೇನಿದ್ದರೂ, ಚರ್ಚಿಸಿ ಮಾಡುವುದರಿಂದ ಲಾಭವುಂಟು. ಈ ಸ್ಥಳವು ನಮ್ಮ ಮಂತ್ರಾಲೋಚನೆಗೆ ತಕ್ಕುದಾಗಿರುವುದರಿಂದ, ಇಲ್ಲಿಯೇ ಕುಳಿತು, ಸಾವಧಾನವಾಗಿ ಸಮಾಲೋಚಿಸುವ?

ಕಳಿಂಗ:—ಸಹಜ. ಇದೊ ಇಲ್ಲಿರುವ ಕಲ್ಲುಮಂಟಪದಲ್ಲಿ ಕುಳಿತು, ನಮ್ಮ ಕೆಲಸಗಳನ್ನು ನಿರ್ಧರಿಸಬಹುದು.

ರವಿ:—ಹಾಗಿದ್ದರೆ ಬನ್ನಿರಿ. (ಮಿತ್ರರೊಡನೆ ಮುಂದೆಬಂದು ಕುಳಿತು) ನನ್ನ ಪ್ರಾಣಾಪ್ತಮಿತ್ರರೆ! ನನಗೆ ತಾಯಿತಂದೆಗಳೇ ಮೊದಲಾದ ಸಮಸ್ತ ಬಾಂಧವರಿಗೂ ಹೆಚ್ಚಾದ ಆಪ್ತರೇ ನೀವೆಂದು ನಂಬಿರುವೆನು. ಇದನ್ನು ನಾನು ತ್ರಿಕರಣಶುದ್ಧವಾಗಿ ಹೇಳಿದ ಮಾತೆಂದು ನಂಬಿರಿ.

ನಳ:—ಆಯುಷ್ಮಂತನೇ! ಇದೇನಿಂದು ಇಷ್ಟು ಕಾತರನಾಗಿರುವೆ? ನೀನಿದನ್ನು ಬಾಯ್ದೆರೆದು ಹೇಳಬೇಕೆ? ನಿನ್ನ ವಿಶ್ವಾಸವು ಎಷ್ಟರದೆಂಬುದನ್ನು ನಾವು ಅರಿತಿಲ್ಲವೇ? ಸುಮ್ಮನೇಕೆ ಬಳಲುವೆ? ಯಾವ ವಿಚಾರವಿದ್ದರೂ ನಮ್ಮಲ್ಲಿ ಸಂಪೂರ್ಣ ಭರವಸೆಯಿಟ್ಟು ಹೇಳು. ನಮಗೆ ತೋರಿದಂತೆ ಸರಿಪಡಿಸುವೆವು.

ರವಿ:—(ನಳನ ಕೈಹಿಡಿದು) ನಳನೆ! ಆ ದುರಭಿಮಾನಿಯಾದ ರಮಾನಂದನು ನನಗೆ ಪ್ರಬಲ ವೈರಿಯಾಗಿದ್ದಾನೆಂಬುದು ನಿಮಗೆ ತಿಳಿದೇ ಇದೆಯಷ್ಟೆ?

ನಳ-ಕಳಿಂಗ:—ಬಲ್ಲೆವು, ಬಲ್ಲೆವು.

ರವಿ:— ಅವನು ತಾನೇ ತಾಯ್ತಂದೆಗಳ ಮತ್ತು ಗುರುಗಳ ಪೂರ್ಣಾನುಗ್ರಹಕ್ಕೆ ಪಾತ್ರನಾದವನೆಂಬ ಹೆಮ್ಮೆಯಿಂದಲೂ ತಾನೊ

ಬ್ಬನೇ ವಿದ್ಯಾವಂತನೆಂಬ ಹೆಚ್ಚುಗೆಯಿಂದಲೂ ಯಾವದಾದರೂ ಒಂದು ನೆವದಿಂದ ಪ್ರತಿದಿನವೂ ನಮ್ಮನ್ನು ಹಂಗಿಸಿ, ಭಂಗಿಸುತ್ತಿರುವುದನ್ನು ಕೂಡ ನೀವು ಬಲ್ಲಿರಲ್ಲವೆ?

ಕಳಿಂಗ:—ಬಲ್ಲೆವು, ಬಲ್ಲೆವು.

ರವಿ:—ಹೆಮ್ಮೆಗಾರನಾದ ಆತನು, ಅಣ್ಣನೆಂದು ಒಂದಿಷ್ಟಾದರೂ ನನ್ನಲ್ಲಿ ಗೌರವಬುದ್ಧಿಯನ್ನಿಡದೆ, ಹಾಗೆ ನನ್ನ ಪ್ರತಿಷ್ಠೆಗೆ ಹಾನಿಯನ್ನುಂಟುಮಾಡುತ್ತಿರುವನೆಂಬ ವಿಚಾರವು ನನ್ನ ಪರಮಾಪ್ತರಾದ ನಿಮಗೆ ವಿಷಾದವನ್ನುಂಟು ಮಾಡುವುದೂ ನಿಜವಷ್ಟೆ?

ಕಳಿಂಗ:—ಸಂದೇಹವೇನು? ನ್ಯಾಯವಾಗಿ ಯಾರಿಗೆ ಪ್ರಥಮ ಸನ್ಮಾನವು ಸಲ್ಲಬೇಕೋ, ಅದು ಅವರಿಗೆ ದೊರೆಯದೆಯೇ ಹೋಗಿ ಬೇರೊಬ್ಬನ ಕೈಸೇರುವುದೆಂದರೆ, ಎಂತಹ ನಾಚಿಗೆಕೇಡಿನ ಸಂಗತಿ? ನಿನಗೆ ದೊರೆಯಬೇಕಾದ ಮರ್ಯಾದೆಯು ಅವನ ಪಾಲಾದರೆ ವ್ಯಸನವಲ್ಲವೇನು?

ರವಿ:—ಅಯ್ಯೊ! ಬರಿಯ ಮರ್ಯಾದೆಯ ಮಾತು ಹಾಗಿರಲಿ. ಆತನು ನಮ್ಮ ವಿಚಾರವಾಗಿ ಉದಾಸೀನದಿಂದಾದರೂ ಇದ್ದರೆ ಸಾಕೆಂದರೆ ಅದೂ ಇಲ್ಲ. ಅದರಲ್ಲಿಯೂ, ಅವನು ನಿನ್ನೆ ಮಾಡಿದ ಅಪಮಾನವು ನನಗೆ ಎಂತಹ ಸಂಕಟವನ್ನುಂಟು ಮಾಡುತ್ತಿದೆಯೋ ಹೇಳಲಾದೀತೇ?

ಕಳಿಂಗ:—(ಕುತೂಹಲದಿಂದ) ಅದೇನು? ಏನು ಮಾಡಿದನು?

ರವಿ:—(ನಿಟ್ಟುಸಿರಿಟ್ಟು) ಅಯ್ಯೊ! ಏನು ಹೇಳಲಿ? ನಿನ್ನೆ, ನಾನು ಶಾಲೆಯ ಬಾಲೋದ್ಯಾನದ ಬಳಿಗೆ ಹೋದೆನು. ಅಲ್ಲಿ ತನ್ನ ಸಂಗಡಿಗರೊಡನೆ ಚಲ್ಲಾಟವಾಡುತ್ತಿದ್ದ ಆತನು ನನ್ನನ್ನು ಕಂಡೊಡನೆಯೇ ಅಟ್ಟಹಾಸದಿಂದ ಮೊರೆದನು.

ಕಳಿಂಗ:—ಹೇಗೆ ಮೊರೆದನು? ಏನು ಮಾಡಿದನು? ನಿನ್ನಲ್ಲಿ ಕದನಕ್ಕೇನಾದರೂ ಬಂದನೇನು?

ರವಿ:—ಇಲ್ಲ. ಹಾಗೆ ನನ್ನೊಡನೆ ಕದನಕ್ಕೆ ಬಂದಿದ್ದರೆ, ಆತನಿಗೆ ಆಗಲೇ ಸರಿಯಾದ ಪ್ರಾಯಶ್ಚಿತ್ತವನ್ನು ತೋರಿಸುತ್ತಿದ್ದೆ. ಅದನ್ನು ಆವನೇನೂ ತಿಳಿಯದವನಲ್ಲ.

ನಳ:—ಹಾಗಾದರೆ ಮತ್ತೇನು ಮಾಡಿದನು?

ರವಿ:—ತನ್ನ ಪ್ರೌಢಿಮೆಯನ್ನು ಕುರಿತು ಹೊಗಳಿಕೊಳ್ಳುತ್ತ, ನನ್ನನ್ನು ವಾಕ್ಶಲ್ಯದಿಂದ ಬಲವಾಗಿ ನೋಯಿಸಿದನು.

ನಳ:—(ಕುತೂಹಲದಿಂದ) ಏನೆಂದು ಹೇಳಿದನು? ಬಿಚ್ಚಿಹೇಳ ಬಹುದಷ್ಟೆ?

ರವಿ:—"ಕಳ್ಳನಾಗಬೇಡ; ಸುಳ್ಳುಗಾರರೊಡನೆ ಸೇರಬೇಡ; ಮೈಗಳ್ಳರೊಡನಾಡಿ, ಮೇಲಾದ ವಿದ್ಯೆಯನ್ನು ತೊರೆಯಬೇಡ; ತಾಯ್ತಂದೆಗಳ ಶೋಕಕ್ಕೆ ನೀನೆಂದಿಗೂ ಕಾರಣನಾಗಬೇಡ." ಹೀಗೆ ಹೇಳಿ ನನ್ನನ್ನು ನಿರ್ಲಕ್ಷ್ಯವಾಗಿ ಕಂಡು ಅಗೌರವಪಡಿಸಿದನು.

ಕಳಿಂಗ:—ಆಹಾ! ಹೀಗೂ ಹೆಮ್ಮೆಯುಂಟೋ? ಇರಲಿ. ಈ ಹೆಮ್ಮೆಯು ಎಲ್ಲಿಯವರೆಗೆ ನಿಂತಿರುವುದೆಂಬುದನ್ನು ನಾನೂ ನೋಡದೆ ಹೋಗುವುದಿಲ್ಲ!

ನಳ:—ಅಯ್ಯ! ಆತನು ನಿನಗೇನೂ ಅಹಿತವನ್ನು ಹೇಳಿಲ್ಲ ಅದನ್ನು ಹೇಳಿರುವುದು ನಿನ್ನ ಸಂಗಡಿಗರಾದ ನಮ್ಮನ್ನು ಕುರಿತು ಹೇಳಿದ ಮಾತಾಗಿದೆ. ಇದಕ್ಕೇಕೆ ನಿನಗೆ ಚಿಂತೆ?

ರವಿ:—(ನಿಟ್ಟುಸಿರಿಟ್ಟು) ಅಯ್ಯ. ಮಿತ್ರನೆ! ಕೈ, ಕಾಲು, ಕಣ್ಣು. ಕಿವಿಗಳಲ್ಲಿ ಯಾವುದಕ್ಕೆ ಏಟುಬಿದ್ದರೂ. ಆತ್ಮನು ಕ್ಲೇಶಪಡುವ ನಲ್ಲವೆ? ಏಕದೇಹನ್ಯಾಯದಿಂದ ವರ್ತಿಸುತ್ತಿರುವ ನಮ್ಮಲಿ ಯಾವ ಒಬ್ಬನನ್ನು ಹಳಿದರೂ, ನಮಗೆಲ್ಲರಿಗೂ ಅದು ಸೇರಿದಂತಲ್ಲವೇ? ಇದರಿಂದ ನಮ್ಮ ಚಿತ್ತವು ಅಪಮಾನಾಗ್ನಿಗೆ ತುತ್ತಾಗಿ ತಪಿಸುವುದೂ ಸ್ವಭಾವವಲ್ಲವೇ?

ಕಳಿಂಗ:—ಓಹೋ! ಸಂದೇಹವೇ ಇರುವುದಿಲ್ಲ. ಇದು

ನಮ್ಮೆಲ್ಲರಿಗೂ ಸೇರಿದ ಮಾತಾಗಿದೆ. ಇದಕ್ಕೆ ನಾವೆಲ್ಲರೂ ಸೇರಿಯೇ ಪ್ರತೀಕಾರವನ್ನು ಮಾಡಬೇಕಾಗಿದೆ.

ನಳ:—ಹಾಗಿದ್ದರೆ ನಿಮ್ಮ ಅಭಿಪ್ರಾಯವೇನು?

ರವಿ:—ಬಾಲೇಂದುವಿನಂತೆ ಅಭ್ಯುಧಿತನಾಗುತ್ತಿರುವ ಶತ್ರುವಿನ ಏಳಿಗೆಯನ್ನು ನೋಡಿ ನೋಡಿ, ಪರಿತಪಿಸುತ್ತಿರುವ ನನ್ನಂತಹ ಭಾಗ್ಯಹೀನರ ಅಭಿಪ್ರಾಯವಿನ್ನೇನು?

ಕಳಿಂಗ:—ಕುಮಾರನೇ! ನೀತಿಜ್ಞನಾದ ನೀನೇ ಹೀಗೆ ಹೆಂಗಸಂತೆ ಕಳವಳಿಸುವುದು ತಕ್ಕುದಲ್ಲ; ಸಮಾಧಾನವನ್ನು ವಹಿಸಿ, ಮುಂದಿನ ಕೆಲಸವನ್ನು ಆಲೋಚಿಸು.

ರವಿ:—ಮಿತ್ರರೇ! ಯಾವನ ಮೂಲಕವಾಗಿ ನಾನು ಕುಲ, ಭೋಗ, ಸಂಪದಗಳೆಲ್ಲಕ್ಕೂ ಎರವಾಗಿ ತಿರುಗುವಂತಾಗಿರುವೆನೋ, ಅಂಥವನಿಗೆ ಪ್ರತೀಕಾರಮಾಡದೆ ಬಿಟ್ಟರೆ ನನಗೆ ಹೇಗೂ ಉಳಿಗಾಲವಿಲ್ಲ,

ನಳ:—ಮಿತ್ರನೆ! ಕೇವಲ ಬಾಲಮಾತ್ರನಾದ ರಮಾನಂದನನ್ನು ನೀನು ಸಮಾನಸ್ಕಂಧನಾದ ವೈರಿಯಂತೆ ಭಾವಿಸಿ ಹೀಗೆ ಶಂಕಿಸುತ್ತಿರುವುದು ಆಶ್ಚರ್ಯವಾಗಿದೆ ?

ರವಿ:—ಅಯ್ಯೋ, ನಳನೆ! ರಮಾನಂದನು ನನಗೆ ನಾಲ್ಕಾರು ವರ್ಷಗಳಷ್ಟು ಕಿರಿಯನಾಗಿದ್ದರೂ, ಪ್ರಬಲಾಶ್ರಯದಿಂದ ಬಲಿಷ್ಠನಾದ ಶತ್ರುವಾಗಿಯೇ ಇರುವನು. ಹಾಗೂ ಒಂದುವೇಳೆ ಆತನನ್ನು ಬಾಲಮಾತ್ರನೆಂದೆಣಿಸಿ ಬಿಟ್ಟೆನಾದರೆ, ಮುಂದೆ ಅವನೇ ಅತ್ಯಂತ ಪ್ರಬಲನಾಗಿ, ನಮ್ಮ ದಾಯಭಾಗವೆಲ್ಲಕ್ಕೂ ಸೊನ್ನೆಸುತ್ತುವುರದಲ್ಲಿ ಸಂದೇಹವಿಲ್ಲ. ಆದುದರಿಂದ, ಆತನು ತಲೆಯೆತ್ತದಂತೆ ಈಗಲೇ ನಿಗ್ರಹಿಸುವುದು ಸಹಜವಾಗಿದೆ. ಏಕೆಂದರೆ—

“ಚಿಗುರೆಂದುಂ ಮೆಲಿಬೇವು ಸ್ವಾದುವಹುದೇ-ಚೇಳ್ ಚಿಕ್ಕದೆಂಪಳ್ಕರಿಂ |
ತೆಗೆಯಲ್ ಚುಚ್ಚದೆ, ಪಾಲನೂಡಿ ಪುಲಿಯಂ ಸಾಕಲ್ಕೆ ವಿಶ್ವಾಸಿಯೇ ||

ಖಗನಂ ಸಾಕುವೆನೆಂದು ಗೂಗೆಮರಿಯಂ ಸಂಪ್ರೀತಿಯಿಂದೋವರೇ |
ಪಗೆಯಂ ಬಾಲಕನೆಂಬರೇ.......................(ಪ. ಸಾ.)

ಎಂದೀಬಗೆಯಿಂದ ದೇಶಕಾಲಸ್ಥಿತಿಗಳನ್ನು ಬಲ್ಲ ಕವಿವರನೇ ಹೇಳಿಲ್ಲವೇ?

ನಳ:—ರಮಾನಂದನನ್ನು ಹಾಗೆಯೇ ಬಿಡಬೇಕೆಂಬುದು ನನ್ನ ಅಭಿಪ್ರಾಯವಲ್ಲ. ಆದರೆ, ಕಬ್ಬಿಣ ಕಾದಾಗ ಬಡಿಯಬೇಕಲ್ಲದೆ ದುಡುಕಿದರೆ ಕೆಡುವುದಷ್ಟೆ?

ಕಳಿಂಗ:—ನಿಜ. 'ಸಮಯಸಿಕ್ಕಿದಾಗಲೇ ಶತ್ರುನಿಗ್ರಹ ಮಾಡು.' ಎಂಬ ನೀತಿಯುಂಟು.

ರವಿ:—ಅಹುದು. ನಿಮ್ಮ ಹಿತಸೂಚನೆಯು ಸರಿಯಾಗಿಯೇ ಇರುವುದು. ಆದರೂ, ಸಮಯವೆಂಬುದು ನಮ್ಮ ಪ್ರಯತ್ನವಿಲ್ಲದೆ ದೊರೆಯಲಾರದಷ್ಟೆ?

ನಳ:—ಹಾಗಾದರೆ, ನಮ್ಮ ಪ್ರಯತ್ನವು ಯಾವ ಬಗೆಯದಾಗಿರಬೇಕು? ಪ್ರಯತ್ನದಿಂದ ಸಮಯವು ಹೇಗೆ ದೊರೆವುದು?

ರವಿ:— ಹೇಗಿರಬೇಕು, ಹೇಗೆ ದೊರೆಯುವುದು—ಎಂದರೆ, ಕಾಲ-ಕರಣಗಳನ್ನು ನೋಡಿ, ಕಾರ್ಯಸಾಧನೆಗೆ ತಕ್ಕಂತೆ ಸಾಧನಗಳನ್ನು ಹವಣಿಸಿಕೊಳ್ಳುವುದೇ ನಮ್ಮ ಪ್ರಯತ್ನವಾಗಿರುವುದು. ಅಂಥದರಿಂದ ವೈರಿಯ ಪ್ರತಿಷ್ಠಾಭಂಗಮಾಡುವುದೇ ನಮಗೆ ದೊರೆಯತಕ್ಕ ಸಮಯವಾಗಿರುವುದು. ಹಾಗೆ ಮಾಡದೆ, ಸಮಯವನ್ನೇ ನಿರೀಕ್ಷಿಸುತ್ತ ಕುಳಿತರೆ ಉದ್ದೇಶಭಂಗವಾಗುವುದಲ್ಲದೆ ಮತ್ತಾವ ಪ್ರಯೋಜನವೂ ಆಗುವುದಿಲ್ಲ.

ನಳ:—ಆಗಲಿ; ಯಾವರೀತಿಯಿಂದ ಕಾರ್ಯಸಾಧನೆ ಮಾಡಬೇಕೆಂದು ಯೋಚಿಸುತ್ತಿರುವೆ?

ರವಿ:— ಮತ್ತೇನು ? ಆತನ ಹೆಮ್ಮೆಯಡಗುವಂತೆಯೂ ಸಹವಾಸಬಲದಿಂದ ಪ್ರತ್ಯೇಕಿಸಲ್ಪಡುವಂತೆಯೂ, ಗುರುಸಮ್ಮುಖದಲ್ಲಿ

ಅಪರಾಧಿಯಾಗಿ ಪರಿಗಣಿಸಲ್ಪಟ್ಟು ದಂಡನೆಗೆ ಗುರಿಯಾಗುವಂತೆಯೂ ಮಾಡಬೇಕಾದ ಹಲವು ಭೇದೋಪಾಯಗಳನ್ನು ಪ್ರಯೋಗಿಸಬೇಕೆಂಬುದೇ ನನ್ನ ಆಲೋಚನೆಯಾಗಿದೆ.

ಕಳಿಂಗ:—ಅಹುದಹುದು. ಹಾಗೆಯೇ ಮಾಡಬೇಕು. ಆ ದುರಭಿಮಾನಿಯು ಸಹಾಧ್ಯಾಯಿಗಳೊಡನೆ ಸರಸ ಪ್ರಸಂಗದಲ್ಲಿ ನಲವೇರಿ ಮೈಮರೆತು ಕುಳಿತಿರುವಾಗ, ಆತನ ತರ್ಕ, ವ್ಯಾಕರಣ, ದಂಡನೀತಿ ಶಾಸ್ತ್ರಪುಸ್ತಕಗಳನ್ನು ಅಪಹರಿಸಿ ಬೈತಿಡುವುದೂ, ಆತನ ಬರೆವಣಿಗೆಯಲ್ಲಿ ಕೊಳೆಯನ್ನು ತುಂಬುವುದೂ, ಆತನ ನಡೆನುಡಿಯಲ್ಲಿ ಕಲಂಕವುಂಟಾಗುವಂತೆ ಇತರ ಮಾಯಾಜಾಲಗಳನ್ನೊಡ್ಡುವುದೂ, ಇವೆಲ್ಲವೂ ಆತನನ್ನು ಸುಲಭವಾಗಿ ಬಲೆಯೊಳಕ್ಕೆ ಕೆಡಹತಕ್ಕವುಗಳಾಗಿವೆ.

ರವಿ:—(ಕಳಿಂಗನ ಬೆನ್ನು ತಟ್ಟಿ) ಭಲೆ! ಭಲೆ!! ಮಿತ್ರನೆ! ಒಳ್ಳೆಯ ಸಲಹೆ! ಬಲು ಒಳ್ಳೆಯ ಮಾಟವನ್ನೇ ತೋರಿಸಿದೆ. ಒಪ್ಪಿತು; ನನಗೆ ಇದು ಚೆನ್ನಾಗಿಯೂ ಒಪ್ಪಿತು. ಇನ್ನು ವೈರಿಯು ನಮ್ಮ ಬಲೆಗೆ ಬಿದ್ದನೆಂದೇ ತಿಳಿದು ಸಮಾಧಾನ ಹೊಂದುವೆನು.

(ತೆರೆಯಲ್ಲಿ) ಕುಮಾರನೆ! ಶಾಲೆಗೆ ಹೊತ್ತು ಮೀರುತ್ತಿಲ್ಲವೇ? ಇದೇಕೆ ಅಲ್ಲಲ್ಲಿಗೆ ತಡೆತಡೆದು ನಿಲ್ಲುತ್ತಿರುವೆ?

ರವಿ:— (ಆತುರದಿಂದ) ಇದೊ ಇದೊ-ಆತನೇ ಇಲ್ಲಿಗೆ ಬರುತ್ತಿರುವನು.

ನಳ:— (ತೆರೆಯಕಡೆ ನೋಡಿ) ಆತನು ಸಹಧ್ಯಾಯಿಗಳೊಡನೆ ಬಾಲೋದ್ಯಾನದಿಂದ ಶಾಲೆಗೆ ಬರುತ್ತಿರುವನು. ಕಪಟತಂತ್ರವನ್ನೇ ತಿಳಿಯದ ಪಶುಪ್ರಾಣಿಯಾದ ಇವನನ್ನು ನಾವು ಜಯಿಸುವುದೇನೂ ಕಷ್ಟವಾಗಿ ಕಾಣುವುದಿಲ್ಲ.

ಕಳಿಂಗ:— ಕಷ್ಟವಾಗಿಲ್ಲದಿದ್ದರೂ, ಮುಂದೆ ನಾವು ನಿರ್ದೋಷಿಗಳಾಗಿಯೇ ಪರಿಗಣಿಸಲ್ಪಡಬೇಕಲ್ಲವೆ ? ಅದಕ್ಕಾಗಿ ಈತನಲ್ಲಿ

ನಾವು ಪರಮಾಪ್ತರಂತೆ ನಟಿಸಿ, ಕಾರ್ಯ ಸಾಧನೆಯನ್ನು ಮಾಡಿಕೊಳ್ಳುವ ಕುಹಕವೇ ಈಗ ಸರಿಯೆಂದು ಹೇಳಬಲ್ಲೆನು.

( ತೆರೆಯಲ್ಲಿ ) ಬರುತ್ತೇನೆ, ಪ್ರಿಯಮಿತ್ರರೆ! ಬರುತ್ತೇನೆ; ಕೋಪಿಸಬೇಡಿರಿ. ಅಲ್ಲಲ್ಲಿಗೂ ವಿಷಯಸಂಗ್ರಹವಾಗುತ್ತಿದ್ದರೆ ಬಿಟ್ಟು ಹೇಗೆ ಬರುವುದು ? ಹೇಳಿರಿ.

ರವಿ:— ಸರಿಸರಿ! ಅದೀಗ ಸರಿಯಾದ ಉಪಾಯ. ಇದೋ ಅವನು ಶಾಲೆಗೆ ಬರುವುದಕ್ಕೆ ಮೊದಲು ನಾವೇ ಹೋಗಿ ಮರೆಯಾಗಿದ್ದು, ಆತನನ್ನು ಚನ್ನಾಗಿ ಪರೀಕ್ಷಿಸುವ; ಇನ್ನು ನಡೆಯಿರಿ.

(ಹೋಗುವರು)

(ಸೌಮ್ಯ, ಸುಮುಖ, ಯುವಾನರೆಂಬ ಸಹಾಧ್ಯಾಯಿಗಳೊಡನೆ ರಮಾನಂದನ ಪ್ರವೇಶ)

ಸೌಮ್ಯ:— ರಮಾನಂದ! ಇದೇನಿದು ಅಲ್ಲಿಗಲ್ಲಿಗೆ ನಿಂತು ನಿಂತು, ಮುದುಮುಗನಂತೆ ಮೆಲ್ಲಡಿಯಿಡುತ್ತ ಬರುತ್ತಿರುವೆ?

ರಮಾ:— ಆಪ್ತರೇ! ಮನಸ್ಸು ವಿವಿಧವಸ್ತುಸಂಗ್ರಹದಲ್ಲಿ ಗಮನಿಸುತ್ತಿದ್ದರೆ, ಪ್ರಕೃತಿಸ್ಥಿತಿಯೇ ಹೀಗಾಗುವುದಿಲ್ಲವೇ? ಇದರಲಿ ಆಶ್ಚರ್ಯವೇನು? ಮದವಣಿಗನ ಮನಸ್ಸು, ನೂತನವಾದ ವಿಷಯರಸಾಸ್ವಾದನೆ ಮಾಡಲು ಹೇಗೆ ವಿಚಾರ ಮಾಡತೊಡಗುವುದೋ, ಹಾಗೆಯೇ ನನ್ನ ಮನಸ್ಸೂ ಇಂದು ವಿಶೇಷ ವಿಚಾರವಿಮರ್ಶೆಯಲ್ಲಿ ಗಮಕಿಯಾಗಿದೆ. ಬಾಧಕವೇನು?

ಸುಮುಖ:— ಬಾಧಕವಾಗಲೀ, ಆಶ್ಚರ್ಯವಾಗಲೀ, ಮತ್ತಾವುದೂ ಇಲ್ಲ. ನಿನ್ನ ಬುದ್ಧಿಶಕ್ತಿ ಅವ್ಯಾಹತವಾಗಿ ಮೇಲೆಮೇಲೇರಿ ಬರುತ್ತಿರುವುದೇ ನಿನ್ನನ್ನು ವಸ್ತುವಿಚಾರವಿಮರ್ಶೆಯಲ್ಲಿ ದಕ್ಷನನ್ನಾಗಿ ಮಾಡುತ್ತಿದೆ. ಅದಿಲ್ಲದೆ, ನಮ್ಮಂತಹರಿಗೆ ಬೇಕೆಂದರೂ, ವಿಚಾರಸಂಗ್ರಹವು ಲಭಿಸುವುದು ದುಸ್ತರವೇ ಸರಿ.

ಯುವಾನ:— ಸುಮುಖನು ಸರಿಯಾಗಿ ಹೇಳಿದನು. ಪ್ರತಿಭಾಸಂಪನ್ನನಾದ ನಿನ್ನ ಬುದ್ಧಿಶಕ್ತಿಯನ್ನು ನೋಡಿಯೇ ಗುರುಗಳು

ನಿನ್ನನ್ನು ಇಂದು ಘನಕಾರ್ಯದಲ್ಲಿ ನಿಯೋಜಿಸಿರುವರು. ನಮ್ಮಂತೆಯೇ ನೀನು ಸ್ಥೂಲಪ್ರಕೃತಿಯುವನಾಗಿದ್ದರೆ, ನಿನ್ನನ್ನು ನಿಯೋಜಿಸುತ್ತಿದ್ದರೇ! ನಾವು ನಿಯೋಜಿಸಲ್ಪಟ್ಟಂತೆಯೇ ನೀನೂ ಯಾವುದಾದರೂ ಕೈಗಾರಿಕೆ ಕೆಲಸಗಳಲ್ಲಿ ನಿಯೋಜಿಸಲ್ಪಡುತ್ತಿದ್ದೆ.

ರಮಾನಂದ:— (ಕಿರುನಗೆಯಿಂದ) ಇದೇನಿದು ? ಮಿತ್ರರೆ ! ಏನಿದು, ಹೀಗೆ ಹೇಳುತ್ತಿರುವಿರಿ?

ಸೌಮ್ಯ:— ಏನೆಂದರೆ, ಮಂದಪ್ರಜ್ಞರ ನುಡಿಯೇ ಇದು. ಅದಿರಲಿ. ಗುರುಗಳು ನಿನಗೆ ಕಟ್ಟುಮಾಡಿರುವ ಕೆಲಸವು ಎಷ್ಟರಮಟ್ಟಿಗೆ ಸಾಧ್ಯವಾಗಿರುವುದು?

ಯುವಾನ:— ನಿಯಮಿತ ಕಾರ್ಯದಲ್ಲಿ, ಸಿದ್ಧಾರ್ಥಿಯಾಗಿಯೇ ಇರಬೇಕೆಂದು ನನಗೆ ತೋರುತ್ತಿದೆ! ಅಲ್ಲವೇ ರಮಾನಂದ?

ರಮಾನಂದ:— (ಕಿರುನಗೆಯಿಂದ) ಅಹುದು, ನಿನ್ನ ಊಹೆಯೂ ತಪ್ಪಾಗುವುದೇನು?

ಸೌಮ್ಯ:—ಯಾವ ಬಗೆಯಾಗಿ ಮಾಡಿರುವೆ? ಸಾರಾಂಶವನ್ನು ಮಾತ್ರ ವಿವರಿಸಿದರೆ ಸಾಕು. ವಿಶೇಷ ವಿವರಣಕ್ಕೆ ಈಗ ಕಾಲಾತಿಕ್ರಮವಾದೀತೆಂಬ ಶಂಕೆ!

ರಮಾ:— ನಿಜ. ವಿಶೇಷ ವಿವರಣೆಗೆ ಈಗ ಸಮಯವಿಲ್ಲ; ಹೇಗಿದ್ದರೂ ಗುರುಸಮ್ಮುಖದಲ್ಲಿ ನಿವೇದಿಸುವಾಗ ತಿಳಿದೇ ತಿಳಿಯುತ್ತದೆ.

ಸಮುಖ: ನಾನು— ಓದಿ ನೋಡಿರುವೆನು. ಸಾಕ್ಷಾತ್ ವಿದ್ಯಾಭವಾನಿ ದೇವತೆಯನ್ನು ಸುಸ್ವರೂಪ, ಸಾಕ್ಷಾತ್ಕಾರ ಭಾವನೆಯಿಂದ ಗದ್ಯರೂಪದಲ್ಲಿಯೂ, ಪದ್ಯರೂಪದಲ್ಲಿಯೂ ಮನೋಜ್ಞರೀತಿಯಿಂದ ವರ್ಣಿಸಿರುವನು. ಅದರಲ್ಲಿಯೂ ಈತನು ಸತ್ಯ, ವಿನಯಗಳನ್ನು ಕುರಿತುಮಾಡಿರುವ ಕಲ್ಪನೆಯೂ ಅತ್ಯುತ್ತಮವಾಗಿದೆ.

ಸೌಮ್ಯ:— (ಆಶ್ಚರ್ಯ ಕುತೂಹಲಗಳಿಂದ) ಅದೇನು, ವಿನಯಕ್ಕೆ

ಅಷ್ಟೆರ ಪ್ರಾಶಸ್ತ್ಯ?

ರಮಾನಂದ:— ವಿನಯವೇ ವಿದ್ಯಾರ್ಥಿಯ ಅರ್ಥಸಿದ್ಧಿಗೆ ಮುಖ್ಯ ಸಾಧನವು. ಅದಿಲ್ಲದಿದ್ದರೆ, ವಿದ್ಯಾಲಾಭವಾಗುವುದಿಲ್ಲ. ಏಕೆಂದರೆ,— "……… ವಿನಯಹೀನನ ವಿದ್ಯೆಯುಂ, ನಂದನನ ಪಡೆಯದ ನರನಸಿರಿಯುಂ ಜಗದಿ ನಿಷ್ಫಲವು— ಎಂದು ಬಲ್ಲವರಿಂದ ಹೇಳಲ್ಪಟ್ಟಂತೆ, ಪುತ್ರಪ್ರಾಪ್ತಿಯಿಲ್ಲದವನ ಸಂಪತ್ತಿಯು ಹೇಗೆ ಊರ್ಜಿತ ಸ್ಥಿತಿಯನ್ನು ಹೊಂದುವುದಿಲ್ಲವೋ ಹಾಗೆಯೇ ವಿನಯವಿಲ್ಲದವನ ವಿದ್ಯಾಭ್ಯಾಸವೂ ನಿರಂತರಾಯವಾಗಿ ನಡೆಯಲಾರದೆ ಹೋಗುವುದು. ಆದುದರಿಂದಲೇ ನಾವು ವಿನೀತರಾಗಿರಬೇಕು.

ಯುವಾನ:— ವಿನಯವೆಂದರೆ ಯಾವುದು? ಹೇಗಿದ್ದರೆ ವಿನೀತನೆನ್ನಿಸಬಹುದು?

ರಮಾನಂದ:— ಯಾರಲ್ಲಿಯೇ ಆಗಲಿ, ಮಲೆತು ಮರ್ಯಾದೆಯನ್ನು ಮೀರಿ ನಡೆಯುವ ಕೆಟ್ಟ ನಡತೆಯನ್ನು ಬಿಟ್ಟು, ವಿಧೇಯನಾಗಿ ಎಂದರೆ— ವಿಶ್ವಾಸಪೂರ್ವಕವಾದ ಗೌರವಬುದ್ಧಿಯಿಂದ ನಡೆಯುತ್ತ ತನ್ನ ಅನುವರ್ತನ ಗುಣದಿಂದ ಇತರರ ಮನಸ್ಸನ್ನು ಪ್ರಸನ್ನವಾಗುವಂತೆ ಮಾಡಿಕೊಳ್ಳುವುದೇ, ವಿನಯದ ಗುಣವಾಗಿರುವುದು. ಇದನ್ನು ಹೊಂದಿರುವವನೇ ವಿನಯಶೀಲ ಅಥವಾ ಸುವಿನೀತನೆಂದು ಕರೆಯಲ್ಪಡುವನು. ಇಂಥವನೇ ವಿದ್ಯಾಲಾಭವನ್ನು ಹೊಂದಲು ಅರ್ಹನಾದವನು.

ಸೌಮ್ಯ:— (ಕಿರುನಗೆಯಿಂದ) ಹಾಗಾದರೆ, ವಾಙ್ಮಾತ್ರದಲ್ಲಿ ಮಾಧುರ್ಯವನ್ನು ತೋರಿಸುತ್ತ ಕಾರ್ಯಸಾಧನೆಯಾಗಲು ತಳ್ಕಿಬಳ್ಕಿ ನಡೆದರೆ ಸಾಕಲ್ಲವೆ?

ರಮಾ:— (ತಲೆದೂಗಿ ನಕ್ಕು) ಚೆನ್ನಾಗಿ ಕೇಳಿದೆ, ಸೌಮ್ಯನೆ! ಆ ಬಗೆಯ ಅಂತರಂಗದಲ್ಲಿ ತಮ್ಮ ಕಾಪಟ್ಯವನ್ನು ಅಡಗಿಸಿಕೊಂಡು, ಮೇಲೆ ವಿನಯಶೀಲರಂತೆ ತೋರಿಸುವ ನಟನೆಯು ಧೂರ್ತರಿಗೆ ಮಾ-

ತ್ರವೇ ಸಲ್ಲುವುದಲ್ಲದೆ, ಸತ್ಯಸಂಧರಿಗೆ ಸಲ್ಲುವುದಿಲ್ಲ. ಒಂದುಬಾರಿ ನಮ್ಮ ಅಂತರಂಗದ ಕಾಪಟ್ಯವನ್ನು ಅಷ್ಟಿಷ್ಟಾಗಿ ತಿಳಿದರೆ ಕೂಡ, ನಮ್ಮನ್ನು ಮತ್ತೆ ಎಂದೆಂದೂ, ಯಾರೂ, ಬಳಿಗೆ ಸೇರಿಸುವುದಿಲ್ಲ. ಹೇಗೆಂದರೆ– ಅತ್ತಿಯ ಹಣ್ಣನ್ನು ಮಾದರಿಗೆ ತೆಗೆದು ನೋಡಿರಿ! ಅದರೊಳಗೆ ಎಷ್ಟು ಹುಳಗಳು ಅಡಗಿರುವುವು? ಅದರ ಮೇಲ್ಗಡೆ ನೋಡುವುದರಿಂದ, ಅದರಲ್ಲಿ ಹುಳಗಳಿವೆಯೆಂದು ಥಟ್ಟನೆ ಹೇಳುವಂತಿದೆಯೇ? ಅದು ಮೇಲೆ ನೋಡಲು ಎಷ್ಟೊಂದು ಸೊಗಸಾಗಿ ಕಾಣುತ್ತಿರುವುದು. ಆದರೇನು? ಅದರಲ್ಲಿರುವ ಕ್ರಿಮಿಗಳಿಂಥವುಗಳೆಂಬುದನ್ನು ತಿಳಿದಿರುವವನು ಅದನ್ನು ಮೂಸಿಯಾದರೂ ನೋಡುವನೋ? ಎಂದಿಗೂ ಇಲ್ಲ. ಹಾಗೆಯೇ ವಂಚಕರನ್ನು ಪರಮಾತ್ಮನು ಎಂದಿ-ಗೂ ಕ್ಷಮಿಸುವುದಿಲ್ಲ. ಪರಮಾತ್ಮನ ನಿಜಗುಣವನ್ನರಿತಿರುವ ಪ್ರಾ-ಜ್ಞರೂ ವಂಚಕರನ್ನು ತಮ್ಮ ಸನ್ಮಿತ್ರ ಸಮಾಜದಲ್ಲಿ ಸೇರಿಸುವುದಿಲ್ಲ. ಹೆಚ್ಚೇಕೆ, ವಂಕಚರನ್ನು ತಾಯಿತಂದೆಗಳಾಗಲೀ, ಹೆಂಡರುಮಕ್ಕಳಾಗಲೀ ನಂಬುವುದಿಲ್ಲ. ಮತ್ತೂ ಹೇಳುವೆನು, ಕೇಳಿರಿ.

ಯಾವನು, ಸತ್ಯ, ವಿನಯ, ಕ್ಷಮೆಯೇ ಮೊದಲಾದ ಸದ್ಗುಣಗಳಿಂದ ಕೂಡಿದವನೋ ಅವನೇ ಲೋಕರಂಜಕನು. ಅತನೇ ಸರ್ವಾಲಂಕಾರಶೋಭಿತನಾದ ಪುಣ್ಯಪುರುಷನು. ಏಕೆಂದರೆ— “ ಗುಣವೇ ಮಾನವನ ಮುಖ್ಯ ಭೂಷಣವಲ್ಲದೆ, ಮಣಿಹೇಮಾಭರಣ ವಸ್ತ್ರಾದಿಗಳು ಭೂಷಣವಾಗಲಾರವು. ಹಣವಂತನನ್ನು ಹಣಕ್ಕೆ ಕುದಿವವರು ಮಾತ್ರವಲದೆ ಮತ್ತಾರೂ ಗಣಿಸಲೊಲ್ಲರು. ಗುಣವಂತನನ್ನು ಜಗತ್ತೇ ಗೌರವಿಸುವುದು.

ಸುಮುಖ:— ನಿಜ! ಅದಕ್ಕಾಗಿಯೇ ಈ ನೀತಿಯು ಹುಟ್ಟಿರಬಹುದು—

**ಕಂದ||** ಗುಣವಂತನಾಗಿ ಬಾಳ್ವುದು ।
ಹಣವಳಿದೊಡೆ ಗುಣವಳಿಯಲ್ಕಾಗದು ಪುರುಷಂ ||

ಗುಣವಂದ ಕಳುವರಲ್ಲದೆ ।
ಹಣಕಳುವರೆ, ಕಳೆದ ಬಳಿಕ ಚೂಡಾರತ್ನಾ ॥

ಸೌಮ್ಯ:— (ಸಂತೋಷದಿಂದ) ಅಯ್ಯಾ, ಸುಮುಖನೆ! ಸತ್ಪುರುಷರ ಸಂಗತಿಯೇ ಸರ್ವಾರ್ಥಸಿದ್ಧಿಪ್ರದವೆಂದು ಬಲ್ಲವರಾಡುವರು. ಆದುದರಿಂದ ಪ್ರಜ್ಞಾಶಾಲಿಯಾದ ನಮ್ಮ ರಮಾನಂದ ಕುಮಾರನ ಸಹವಾಸಲಾಭದಿಂದ, ನಾವೂ ಧನ್ಯರಾಗುವುದರಲ್ಲಿ ಸಂದೇಹವೇನು? ಹೇಗೆಂದರೆ—

ಕಂದ॥ ಸಾರಗುಣಿಯೊಡನೆ ದುರ್ಗುಣಿ ।
ಸೇರಲ್ ಸಲೆಪೂಜ್ಯನಹನದೆಂತೆನೆಮುಡಿಯೊಳ್ ॥
ಸೌರಭ್ಯಕುಸುಮಸಂಗದೆ ।
ನಾರುಂಸಲುವಂತೆ ಸುಗುಣರತ್ನಕರಂಡಾ ॥

ಇದೇ ಸಾಕಾದ ಸಮಾಧಾನವಲ್ಲವೆ?

ಸುಮುಖ:— ಅವೆಲ್ಲವೂ ಸರಿಯೆ; ಇರಲಿ. ( ರಮಾನಂದನನ್ನು ಕುರಿತು) ಅಯ್ಯಾ, ರಮಾನಂದ! ನಿನ್ನೆ, ನೀನು ನಿನ್ನ ಅಣ್ಣನಿಗೆ ಏನಾದರೂ ಹಿತವನ್ನು ಹೇಳಿದೆಯೇನು?

ರಮಾ:—ಹೇಳಿದೆನು— ಸೋಮಾರಿಗಳೊಡನಾಡಿ, ಸಾರವಾದ ವಿದ್ಯಾಧನವನ್ನು ಕಳೆದುಕೊಳ್ಳುವುದು ಸರಿಯಲ್ಲವು-- ಎಂದು ಹೇಳಿದೆನು. ಏಕೆ?

ಸುಮುಖ:— ಅದರಿಂದ ಆತನಿಗೆ ಆಗ್ರಹವುಂಟಾಗುವುದಿಲ್ಲವೆ? ಹಾಗೇಕೆ ಹೇಳಿದೆ?

ರಮಾ:— (ಕಿರುನಗೆಯಿಂದ) ತಿಳಿದೇ ಇದೆಯಷ್ಟೆ. 'ಖಂಡಿತವಾದಿ ಲೋಕವಿರೋಧಿ' ಎಂಬುದು. ಸಾರಾಸಾರ ವಿವೇಚನೆಯುಳ್ಳವನಿಗೆ ನನ್ನ ನುಡಿಯಿಂದ ಆಗ್ರಹವೆಳ್ಳಷ್ಟೂ ಉಂಟಾಗುವುದಿಲ್ಲ. ಒಂದುವೇಳೆ ಆತನು ವಿವೇಕವನ್ನು ಬಿಟ್ಟು ಕೋಪಿಸಿಕೊಂಡರೆ, ನನ್ನನ್ನು ಏನು ಮಾಡಬಲ್ಲನು?

ಸುಮುಖ:— ಏನು ಮಾಡುವನೆಂದರೆ, ತಿಳಿದೇ ಇಲ್ಲವೇ-ಖಲರನಡತೆಗಳನ್ನು ! ಹಿತವನ್ನು ಹೇಳುವವರನ್ನು ಅತಿಯಾಗಿ ದ್ವೇಷಿಸಿ, ಹಲವು ಗಂಡಾಂತರಗಳನ್ನೊಡ್ಡುವುದರಿಂದ ಅವರನ್ನು ಬಳಲಿಸಿ ನಲಿದಾಡುವುದು.

ರಮಾ:— (ನಕ್ಕು) "ಒಂದುವೇಳೆ ಆತನು ಹಾಗೆ ನನ್ನ ಮೇಲೆ ಮುರಿದು ಬೀಳುವುದಾದರೂ, ನನ್ನ ಪರಿಶುದ್ಧಾಂತ:ಕರಣದ ಬಲವು ನನ್ನನ್ನು ಯಾವ ಅಘಾತಕ್ಕೂ ಗುರಿಮಾಡುವುದಿಲ್ಲವೆಂದೂ ತಿಳಿಗೇಡಿಯಾಗಿ ನಡೆದರೆ. ಅದರ ಫಲವು ಅವನಿಗೆ ಬಿಡುವಂತಹದಲ್ಲವೆಂದೂ ಚನ್ನಾಗಿ ತಿಳಿದಿರಿ. ಇದಕ್ಕೇಕೆ ಚಿಂತೆ ?

ಸೌಮ್ಯ:— (ಕುತೂಹಲದಿಂದ) ಆಶ್ಚರ್ಯ! ಏಕಬೀಜೋತ್ಪನ್ನವಾದ ಬೆಳೆಗಳಲ್ಲಿಯೂ ಭಿನ್ನ ಗುಣಗಳುಂಟಾಗಲು ಕಾರಣವೇನು?

ರಮಾ:— ಮಿತ್ರರೆ! ಈ ನಿಮ್ಮ ಪ್ರಶ್ನೆಯು ಬಹು ಕಠಿಣಸಮಸ್ಯೆಯಾಗಿರುವುದು. ಇದಕ್ಕೆ ಸಕಾರಣವಾದ ಸಮಾಧಾನವನ್ನು ಕೊಡಬೇಕಾದರೆ, ಪೂರ್ಣಪಾಂಡಿತ್ಯವಿರಬೇಕು. ಆದರೂ ನನ್ನ ಅಲ್ಪಬುದ್ಧಿಗೆ ತಕ್ಕಂತೆ ಉತ್ತರವನ್ನು ಕೊಡದಿರುವುದು ಸರಿಯಲ್ಲವಷ್ಟೆ.

ಸುಮುಖ:— ನಿಜ. ತಿಳಿದುದನ್ನು ಮುಚ್ಚಿಡದೆ, ಬಿಚ್ಚಿ ಹೇಳುವುದೇ ಗುಣವಂತರ ಶೀಲವು. ಹಾಗೂ ನಿನಗೆ ತಿಳಿದುದನ್ನೇ ಹೇಳಬೇಕೆಂದೆವಲ್ಲದೆ, ತಿಳಿಯದುದನ್ನು ಕೇಳಲಿಲ್ಲ.

ರಮಾ:— ಹಾಗಿದ್ದರೆ ಕೇಳಿರಿ. ಯಾವ ವಸ್ತುವೇ ಆಗಲಿ, ಮತ್ತೊಂದರ ಸಹವಾಸ, ಸಂಸರ್ಗಗಳಿಂದ ತನ್ನ ಸ್ವಭಾವಸಹಜವಾದ ಗುಣವನ್ನಲ್ಲದೆ, (ಒಂದುವೇಳೆ ಅದನ್ನೂ ಬಿಟ್ಟು) ತಾನು ಕಲೆತ ವಸ್ತುವಿನ ಗುಣವನ್ನು ಅನುಕರಣ ಮಾಡುವುದೆಂಬುದನ್ನು ನೀವೂ ಬಲ್ಲಿರಷ್ಟೆ? ಹೇಗೆಂದರೆ— ಈಗನೋಡಿರಿ, ನಾಗವಲ್ಲಿ (ವಿಳ್ಳೆಯದೆಲೆ)ಯ ಬಳ್ಳಿಯು ಒಂದೇಪಾತಿಯಲ್ಲಿ ಹುಟ್ಟಿ ಬೆಳೆದು, ಒಂದೇಜಾತಿಯ ಬಳ್ಳಿಗಳಾಗಿದ್ದರೂ, ಪೂಗ (ಅಡಕೆ) ವೃಕ್ಷವನ್ನಾಶ್ರಯಿಸಿದುದು, ತನ್ನ ಜನ್ಮಸಹಜ

ಗುಣದೊಡನೆ, ಪೂಗದ ವಿಶೇಷಗುಣವಾದ ಸವಿಯನ್ನೂ ಹೊಂದಿ, ತನ್ನನ್ನು ಸೇವಿಸುವವರಿಗೆ, ಮತ್ತು ನೋಡುವವರಿಗೆ ಎಷ್ಟೋ ಸುಖವನ್ನುಂಟುಮಾಡುವುದು. ಅದೇ ಜಾತಿಯ ಬಳ್ಳಿಯು ಪಾರಿವಾಳವನ್ನಾಶ್ರಯಿಸಿದರೆ, ತನ್ನ ಸ್ವಭಾವಸಹಜಗುಣವನ್ನು ಬಿಟ್ಟು, ಪಾರಿವಾಳದ ಮರದ ಗುಣವಾದ ಕಹಿಯನ್ನೇ ತಾನೂ ಹೊಂದಿ, ನೋಡುವುದಕ್ಕೆ ಅಂದವೂ ಇಲ್ಲದೆ ಕೆಟ್ಟು ಹೋಗುವದು. ಮತ್ತೊಂದು ದೃಷ್ಟಾಂತ.

ಕಂದ|| ಅರಯೆ ತೊರೆಗಳ ಸೀಪಿನ ।
ನೀರುಂ ವಾರಿಧಿಯ ನೀರಪೊರ್ದುಗೆಯಿಂದಂ ||
ಸಾರಂಗೆಟ್ಟುಪ್ಪಪ್ಪುವೊ ।
ಆರುಂ ದುರ್ಜನರ ಸಂಗದಿಂದಮೆ ಕಿಡುವರ್ ||

ಎಂಬ ಸೂತ್ರವೇ ಸಾಕಾಗಿದೆಯಲ್ಲವೆ ?

ಸುಮುಖ:— (ರಮಾನಂದನ ಬೆನ್ನು ತಟ್ಟಿ) ಭಲೆ, ರಮಾನಂದ! ಭಲೆ ಭಲೆ!! ನೀನೇ ನಮ್ಮೆಲ್ಲರಿಗೂ ಆಶ್ರಯನಾದ ಪೂಗರಾಜನು. ನಾವು ನಿನ್ನ ಆಶ್ರಯದಿಂದ, ನಿನ್ನ ವಿಶೇಷಗುಣವಾದ ಲೋಕಹಿತೇಚ್ಛೆಯಿಂದ ಪರಿಶೋಭಿಸಬೇಕೆಂದಿರುವ ನಾಗವಲ್ಲಿಯ ಲತೆಗಳು.

ಸೌಮ್ಯ:— ನಿಜ! ಹಾಗೆಯೇ ಸರಿ. ಆದರೆ ಮೂರ್ಖನಾದ ರವಿವರ್ಮಕುಮಾರನು, ಇಂತಹ ಲೋಕೋತ್ತರಗುಣಸಂಪನ್ನನಾದ ಸೋದರನೂ ಸನ್ಮಿತ್ರನೂ ಹಿತೈಷಿಯೂ ವಿವೇಕಿಯೂ ಆದ ರಮಾನಂದನಲ್ಲಿ ಸಹೃದಯಭಾವದಿಂದಿರದೆ, ದ್ವೇಷಸಾಧನೆಯಲ್ಲಿ ದಾಯಾದ ಮಾತ್ಸರ್ಯವನ್ನು ಕಾರುತ್ತಿರುವುದು ಅವನ ದೌರ್ಭಾಗ್ಯವೇ ಅಲ್ಲದೆ ಬೇರಿಲ್ಲ.

ಯುವಾನ:— ಅದಕ್ಕೂ ಅದೃಷ್ಟವಿರಬೇಡವೆ?– 'ಯುಕ್ತಿಯುಕ್ತವಚೋಗ್ರಾಹ್ಯಂ ಬಾಲಾದಪಿ, ಶುಕಾದಪಿ' ಎಂಬ ಸೂಕ್ತಿಯಂತೆ, ನೀತಿಯನ್ನು ಸರ್ವವಿಧದಲ್ಲಿಯೂ ಸಂಗ್ರಹಿಸುವುದು ಬುದ್ಧಿವಂತರ

ಲಕ್ಷಣವು. ಬುದ್ಧಿಹೀನರಿಗೆ ಅದು ಸರಿತೋರುವುದು ಹೇಗೆ ?

ಸೌಮ್ಯ:— ಅಯ್ಯ! ಯುವಾಸನೆ! ವಿವೇಕಶೂನ್ಯರಿಗೆ, ಕಿಡುಕರ ಕುಹಕೋಕ್ತಿಗಳು ಕಿವಿಗಿಂಪಾಗಿ ತೋರುವಂತೆ, ಹಿತೈಷಿಗಳ ಹಿತಬೋಧೆಯು ರುಚಿಸುವುದಿಲ್ಲ.

ಸುಮುಖ:— ಸಹಜವಾಗಿಯೇ ಇದೆ. ನೆಳಲಂತೆ ತನ್ನನ್ನೇ ನೆರೆನಂಬಿ ಸೇವಿಸುತ್ತಿರುವ ಸಾಧ್ವೀಮಣಿಯಾದ ಸತಿಯನ್ನು ನಿರಾಕರಿಸಿ, ಮಾನ, ಧನ, ಕೀರ್ತಿ, ಭೋಗ,ಸಂಪದಗಳೆಂಬ ಸರ್ವಸ್ವವನ್ನೂ ಸೂರೆಗೊಳ್ಳುವ ವಾರವನಿತೆಯರಲ್ಲಿ ಮರುಳಾಗುವುದು, ದುರ್ಜನರ ಸ್ವಭಾವವೇ ಸರಿಯಷ್ಟೆ. ಇದಕ್ಕೆ ಮತ್ತೊಂದು ನೀತಿಯೂ ಉಂಟು.

ಕಂದ|| 'ಧರೆಯೊಳ್ ಸುಕಳತ್ರಂ ।
ತನಗಿರೆಯುಂ ಪರದಾರಸಕ್ತನಪ್ಪಂ ನೀಚಂ ||
ಸರದೊಳ್ ವರಜಲಮಿರೆಯುಂ ।
ಕರಟಂ ಕೊಳೆನೀರನೆಳೆವುದಲ್ತೆ ಸುಬುದ್ಧಿ' || (ಸ. ಶ.)

ಸೌಮ್ಯ: —'ಕಿಡುವವಗೆ ಹಿತರಿಲ್ಲ; ಸಾಯುವವಗೆ ಮದ್ದಿಲ್ಲ' ಎಂಬ ಗಾದೆಯು, ಅದೇನು ಸುಮ್ಮನೆ ಹುಟ್ಟಿತೆ?

ಸುಮುಖ:— 'ವಿನಾಶಕಾಲೇ ವಿಪರೀತಬುದ್ಧಿಃ' ಎಂಬಂತೆ ಆತನ ಮತ್ತು ಆತನ ಸಹಚರರ ಈ ದುರಾಚಾರವು ಅವರ ವಿನಾಶಕ್ಕೆ ಕಾರಣವೇ ಆಗಿದೆ.

ರಮಾ:— (ನಿಟ್ಟುಸಿರಿಟ್ಟು) ಸನ್ಮಿತ್ರರೇ ! ಭಗವತ್ಸಹಾಯವಿದ್ದರೆ, ಅವರನ್ನು ಸನ್ಮಾರ್ಗಕ್ಕೆ ತಿರುಗಿಸದೆ ಬಿಡಲಾರೆನೆಂದು ಸಂಕಲ್ಪಿಸಿರುತ್ತೇನೆ.

ಸೌಮ್ಯ:— ಆ ವಿವೇಕಶೂನ್ಯರಾದ ಗೋಮುಖವ್ಯಾಘ್ರರು, ನಿನ್ನ ಉಪದೇಶಕ್ಕೆ ಕಿವಿಗೊಡುವರೆಂದೆಣಿಸಿದೆಯೋ? ಎಂದಿಗೂ ಅದು ಸಾಗದ ಮಾತು. ಸುಮ್ಮನೇಕೆ ಬಳಲಬೇಕು?

ರಮಾ:—(ನಕ್ಕು) ಪ್ರಯತ್ನಪಡದೆಯೇ, ಅದು ನಮಗೆ ಅಸಾಧ್ಯ

ವೆಂದು ಸುಮ್ಮನಿದ್ದರೆ, ನಮ್ಮ ಸದಸದ್ವಿವೇಚನೆಗೆ ಫಲವೇನಾಯ್ತು. ನಮ್ಮ ಜನ್ಮಧಾರಣೆಯ ಉದ್ದೇಶವೆಲ್ಲಿ ನಿಂತಿತು ?

ಯುವಾನ:— ಅದೆಲ್ಲಾ ಹಾಗಿರಲಿ! ಯಾವುದು ಹೇಗೆ—ಎಂತಿದ್ದರೂ ಸರಿ; ಧೈರ್ಯ, ಸ್ಥೈರ್ಯ, ಸಾಹಸಾದಿ ಸುಗುಣಗಳಿಂದ ಕೂಡಿದ ನೀನು ಆ ಕಾಮ-ಕ್ರೋಧ-ಲೋಭಗ್ರಸ್ತರ ಸಹವಾಸವನ್ನು ಮಾಡುವುದು ಸರಿಯಲ್ಲ.

ರಮಾ:— ಅಯ್ಯೋ, ಯುವಾನನೆ! ನಿನಗೆ ತತ್ವವೇ ಮರೆಯಾಗಿದೆ; ಕೇಳು.—

‘ಶೂರತನಂ ಕ್ಷಮೆಯಿಂದಂ । ಧೀರತನಂ ನಯದಿಂದಂ ||
ಚಾರುತೆಸದ್ಗುಣದಿಂದಂ । ತೋರುವುದೈ ಬಲುಚಂದಂ’ ||

(ಛಂದ:ಸಾರ)

ಎಂಬ ನೀತಿಯುಂಟು. ಶೌರ್ಯವು ಕ್ಷಮೆಯಿಂದ, ಧೈರ್ಯವು ನಮ್ರಭಾವನೆಯಿಂದ, ಲಾವಣ್ಯವು ಸದ್ಗುಣದಿಂದ ಪ್ರಕಾಶಿಸುವವಲ್ಲದೆ ಬೇರಿಲ್ಲ. ಆದುದರಿಂದ, ನಾವು ಧೈರ್ಯ, ಸ್ಥೈರ್ಯ, ಸಾಹಸಗಳಿಂದ ಪರಿಶೋಭಿಸಬೇಕಾದರೆ, ಕ್ಷಮಾ, ವಿನಯಾದಿ ಸದ್ಗುಣಗಳನ್ನು ಭದ್ರಪಡಿಸಬೇಕು.

ಸೌಮ್ಯ:— ಅಹುದು. ಆದರೂ ವಿಚಾರಮಾಡಿ ನೋಡು; ಅವರು ನಿನ್ನಲ್ಲಿ ಯಾವಾಗಲೂ ವೈರವನ್ನೇ ಸಾಧಿಸುತ್ತಿರುವರು.

ರಮಾ:—ಅವರು ವೈರವನ್ನು ಸಾಧಿಸುತ್ತಿದ್ದ ಮಾತ್ರಕ್ಕೆ ನಾವು ಹೆದರಿ ಗುರುವಾಕ್ಯವನ್ನೂ ನಮ್ಮ ಕರ್ತವ್ಯವನ್ನೂ ಉಲ್ಲಂಘಿಸಬಹುದೇನು? ಹೇಳುವೆನು ಕೇಳು.........

ಸುಮುಖಿ:—ಏನು? ಗುರುವಾಕ್ಯವು ಬೇರೆ ಉಂಟೋ? ಅದಾವುದು? ಏನೆಂದು?

ರಮಾ:—ಕೇಳು ಹೇಳುವೆನು.

‘ವೈರಿಯೊಳುಂ ನ್ಯಾಯವನೀಂ । ತೋರಡಿಯಂ ಸತ್ಪಥದೊಳ್’ ||

ಊರೊಲಿಸ್ಕೆ ಸದ್ಗುರುವಂ । ಮೀರದಿರ್ಕೆ ಮಾನ್ಯರನೂ || (ಛಂದ:ಸಾರ)

ಹೀಗೆಂದು ನಾನು ನಮ್ಮ ಪರಮಪೂಜ್ಯರಾದ ತಾಯ್ತಂದೆಗಳಿಂದ ಉಪದೇಶಹೊಂದಿರುವೆನು. ಇದನ್ನು ಹೇಗೆ ಮೀರಿ ನಡೆಯಲಾದೀತು?

ಸೌಮ್ಯ:—ಅದೇನೋ ಯುಕ್ತವೇ ಅಹುದು. ಆದರೆ ನೀತಿಯು ಹೇಳುವುದೇನೆಂಬುದನ್ನು ನೋಡು—

ಕಂದ|| 'ಬೇವಿನ ಸಸಿಯಂ ತಂದಿಟ್ಟು ।
ವಿನ ಮೊಲೆವಾಲ ನೆರೆದು ಸಲಹಿದೊಡದು ತಾಂ ||
ಬೇವಲ್ಲದಮೃತವಾಗದು ।
ಗಾವಿಲರೊಡನಾಡಿ ಗುಣವನರಸಿದರುಂಟೇ ||' (ಪ. ಸಾ)

ರಮಾ:— ಸನ್ಮಿತ್ರರೇ! ನಿಮ್ಮ ಹಿತಸೂಚನೆಯು ವಿಹಿತವಾಗಿಯೇ ಇರುವುದು. ಆದರೂ ಕೇಳಿರಿ. ಲೋಕದಲ್ಲಿ ತಾಯಿತಂದೆಗಳು ಮಕ್ಕಳಾಗಬೇಕೆಂದು ಕೋರುವರೇಕೆ? ಮುಂದೆ ತಮ್ಮ ಕುಲ-ಕೀರ್ತಿ-ಸಂಪತ್ತಿಗಳ ಅಭ್ಯುದಯಕ್ಕೆ ಕಾರಣರಾಗಿ, ನಲವಡಿಸುವರೆಂದಲ್ಲವೇ? ಹಾಗೆ ಅವರನ್ನು ಸಂತೋಷಪಡಿಸುವುದೇ ಪುತ್ರರಾದ ನಮ್ಮ ಕರ್ತವ್ಯವಲ್ಲವೆ? ಹೀಗೆಂದು ತಿಳಿದೂ, ಆ ಪರದೈವಸ್ವರೂಪರು ದುಃಖಭಾಜನರಾಗಿರುವುದನ್ನು ನೋಡಿಯೂ ಸುಮ್ಮನಿರುವುದಾದರೆ, ನಾವು ಕೃತಘ್ನರಲ್ಲದೆ ಮತ್ತೇನು? ಹೇಗಾದರೂ ಆ ನಮ್ಮ ಸಾಕಾರಬ್ರಹ್ಮಸ್ವರೂಪರಾದ ತಾಯಿತಂದೆಗಳ ಮನಃಸ್ಸಂತೋಷಪಡುವಂತೆ ಅಣ್ಣನನ್ನು ಆತನ ಅನುಚರರೊಡನೆ ವಿವೇಕಮಾರ್ಗಕ್ಕೆ ತರಬೇಕೆಂಬುದೇ ನನ್ನ ದೃಢಸಂಕಲ್ಪವಾಗಿದೆ. ಇದಕ್ಕೆ ಆ ಗುರುಜನರ ಪೂರ್ಣಾನುಗ್ರಹವೂ, ಭಗವತ್ಸಹಾಯವೂ, ಸುಹೃದರಾದ ನಿಮ್ಮ ಹಿತಸೂಚನೆಗಳೂ ಸಹಕರಿಸುತ್ತಿರಬೇಕೆಂಬುದೇ ನನ್ನ ನಿರಂತರದ ಪ್ರಾರ್ಥನೆ.

ಸುಮುಖ:— ಸತ್ಯಸಂಕಲ್ಪನಾದ ರಮಾನಂದನೆ! ನಿನ್ನ ಉಚ್ಚಭಾವನೆಗೆ ಭಗವಂತನು ಸಹಾಯಕನಾಗಿಯೇ ಇರುತ್ತಾನೆಂಬುದರಲ್ಲಿ

ಏನೂ ಸಂಶಯವಿಲ್ಲ. ಆದರೂ ನೀನು ಭಗವತ್ಕೃಪಾಪಾತ್ರನಾಗಿ, ಉದ್ದೇಶಸಾಫಲ್ಯ ಹೊಂದಬೇಕೆಂದು ನಾವೆಲ್ಲರೂ ಅನವರತವೂ ಭಗವಂತನನ್ನು ಪ್ರಾರ್ಥಿಸುವೆವು.

(ತೆರೆಯಲ್ಲಿ ವಾದ್ಯಗಳಾಗುವುವು.)

ರಮಾ:— (ಸಂಭ್ರಮದಿಂದ) ಓಹೋ! ಸುಹೃದರೇ! ಆಗಲೇ ಭಗವನ್ನಾಮಸಂಕೀರ್ತನೆಗೆ ಮೊದಲಾಯಿತು. ನಾವು ಇನ್ನು ಇಲ್ಲಿ ವಿಳಂಬಿಸಬಾರದು. ನಡೆಯಿರಿ. ನಾವೂ ಭಜನೆಗೆ ಸೇರುವ.

(ಎಲ್ಲರೂ ಹೊರಡುವರು.)

## ಭಜನೆ.

ರಾಗ— (ಜಯಜಯ ಗೋಕುಲಬಾಲ)

ಜಯಜಯ ದ್ವಾರಕಾವಾಸ—ಜಯ ಮುನಿಮಾನಸಹಂಸ ॥
ಜಯಕಂಸಾಸುರ ವಿಧ್ವಂಸ—ಯದುಕುಲಾವತಂಸ ॥ ಜಯ ॥ಪಲ್ಲ॥
ಜಯವಸುದೇವ ಕುಮಾರ—ಜಯ ಬೃಂದಾವನವಿಹಾರ ।
ಜಯ ಗೋಪಿಕಾಜನಜಾರ—ಜಯಕೌಸ್ತುಭಮಣಿಹಾರ ॥ ಜಯ ॥೧॥
ಜಯಜಯ ಸನ್ನುತಕಾಯ—ಜಯಜಯ ಸುರಮುನಿಗೇಯ ।
ಜಯಜಯ ಸಾಗರನಿಲಯ—ಜಯಶುಭಗುಣಸಮುದಾಯ ॥ ಜಯ ॥೨॥
ಜಯಜಯ ದೈತ್ಯವಿನಾಶ—ಜಯನುತಶೇಷಗಿರೀಶ ।
ಜಯಜಯ ಮಂಜುಳಭಾಷ—ಜಯ ಪಾಂಡವಪರಿತೋಷ ॥ ಜಯ ॥೩॥

—ಇಷ್ಟಕ್ಕೆ ದ್ವಿತಿಯಾಂಕವು—

|| ಶ್ರೀ ||

# ತೃತೀಯಾಂಕ.

## ಶಾರದಾ ಸ್ತುತಿ.

ರಾಗ— ( ಚಾಮುಂಡಿ ಪಾಲಿಸು )

ಶ್ರೀವಾಣಿ ಕಲ್ಯಾಣಿ—ಬ್ರಹ್ಮಾಣಿ ಗೀರ್ವಾಣಿ—
ಕೈವಲ್ಯಮಾರ್ಗ ಪ್ರದರ್ಶಿನೀ—ಕವಿ ಜೀವಿನೀ ಮಜ್ಜನನೀ || ಪಲ ||
ಕಾಮಿನೀ ಗುಣಭರಣೀ—ಕಮನೀಯ ಸುಶ್ರೋಣಿ |
ರಾಮಣೀಯಕ ಪಲ್ಲವಪಾಣಿ—ಕೋಮಲ ಶುಕವಾಣಿ || ಶ್ರೀ ||೧||
ಮಂಗಳಂ ವಿಧಿರಮಣೀ—ಜಯಮಂಗಳಂ ಘನಕರುಣೀ |
ಸಂಗೀತಶಾಸ್ತ್ರವಿಲಾಸಿನೀ—ಪರಿಪಾಹಿಮಾಂ ಜನನೀ || ಶ್ರೀ ||೨||
ಭುವನೈಕ ಮೋಹಿನಿತರುಣಿ—ಭಾಷಾಭಿಮಾನಿನಿಜನನೀ |
ಶೇಷಶೈಲವಾಸಕೀರ್ತನಾ—ಮೋದದಾಯಿನಿ ರಮಣಿ || ಶ್ರೀ ||೩||

## ಸ್ಥಳ ೧:— ವಿದ್ಯಾಶಾಲೆ.

( ನಳ-ಕಳಿಂಗರೊಡನೆ ರವಿವರ್ಮನ ಪ್ರವೇಶ.)

ನಳ:—( ಸಂಭ್ರಮದಿಂದ ) ಆಹಾ ! ಶಾಲಾಪ್ರವೇಶವಾದೊಡನೆಯೇ, ಎಂತಹ ಆನಂದವುಂಟಾಗುತ್ತಿರುವುದು ? ಇಂದಿನ ಇಷ್ಟು ಉತ್ಸಾಹಕ್ಕೆ ಕಾರಣವೇನು ? ಸುಶ್ರಾವ್ಯವಾದ ಶಾರದಾಸ್ತುತಿಯ ಗೀತಾಮೃತವನ್ನು ಸೇವಿಸಿದುದರಿಂದಲೋ ?

ಕಳಿಂಗ:—ಹಾಗಲ್ಲ,-ನಳನೇ! ನಮ್ಮ ಇಂದಿನ ಆನಂದಕ್ಕೆ ಕಾರಣವಿದೇನೂ ಅಲ್ಲ. ನಮ್ಮ ವೈರಿಯು ತೇಜೋವಧೆಗೆಂದು, ಈ ದಿನ ನಾವು ಹೂಡಿರುವ ಉಪಾಯವು ಫಲಕಾರಿಯಾಗುವುದೆಂಬ ಸಂತೋಷವೇ ಕಾರಣವೆಂದು ತಿಳಿ.

ರವಿ:—ನಿಜ! ನಮ್ಮ ಈಗಿನ ಮಾಟವು ಅವನನ್ನು ಹೇಗೂ ಬಿಡುವಂತಿಲ್ಲ.

ನಳ:— ಹಾಗೆಯೇ ಊಹಿಸಿರಬಹುದು. ಆದರೆ, ಆತನು ಮುಖ್ಯ ಪಾಠವನ್ನು ಎಂದರೆ,-ಇಂದಿನ ನಿಯಮಿತ ಕಾರ್ಯವನ್ನು ಹೃದ್ಗತ ಮತ್ತು ಕಂಠಪಾಠ ಮಾಡಿಕೊಂಡಿದ್ದರೋ? ಆದರಿಂದ ನಮ್ಮ ಪ್ರಯತ್ನಕ್ಕೆ ಆತಂಕವಲ್ಲವೋ ?

ರವಿ:— ಅಲ್ಲದ ಸಲ್ಲದ ಸಂದೇಹಗಳನ್ನು ಕಟ್ಟಿಕೊಂಡು ಹೆಂಗಸರಂತೆ ಹಲುಬುವುದು ನಮ್ಮ ಕೆಲಸವಲ್ಲ. ಹಾಗೂ ಒಂದು ವೇಳೆ, ಆದರಿಂದ ತಪ್ಪಿಸಿಕೊಂಡರೂ ಉಳಿದ ಉಪಾಯಗಳಿಗಾದರೂ ಬಲಿ ಬೀಳಲೇಬೇಕು.

ನಳ:—ಆದರೂ, ಪ್ರಬಲಸಹಾಯಸಂಪತ್ತಿಯೂ ಸೂಕ್ಷ್ಮದೃಷ್ಟಿಗಳಾದ ಸಹಾಧ್ಯಾಯಿಗಳ ಬೆಂಬಲವೂ ಇರುವಾಗ, ನಮ್ಮ ಕೃತ್ರಿಮ ಸಂಧಾನಕ್ಕೆ ಜಯವಾಗುವದೆಂದು ಹೇಳಲಾಗುವದಿಲ್ಲ.

ರವಿ:—ನಿನ್ನ ಅಭಿಪ್ರಾಯವೂ ಸಹಜವೇಸರಿ. ಅದಕ್ಕೆಂದೇ ಪ್ರಬಲಸಹಾಯ ಸಂಪತ್ತಿಗಳಿಂದ ಅವನನ್ನು ಪ್ರತ್ಯೇಕಿಸುವಂತೆ ಮಾಡಲು, ಹಲವು ಮಾಟಗಳನ್ನು ಕಲ್ಪಿಸಿಟ್ಟು ಬಂದಿರುವುದು.

( ತೆರೆಯಲ್ಲಿ ) ನಡೆಯಿರಿ, ನಡೆಯಿರಿ, ಗುರುಗಳು ಬರುವವೇಳೆಯಾಗುತ್ತಿದೆ.

ಕಳಿಂಗ:—ಇದೋ, ಬಂದನಪ್ಪ ಮಹಾರಾಯ! ಏನು ಇವನ ಹೆಚ್ಚುಗಾರಿಕೆಯೋ ! ಎಷ್ಟರ ಹೆಮ್ಮೆಯೋ ? ನೋಡಿ ಹೇಳಿ ಮುಗಿಸುವಂತಿಲ್ಲ.

ರವಿ:—ಆಗಲಿ, ಆಗಲಿ. ಎಷ್ಟು ದಿನಗಳ ಹಾರಾಟವೋ ನೋಡುವ! ಈವರೆಗೂ ಅವನ ಕಡೆಯಲ್ಲಿ ದೈವಬಲವಿತ್ತು. ಈಗ ಆತನ ದುರಭಿಮಾನದಿಂದ ದೈವಬಲವು ಅವನನ್ನು ಬಿಟ್ಟು ಕಾಲಬಲದಲ್ಲಿ ಸೇರಿ, ನಮ್ಮ ಕಡೆಯಲ್ಲಿರುವುದು.

ಕಳಿಂಗ:— ಹೂಂ, ಇನ್ನು ತಡೆಯಿರಿ. ಅವರು ಬಂದರು.

( ಸಹಾಧ್ಯಾಯಿಗಳೊಡನೆ ರಮಾನಂದನ ಪ್ರವೇಶ.)

ರವಿ:—ಬಾರಯ್ಯಾ, ರಮಾನಂದ! ಇದೇನಿಂದು ಇಷ್ಟು ವಿಳಂಬ ಮಾಡಿದೆ?

ರಮಾ:— ( ನಿಯತಸ್ಥಾನದಲ್ಲಿ ನಿಂತು ಕಿರುನಗೆಯಿಂದ ) "ಏನಣ್ಣಾ! ವಿಳಂಬವೇಕೆಂದೆಯಾ? ಸಂಶಯವಿಚಾರದಲ್ಲಿದ್ದ ಅಣ್ಣನು, ವಿಚಾರ ವಿಮರ್ಶೆಯಿಂದ ಚಾಂಚಲ್ಯವನ್ನುಳಿದು, ಕರ್ತವ್ಯವನ್ನು ಗಮನಿಸಿದನೆಂಬ ಸಂತೋಷದಿಂದ, ವಿದ್ಯಾಪ್ರಭಾವವರ್ಣನೆಯಲ್ಲಿ ಸ್ವಲ್ಪಮಾತ್ರದ ಹೊತ್ತನ್ನು ಕಳೆದೆನು."

ರವಿ:— ಮಹನೀಯರ ಸಂಗತಿಯೇ ಶ್ರೇಯಸ್ಕರವಲ್ಲವೆ ! ಮಹಾತ್ಮನಾದ ನಿನ್ನ ಸಹವಾಸ-ಸದುಪದೇಶ ಬಲಗಳಿಂದ ಸಂದೇಹನಿವೃತ್ತಿಯೂ, ವಿದ್ಯಾಭ್ಯಾಸದಲ್ಲಿ ಆಸಕ್ತಿಯೂ ಉಂಟಾಗುವುದರಲ್ಲಿ ಆಶ್ಚರ್ಯವೇನು ?

ರಮಾ:—ನನ್ನಲ್ಲಿ ಅಷ್ಟರ ಮಹಾತ್ಮೆಯೇನಿರುವುದು? ಹೀಗೇಕೆ ಹೇಳುವೆ ?

ರವಿ:— ಏನು-ಏಕೆ-ಎಂದರೆ, ನಿನ್ನಂತೆ ಸರಸಪ್ರಸಂಗದ ಕೌಶಲ್ಯವು ನಮ್ಮಂತಹರಿಗೆ ಉಂಟಾಗುವುದೇನು? ಹೇಳು, ನೋಡುವ.

ರಮಾ:— ನನ್ನಲ್ಲಿ ಮಾತ್ರವೇ ಇದೆಯೆಂದು ಹೇಳಬಾರದು. ಅಭ್ಯಾಸ ಮಾಡುವವರೆಲ್ಲರಿಗೂ ಉಂಟಾಗುವುದು.

ರವಿ:— ( ತಲೆಯನ್ನಲ್ಲಾಡಿಸಿ ) ಅದೆಲ್ಲಾ ಸುಳ್ಳು ಮಾತು. ಇದಕ್ಕೆ ನೀನೊಬ್ಬನೇ ಪಾತ್ರನು.

ರಮಾ:— ಅದೇಕೆ, ಹಾಗೆ ಹೇಳುವಿರಿ ?

ರವಿ:— ಅದೇಕೆಂದರೆ- ಗುರುಗಳ ಪೂರ್ಣಾನುರಾಗಕ್ಕೆ ಪಾತ್ರನಾದವನು ನೀನೊಬ್ಬನೇ. ಆದುದರಿಂದಲೇ, ಸರಸ ಪ್ರಸಂಗದ ಅರ್ಹತೆಯು ನಿನ್ನಲ್ಲಿ ಮಾತ್ರವೇ ಇರುವುದೆಂದೆನು.

ವಿದ್ಯಾ:— ( ನಕ್ಕು ) ಅಯ್ಯಾ! ಪಂಚ ಭೂತಾತ್ಮಕವಾದ ಈ ದೇಹವು, ಮುಖ್ಯವಾಗಿ ಸತ್ವಗುಣಾತ್ಮಕವಾದ ಪೃಥ್ವಿಯನ್ನೂ,

ಧೂಮ್ರವರ್ಣಾತ್ಮಕವಾದ ಆಕಾಶವನ್ನೂ ಆಶ್ರಯಿಸಿ, ಅವುಗಳ ದೆಸೆಯಿಂದಲೇ ಸಜೀವವಾಗಿರುವುದು. ಅದಿರಲಿ. ಮೊದಲು, ವಿದ್ಯೆಯಿಂದ ನಮಗಾಗುವ ಫಲವೇನು?

ರವಿ:—ವಿದ್ಯೆಯಿಂದ ಕೀರ್ತಿ, ಸುಖ, ಸಂಪದಗಳೆಲ್ಲವನ್ನೂ ಹೊಂದಬಹುದು.

ವಿದ್ಯಾ:—ನೀನೇನು ಹೇಳುವೆ, ಕಳಿಂಗ?

ಕಳಿಂಗ:— ವಿದ್ಯಾ—ಲಾಭದಿಂದ ಪೂಜ್ಯತೆಯನ್ನು ಹೊಂದಬಹುದು.

ನಳ:— ವಿದ್ಯೆಯಿಂದ ರೂಪ (ಕಾಂತಿ) ಲಾವಣ್ಯಗಳು ಹೆಚ್ಚುವುವು.

ವಿದ್ಯಾ:— (ರಮಾನಂದನನ್ನು ಕುರಿತು) "ಇದೆಲ್ಲವೂ ಕೇವಲ ರೂಢಿವಾಕ್ಯವೇ ಸರಿ. ಮುಖ್ಯಾಶಯವು ಮಾತ್ರ ಹೊರಡಲಿಲ್ಲ. ನೀನೇನು ಹೇಳುವೆ?"

ರಮಾ:— ಗುರುದೇವ! ವಿದ್ಯೆಯಿಂದ ಸದಸದ್ವಿವೇಚನೆಯು ಸುಲೋಚನವು ನಮಗೆ ವಶವಾಗುವುದು. ಈ ಸುಲೋಚನದ ಸಹಾಯದಿಂದ ನಮ್ಮ ನಡೆನುಡಿಗಳಲ್ಲಿ ಅಡಗಿರಬಹುದಾದ ಗುಣದೋಷಗಳೆಲ್ಲವನ್ನೂ ಚೆನ್ನಾಗಿ ತಿಳಿದು, ನಿರ್ದುಷ್ಟವಾಗಿ ಪರಿಷ್ಕರಿಸಿಕೊಳ್ಳುವುದಕ್ಕೆ ನಾವು ಶಕ್ತರಾಗುವೆವಲ್ಲದೆ, ಭಗವಂತನ ಸೃಷ್ಟಿಚಮತ್ಕಾರಕ್ಕೊಳಪಟ್ಟ ವಸ್ತುಸಮೂಹಗಳ ಸ್ಥಿತಿ, ಗತಿ, ಸ್ವಭಾವಗಳನ್ನೂ ಭಗವಂತನಿಗೂ, ಆತನ ದಾಸಭೂತರಾಗಿರುವ ನಮಗೂ ಇರುವ ಸಮೀಪಬಾಂಧವ್ಯದ ಆತ್ಮವಿಚಾರತತ್ವವನ್ನೂ ನಾವು ತಿಳಿಯಬಲ್ಲವರಾಗುವೆವು. ಇದೇ ವಿದ್ಯೆಯಿಂದಾಗುವ ಫಲಗಳ ಸಂಕ್ಷಿಪ್ತವರ್ಣನೆಯು.

ವಿದ್ಯಾ:— ಸಾಧು ! ಇದೀಗ ಸಾಧುವಾದನಕ್ಕೆ ತಕ್ಕ ನವನುಡಿ. ಓದುವುದನ್ನು ಕಲಿವುದೇಕೆ?

ಸೌಮ್ಯ:— ಇಹಪರ ಸೌಖ್ಯಸಾಧನೆಗೆ.

ವಿದ್ಯಾ:— ಓದು ಕಲಿತ ಮಾತ್ರಕ್ಕೆ ಇಹಪರ ಸೌಖ್ಯವುಂಟಾಗುವುದೋ?

ಸುಮುಖ:—ಮನಮುಟ್ಟಿ ಕಲಿತ ಓದು, ನಿಸ್ಸಂಶಯವಾಗಿಯೂ ಇಹಪರಸುಖಕ್ಕೆ ಸಾಧನವಾಗುವುದು.

ವಿದ್ಯಾ:—ಹೇಗೆ? ರಮಾನಂದ!

ರಮಾ:— ಓದುವುದರಿಂದ ನಾವು ಇಹದಲ್ಲಿಯೇ, ನಮಗೆ ಅಜ್ಞಾತಗಳಾಗಿರುವ ಅನೇಕ ದೇಶವಿದೇಶಗಳ ವಿಚಾರಗಳನ್ನೂ, ಅವುಗಳ ಗುಣಸ್ವರೂಪವನ್ನೂ ಮತ್ತು ಅಲ್ಲಿರುವವರ ವಿಶೇಷ ವಿದ್ಯಮಾನಗಳನ್ನೂ ಭೂವಿವರಣೆ, ಚರಿತ್ರೆಗಳ ಸಹಾಯದಿಂದ ತಿಳಿದುಕೊಳ್ಳಬಹುದು. ಮತ್ತು ದೇಶಸೇವೆಗಾಗಿಯೇ, ತಮ್ಮ ಸರ್ವಸ್ವವನ್ನೂ ಧಾರೆಯೆರೆದು, ಅಹೋರಾತ್ರಿಗಳಲ್ಲಿಯೂ, ಸತ್ಕಾರ್ಯ-ಸಮಾಲೋಚನೆಗಳಲ್ಲಿಯೇ ನಿರತರಾಗಿರುವ ಮಹನೀಯರ ಜೀವಿತ ವೃತ್ತಾಂತವನ್ನೂ ನಮ್ಮ ಪೂರ್ವಜರ ಅದ್ಭುತವಾದ ಮನೋಯೋಗಶಕ್ತಿ, ಧರ್ಮಶ್ರದ್ಧೆ, ಸತ್ಯನಿಷ್ಠೆ, ನಿರಂತರೋದ್ಯಮಗಳೇ ಮೊದಲಾದ ಸದ್ಗುಣಕಥನಗಳನ್ನೂ ನಿದರ್ಶನಪೂರ್ವಕವಾಗಿ ತಿಳಿದು, ಅವರ ಅನುಗ್ರಹದಿಂದ ಜನ್ಮವೆತ್ತಿ, ಲೋಕೋಪಕಾರವನ್ನು ಮಾಡುತ್ತಿರುವ ಪ್ರಕೃತಿಶಾಸ್ತ್ರ, ವನಸ್ಪತಿಶಾಸ್ತ್ರಗಳೇ ಮೊದಲಾದ ತತ್ವವಿಚಾರವನ್ನು ಸ್ವಾಧೀನಪಡಿಸಿಕೊಂಡು, ವಿನಯ, ಸತ್ಯ, ಶಾಂತಿ, ಧೃತಿ, ಕ್ಷಮಾದಿಗಳಿಂದ ಕೂಡಿ, ದೇಶಸೇವೆಯಲ್ಲಿ ಕೃತಾರ್ಥತೆಯನ್ನು ಹೊಂದುವಂತಾಗುವೆವು.

ವಿದ್ಯಾ:— ಕೇಳಿದರೇನಯ್ಯಾ? ರವಿವರ್ಮಾದಿಗಳೇ!

ರವಿ:—ಕೇಳಿದೆವು.

ವಿದ್ಯಾ:—ಹೂಂ! ಬರೆಹವನ್ನು ಕಲಿವುದೇಕೆ ?

ರವಿ:—ಕರಗಳನ್ನು ಸಾರ್ಥಕ್ಯಪಡಿಸುವುದಕ್ಕೆ.

ವಿದ್ಯಾ:—( ನಕ್ಕು ) "ಬರೆಹಗಳನ್ನು ಕಲಿತೇ ಸಾರ್ಥಕವಾಗ

ಬೇಕೋ? ಇತರ ಕರ್ಮಾಚರಣೆಯಿಂದ ಆಗುವುದಿಲ್ಲವೊ? ”

ರವಿ:—ಓದುಬರೆಹಗಳಿಂದಾಗುವಷ್ಟು ಪ್ರಯೋಜನವು ಮತ್ತೇತರಿಂದೆಯೂ ಆಗಲಾರದಷ್ಟೆ ?

ವಿದ್ಯಾ:—ಓದುಬರೆಹದಿಂದಲೇ ಸಾರ್ಥಕವಾಗಬೇಕು; ಮಿಕ್ಕವುಗಳಿಂದಾಗುವುದಿಲ್ಲವೆ ? ಕರಗಳು ಸಾರ್ಥಕತೆಹೊಂದಬೇಕಾದರೆ, ಇತರರಿಗೆ ಸಹಾಯಮಾಡುವುದು, ಕಷ್ಟದೆಸೆಯಲ್ಲಿ ನರಳುತ್ತಿರುವವರಿಗೆ ಶಕ್ತಿವಂಚನೆಯಿಲ್ಲದೆ ಉಪಕಾರಮಾಡುವುದು—ಇವೇ ಮುಖ್ಯವು. ಇವನ್ನು ಮಾಡಬೇಕೆಂದರೆ ಅಧಿಕಪ್ರಯಾಸಪಡಬೇಕು. ಆದುದರಿಂದ, ಕೈಗಳನ್ನು ಹೊಂದಿಯೂ ಸುಮ್ಮನಿರುವುದು ಸರಿಯಲ್ಲವೆಂದು, ತಕ್ಕಮಟ್ಟಿಗೂ ಪರರಿಗೆ ಕೇಡನ್ನುಂಟುಮಾಡಿ, ನೋಡಿ ನೋಡಿ ನಲಿವುದೇ ಕರಗಳಿಗೆ ಸಾರ್ಥಕವೆಂಬುದು ಈ ಕಾಲದ ಸೊಕ್ಕಿನಮಕ್ಕಳ ಉದ್ದೇಶವಾಗಿರುತ್ತದೆ. ಅಲ್ಲವೇನಯ್ಯ?

ರವಿ:—(ತಲೆತಗ್ಗಿಸಿ) ‘ಹಿರಿಯರೇ ಹೀಗೆ ಹೇಳಿದರೆ ನಮ್ಮಪಾಡೇನು ?’

ವಿದ್ಯಾ:—ಏನೆಂದರೆ—ತಿಳಿದುದನ್ನು ಹೇಳುವುದು, ತಿಳಿಯದುದನ್ನು ಕೇಳಿ ತಿಳಿವುದು.

ರವಿ:— ಬರೆಹವನ್ನು ಕಲಿವುದರಿಂದ, ಹೊಸಹೊಸದಾಗಿ ನಾವು ತಿಳಿದುಕೊಳ್ಳುವ ವಿಶೇಷ ಸಂಗತಿಗಳನ್ನು ನೆನಪಿನಲ್ಲಿಡುವುದಕ್ಕಾಗಿ ಬರೆದಿಡಬಹುದಾಗಿದೆ.

ಸುಮುಖ:—ಗುರುದೇವ! ಕ್ಷಮಿಸಬೇಕು. ಬರೆಹದಿಂದ ಅಷ್ಟೇ ಅಲ್ಲ; ಹೆರವರಮೇಲೆ ತಪ್ಪನ್ನು ಹೊರೆಸಿ, ತಮಗೆ ತೋರಿದಂತೆ ಏನಾದರೂ ಕುಹಕಗಳನ್ನು ಕಲ್ಪಿಸಿ, ಹೆರವರ ಹೆಸರಿನಿಂದ ಕಳ್ಳಪತ್ರಗಳನ್ನು ಬರೆದು, ಅವರನ್ನು ಕಷ್ಟಕ್ಕೆ ಗುರಿಮಾಡಿ, ತಮ್ಮ ನಿಸ್ಸೀಮಪಾಂಡಿತ್ಯಕ್ಕಾಗಿ ನಲಿದಾಡಬಹುದೆಂದು ಹೇಳುವೆನು.

ರಮಾ:—(ಸುಮುಖನ ಮುಖವನ್ನು ನೋಡಿ ಮೆಲ್ಲನೆ) ಗುರುಸಮ್ಮು

ಖದಲ್ಲಿಯೂ ನಿನ್ನ ಶ್ಲೇಷೋಕ್ತಿಯೇ ?

ವಿದ್ಯಾ:— (ಕೃತಕಕೋಪದಿಂದ) ಚೆನ್ನಾಗಿದೆ, ಯೋಗ್ಯತೆಗೆತಕ್ಕ ಮಾತೇ ಹೊರಡುತ್ತದೆ. ಗುರುಸಮ್ಮುಖದಲ್ಲಿ ಮಾತ್ರ ಸಹಜಭಾವವನ್ನು ತೋರಿಸುವುದೂ, ಉಳಿದೆಡೆಗಳಲ್ಲಿ ವಕ್ರತೆಯನ್ನು ಹೊರಗೆಡಹುವುದೂ ನೀತಿಯಲ್ಲವೇ ? ಇದನ್ನಲ್ಲವೇ ನೀವು ಕಳೆದ ಆರುತಿಂಗಳಿಂದಲೂ ಅಭ್ಯಾಸಮಾಡಿರುವುದು ?

( ರಮಾನಂದಾದ್ಯರು ತಲೆವಾಗಿ ನಿಲ್ಲುವರು. ರವಿವರ್ಮಾದಿಗಳು ಹರ್ಷಿತರಾಗಿ ನೋಡುವರು )

ಸೌಮ್ಯ:— ಹಾಗೂ ಆಗಲಿ; ನೀವೂ ಇವನಂತೆಯೇ ಗುರುಗಳ ಅಭಿಮಾನಕ್ಕೆ ಪಾತ್ರರಾಗಲು ಪ್ರಯತ್ನಮಾಡಬಾರದೇಕೆ ?

ಕಳಿಂಗ:— ಅದೆಲ್ಲವೂ ಲಭ್ಯಾನುಸಾರ ನಡೆಯತಕ್ಕುದು. ನಮ್ಮ ಪ್ರಯತ್ನಮಾತ್ರದಿಂದಲೇ ಅದು ದೊರೆಯುವದೆಂಬ ಮಾತು ಅಸಂಗತ ಮತ್ತು ವೃಥಾಪ್ರಯಾಸ !

ರಮಾ:— ಹಾಗಲ್ಲವಯ್ಯ ! ವೃಥಾಶ್ರಮವೆಂದು ಸುಮ್ಮನೆ ಕುಳಿತಿರುವುದು ಸರಿಯಲ್ಲ. ಪ್ರಯತ್ನವೂ, ತಕ್ಕಷ್ಟು ಶ್ರಮಸಹಿಷ್ಣುತೆಯೂ ಇಲ್ಲದಿದ್ದರೆ, ಯಾವ ಕೆಲಸವೂ ತೃಪ್ತಿಕರವಾಗಿ ನೆರವೇರುವುದಿಲ್ಲ. ಪುರುಷಪ್ರಯತ್ನವು ನಿಜರೂಪದಿಂದ ನಡೆಯಿಸಲ್ಪಟ್ಟ ಮೇಲೆ ದೈವಯತ್ನವೂ ಅದಕ್ಕೆ ಸಹಕಾರಿಯಾಗಿ ಫಲವನ್ನು ಕೊಡುವುದು. ಇದಕ್ಕೆ ದೃಷ್ಟಾಂತವಾಗಿ ಬಲ್ಲವರು ಹೇಳುವುದನ್ನು ಕೇಳು—

ಕಂದ || ಎಳಸಿದೊಡನಾವ ಕಜ್ಜಂ |
ಫಳಿಪುದು, ಪುರುಷಪ್ರಯತ್ನಮಣಮಿಲ್ಲದೆಯಾ ||
ಗುಳಿಸುತೆ ಮಲಗಿರೆ ಹರಿಮುಖ |
ದೊಳಗಾಮಿಗವಿಂಡು ಪುಗುವುದೇಂ ಸದ್ಬುದ್ಧೀ ||

( ಸದ್ಬುದ್ಧಿಶತಕ )

ರವಿ:— (ಮಂದಹಾಸದಿಂದ) ಸರಿಸರಿ; ಈಗ ತಿಳಿದೆನು ! ನಾವು

ಪ್ರಯತ್ನಪಟ್ಟಮಾತ್ರಕ್ಕೆ ಎಲ್ಲವೂ ಫಲಕಾರಿಯಾಗುವುದೆಂದು ಈಗ ತಿಳಿದೆನು.

ರಮಾ:— ಹಾಗಲ್ಲ; ಧರ್ಮವಿರುದ್ಧವಲ್ಲದ ಮತ್ತು ಪರರಿಗೆ ಕೇಡನ್ನುಂಟುಮಾಡದ ಆವ ಕೆಲಸವಾದರೂ ಪ್ರಯತ್ನದಿಂದ ಸಾಧ್ಯವಾಗುವುದು.

ರವಿ:— ಹಾಗೋ? ಇರಲಿ; ಒಳ್ಳೆಯದು-ಕೆಟ್ಟದು ಎಂಬಿವನ್ನು ತಿಳಿಯುವ ಬಗೆ ಹೇಗೆ? ಫಲಪ್ರಾಪ್ತಿಯಾದ ಬಳಿಕಲ್ಲವೇ? ಹಾಗೆ ಬಂದಾಗ ನೋಡಿಕೊಳ್ಳುವ!

ರಮಾ:— ವಿವೇಚನಾಪರನಾದವನು, ಮುಂದೆ ಒದಗಬಹುದಾದ ಫಲವನ್ನು ಇಂದೇ ತಿಳಿದೆಚ್ಚತ್ತು, ಅದಕ್ಕೆ ತಕ್ಕಂತೆ ಅನುಕೂಲ ಪ್ರತಿಕೂಲಗಳನ್ನು ವಿಮರ್ಶಿಸಿ ಜಾಗರೂಕನಾಗಿರುವನು. ವಿವೇಚನೆಯಿಲ್ಲದವರಿಗೆ ಇದು ಸಾಧ್ಯವಲ್ಲ.

ರವಿ:— ಹೋಗಲಿ, ನೀನು ವಿವೇಚನಾಪರನಷ್ಟೆ; ನಿನಗೆ ಮುಂದೆ ಒದಗಬಹುದಾದ ಕಷ್ಟನಷ್ಟಗಳ ಫಲಗಳು ಎಂತಹವೆಂಬುದನ್ನು ಈಗ ತಿಳಿದುಹೇಳು; ಕೇಳುವ?

ರಮಾ:— (ಕಿರುನಗೆಯಿಂದ) ಅಣ್ಣಾ! ಅಸತ್ಯವಾದಿಗಳ ಮತ್ತು ಅಸೂಯಾಪರರಾದ ಮೂರ್ಖರ ಕಿರುಕುಳದಿಂದ, ಅಷ್ಟಿಷ್ಟು ಕಷ್ಟಗಳುಂಟಾಗಬಹುದಾದರೂ, ಕರ್ತವ್ಯಜಾಗ್ರತನಾಗಿರುವ ನನಗೆ ನನ್ನ ಗುರುವಿನ ಅನುಗ್ರಹವಿರುವ ವರೆಗೂ, ಮತ್ತಾವ ಉಪಹತಿಯೂ ಉಂಟಾಗಲಾರದು.

ರವಿ:—(ತಲೆದೂಗಿ ನಕ್ಕು ದರ್ಪದಿಂದ) ಭಲೆ, ನೀನೇ ಕರ್ತವ್ಯನಿಷ್ಠನಲ್ಲವೆ? ನೀನೇ ಸತ್ಯಸಂಧನಾಗಿರುವವನಲ್ಲವೆ? ಆಗಲಿ; ಸಂತೋಷ! ನಾವೆಲ್ಲರು, ಕಳ್ಳರು; ಸುಳ್ಳುಗಾರರು.

ರಮಾ:— ಅಣ್ಣಾ! ನಾನು ಕನಸಿನಲ್ಲಿಯಾದರೂ ನಿಮ್ಮನ್ನು ಹಾಗೆಂದು ಹೇಳುವುದಿಲ್ಲ. ಹೀಗೇಕೆ, ಇಲ್ಲದಸಲ್ಲದ ಮಾತುಗಳ

ನ್ನಾಡಿ ಕೋಪಗೊಳ್ಳುವೆ?

ಸುಮು:— ರಮಾನಂದ-'ಉಳ್ಳಿತಿಂದವನಿಗೆ ಅಳುಕಿತು' ಎಂಬ ಅಜ್ಜಮ್ಮನ ಮಾತಿಲ್ಲವೆ ?

ರಮಾ:— ಅದು ಹೇಗಾದರೂ ಇರಲಿ, ನಾನು ಎಂದಾದರೂ ನಿಮ್ಮನ್ನು ನಿಂದಿಸಿರುವೆನೇ?

ರವಿ:— ನಿಂದಿಸಿದೆಯೊ-ಇಲ್ಲವೊ ನಿನಗೇ ಗೊತ್ತು. ಈಗದರ ಪ್ರಸ್ತಾಪವೇನೂ ಬೇಕಾಗಿಲ್ಲ !

ತೆರೆಯುಲ್ಲಿ—(ಘಂಟಾನಾದವಾಗುವುದು.)

ರಮಾ:— (ತೆರೆಯಕಡೆ ನೋಡಿ) ಓಹೋ! ಪೂಜ್ಯರಾದ ಗುರುಗಳು ಬಂದರು,

(ಎಲ್ಲರೂ ಎದ್ದು ಕೈಕಟ್ಟಿ ನಿಲ್ಲುವರು. ಶುಭ್ರವಸ್ತ್ರಧರನಾದ ವಿದ್ಯಾವಾಗೀಶನು ದಂಡಪಾಣಿಯಾಗಿ ಪ್ರವೇಶಿಸುವನು.)

ಎಲ್ಲರೂ:— ( ಭಕ್ತಿಯಿಂದ ಕೈಮುಗಿದು ) " ಪರಬ್ರಹ್ಮಸ್ವರೂಪರಾದ ಗುರುದೇವರಿಗೆ ನಮಸ್ಕಾರವು. ವಿಜ್ಞಾನಪ್ರದರಾದ ಪೂಜ್ಯರಿಗೆ ವಂದನೆಗಳು. "

ವಿದ್ಯಾ:— ( ರವಿವರ್ಮಾದಿಗಳನ್ನು ಕುರಿತು ) " ಏನಯ್ಯಾ, ರವಿವರ್ಮ! ಎಂದಿನಂತೆಯೋ ಬಂದಿರುವಿರೋ? ಪಠ್ಯಪುಸ್ತಕಗಳನ್ನೇನಾದರೂ ತಂದಿರುವಿರೋ?

ರವಿ:— ಗುರುದೇವ ! ಮೋಡವು ಯಾವಾಗಲೂ ಕವಿದೇ ಇರುವುದೇ ?

ರಮಾ:—.(ನಕ್ಕು) ಬಿರುಗಾಳಿಯು ಹೊಡೆತಕ್ಕೆ ಸಿಕ್ಕುವವರೆಗೂ ಕವಿದೇ ಇರುವುದು.

ಕಳಿಂಗ:— ಗಾಳಿಯು ಬಂದು ಮೋಡವನ್ನು ಚದರಿಸಿತೆಂದೇ ಹೇಳಿದೆವು.

ವಿದ್ಯಾ:—ಹಾಗಾದರೆ, ಆಕಾಶವು ಶುಭ್ರವರ್ಣವಾಗಿದೆಯಷ್ಟೆ?

ಸುಮುಖಿ:— (ವಿನಯದಿಂದ) ಗುರುದೇವ! ಸ್ವಾಭಾವಿಕವಾಗಿ ಧೂಮ್ರವರ್ಣಾತ್ಮಕವಾಗಿರುವ ಆಕಾಶವು ಶುಭ್ರವರ್ಣವನ್ನು ಹೊಂದುವುದು ಹೇಗೆ?

ವಿದ್ಯಾ:— ಹೂಂ! ಹೇಳಿರಿ; ಹೇಗಿದ್ದರೆ ಶಾರದೆಯು ಪ್ರಸನ್ನಳಾಗುವಳು?

( ಎಲ್ಲರೂ ಒಬ್ಬರ ಮುಖವನ್ನು ಮತ್ತೊಬ್ಬರು ನೋಡುವರು.)

ವಿದ್ಯಾ:— ರಮಾನಂದ! ನಿನಗೂ ಗೊತ್ತಿಲ್ಲವೊ?

ರಮಾ:— ಗುರುದೇವ!—

ಕಂದ|| "ಬರೆವುದು ವಾಚಿಪುದಲಸದೆ |
ಪರಿಚಾರಿಪುದಲ್ಲಿಗಲ್ಲಿ ಬಲ್ಲನಿತರೊಳಂ ||
ಸರಸಪ್ರಸಂಗಗೈಯ್ಯಲು |
ಸರಸಿಜಭವರಾಣಿಯೊಲಿಯದೇಂ ಮಾಣ್ದಪಳೇ ||"

ಎಂಬ ನೀತಿಯನ್ನು ಬಲ್ಲವರಿಂದ ಕೇಳಿ ತಿಳಿದಿರುವೆನು.

ವಿದ್ಯಾ:— ಸರಿಯೆ; ಅಕ್ಷರಸ್ಫುರ ಮಾರ್ಗವು ಹೇಗಿರತಕ್ಕುದು?

ರಮಾ:— ಬಲ್ಲವರಾಡುವುದು ಹೀಗೆ—

ಕಂದ || "ಉಕ್ಕದೆ ಬಿಕ್ಕದೆ ಲಿಪಿಯಂ |
ನಕ್ಕದೆ ತಡವರಿಸದೆಡಹದುಡುಹದೆ ಪದವಿ ||
ಟಕ್ಕರ ಬಣಿಕೆಯೊಳೋದುವು |
ದಕ್ಕರಿಗರ ಮಾರ್ಗಮುತ್ತೆ ಚೂಡಾರತ್ನಾ ||"

ವಿದ್ಯಾ:— ಓದುವಾತನು ಹೇಗಿದ್ದರೆ ಗಮಕಿಯೆನ್ನಿಸುವನು?

ರಮಾ:— ಹಿರಿಯರು ಹೀಗೆ ತಿಳಿಸಿರುವರು—

ಕಂದ || "ಎಡರದೆ ಕಡೆಯದೆ ತಲೆಯಂ |
ಕೊಡಹದೆ ಕದುವಹಿಲ ಜಾಡ್ಯವೆನಿಸದೆ ||
ಕೆಡಿಸದೆ ಸರ್ವರ ಚಿತ್ತ |
ಕ್ಕೊಡಬಡಲೋದುವನೆ ಗಮಕಿ ಚೂಡಾರತ್ನಾ ||

ವಿದ್ಯಾ:— ಸರಿಯಾಗಿರುವುದು. ಇನ್ನು ವಿಚಾರವು ಇಲ್ಲಿಗೆ ಸಾಕಾಗಿರಲಿ. ನಿಮ್ಮ ಬರೆವಣಿಗೆಗಳನ್ನು ತಂದುತೋರಿಸಿರಿ.

( ರವಿವರ್ಮಾದಿಗಳು ತಮ್ಮ ತಮ್ಮ ಬರೆವಣಿಗೆಗಳನ್ನು ತಂದು ಮುಂದಿಡುವರು. )

ವಿದ್ಯಾ:— (ನೋಡಿ, ತಲೆದೂಗಿ) ಹೂಂ, ನಿಮ್ಮವೆಲ್ಲಿ?

( ರಮಾನಂದಾದಿಗಳು ತಂದು ಮುಂದಿಟ್ಟು, ವಿನೀತರಾಗಿ ನಿಲ್ಲುವರು.)

ವಿದ್ಯಾ:— ( ರಮಾನಂದನ ಬರೆವಣಿಗೆಯನ್ನು ನೋಡುತ್ತ ಕೋಪದಿಂದ) ಏನಯ್ಯ, ರಮಾನಂದ ! ಇದೇನು-ಬರೆವಣಿಗೆಯ ಸೊಗಸು ? ಅಕ್ಷರಗಳೇ ಕಾಣದಂತೆ ಹೀಗೆ ಗೀಚಿರುವುದೇಕೆ ? ಇದರಲ್ಲಿ ಇಷ್ಟರ ಕೊಳೆಯಾಗಲು ಕಾರಣವೇನು ?

ರಮಾ:—(ಭಯ ಕೌತುಕಗಳಿಂದ) ಗುರುದೇವ! ಕೊಳೆಯಾಗಲು ಕಾರಣವನ್ನು ತಿಳಿಯೆನು. ನಾನು ಬರೆದಾಗ ಚನ್ನಾಗಿಯೇ ಇದ್ದಿತು. ಈಗ ಅದು ಹೀಗಾದುದು ಹೇಗೋ ತಿಳಿಯೆನು.

ವಿದ್ಯಾ:—ನಿನಗೆ ತಿಳಿಯದೆ, ನಿನ್ನ ಪುಸ್ತಕಕ್ಕೆ ಕೊಳೆಯೆಲ್ಲಿಂದ ಬರಬೇಕು ?

ರಮಾ: – ನಾನು ಈಗಲೇ ಹೀಗೆಂದು ಹೇಳಲು ಶಕ್ತನಾಗಿಲ್ಲ.

ವಿದ್ಯಾ:—ಇಂದೇನೋ ಸಂದೇಹಾಸ್ಪದವಿಚಾರಗಳು ತೋರುತ್ತವೆ. ಇರಲಿ, ನೋಡುವ. ನಿನ್ನನ್ನು ಸಾಕಾರವಾದ ವಿದ್ಯಾಸ್ವರೂಪವನ್ನು ವರ್ಣಿಸಿ ಬರೆದುತೋರೆಂದು ನಿಯಮಿಸಿದ್ದೆನಷ್ಟೆ; ಏನು ಮಾಡಿರುವೆ ?

ರಮಾ:— ಕೃತಕಾರ್ಯನಾಗಿರುವೆನು.

ವಿದ್ಯಾ:— ಎಲ್ಲಿ? ಇತ್ತತಂದಿರಿಸು.

ರಮಾ:— ಪುಸ್ತಕಗಳನ್ನು ತೆಗೆದುನೋಡಿ, ಭೀತನಾಗಿ ನಿಲ್ಲುವನು.

ವಿದ್ಯಾ:— ಮತ್ತೆ, ಇದೇನು ನಟನೆ ?

ರಮಾ:— (ವಿನಯದಿಂದ) ನಟನೆಯಲ್ಲ, ಗುರುದೇವ ! ನನ್ನಿಂದ

ರಚಿತವಾದ ಸರಸ್ವತೀ ಸ್ತುತಿವಚನ ಪತ್ರವೂ, ಅದನ್ನೊಳಕೊಂಡಿದ್ದ ಪುಸ್ತಕವೂ ಅದೃಶ್ಯವಾಗಿವೆ.

ವಿದ್ಯಾ:— (ಖತಿಯಿಂದ) ರಮಾನಂದ ! ಶಿಷ್ಯರತ್ನವೆಂದೂ ನಿಜವಾದ ವಿದ್ಯಾರ್ಥಿಯಾಗುವವನೆಂದೂ ನಿರೀಕ್ಷಿಸಲ್ಪಟ್ಟಿದ್ದ ನೀನೇ, ಇಂದು, ಹೀಗೆ ಸಂಶಯಾಸ್ಪದನಾಗುವೆಯೆಂದು ತಿಳಿದಿರಲಿಲ್ಲ. ಒಂದು ಅಲ್ಪವಿಷಯಕ್ಕಾಗಿಯೇ ಸುಳ್ಳಾಡುವವನು ಮತ್ತಾವ ವಿಚಾರದಲ್ಲಿ ಬಿಟ್ಟಾನು ? ನಿನ್ನಿಂದ ಅದು ಸಾಧ್ಯವಲ್ಲದುದಾಗಿದ್ದರೆ, ನಿಜವನ್ನೇ ಹೇಳಬಹುದಾಗಿದ್ದಿತು; ಅದರಿಂದ ಬಾಧಕವೇನೂ ಇರುತ್ತಿರಲಿಲ್ಲ.

ರಮಾ:— ಪೂಜ್ಯಪಾದರೆ ! ನಾನು ನಿಜವನ್ನೇ ಆಡಿದೆನಲ್ಲದೆ, ಸುಳ್ಳನ್ನು ಹೇಳಿರುವುದಾಗಲೀ, ಹೇಳುವುದಾಗಲೀ ಇಲ್ಲ.

ವಿದ್ಯಾ:— ಹಾಗಿದ್ದರೆ, ನಿನ್ನ ಆತ್ಮಕೃತಿಬದ್ಧವಾದ ಕವಿತಾ ಪತ್ರವೆಲ್ಲಿ ಹೋಯಿತು ?

ಸುಮುಖ:— ಆರ್ಯರೇ ! ರಮಾನಂದನ ಬಳಿಯಲ್ಲಿದ್ದ ಪತ್ರವನ್ನು ನಾನೂ ನೋಡಿದ್ದೆನು.

ವಿದ್ಯಾ:— ಈಗ ಏನಾಯಿತು ? ಎಲ್ಲಿ ಹೋಯಿತು ? ಕದ್ದವರಾರು ?

ಸುಮುಖ:— ಕುಮಾರನ ಏಳಿಗೆಯನ್ನು ನೋಡಲಾರದ ಕೇಡಿಗರಿಂದಲೇ ಕದ್ದೊಯ್ಯಲ್ಪಟ್ಟಿರಬೇಕು.

ವಿದ್ಯಾ:— ಛಿಃ ! ಛಿಃ !! ನನ್ನ ಮುಂದೆಯೇ ಹೀಗೆ ದೋಷಾರೋಪಣೆಯೇ ? ಎಲೈ ರಮಾನಂದ ! ನಿನ್ನಿಂದ ಕಲ್ಪಿತವಾದ ಸ್ತುತಿವಚನವನ್ನು ಕಂಠಪಾಠ ಮಾಡಿಕೊಂಡಿರುವೆಯೋ ?

ರಮಾ:— ಭವದಾಶೀರ್ವಾದದಿಂದ ಕಂಠಪಾಠವಾಗಿರುವುದು.

ವಿದ್ಯಾ:— ಹಾಗಾದರೆ ಹೇಳು.

ರಮಾ:—(ವಿನೀತನಾಗಿ ನಿಂತು, ಮೇಲೆ ನೋಡುತ್ತ ಹೀಗೆ ಹೇಳುವನು) ಹೇ, ದೇವಿ, ವಾಗ್ದೇವಿ, ವಿದ್ಯಾಭಿಮಾನಿನೀ ದೇವಿ! ಅನುಗ್ರಹಿಸು.

ನಿನ್ನ ಈ ದಿವ್ಯರೂಪದ ಸಾಕ್ಷಾತ್ಕಾರಲಾಭವು ಯಾವ ಪುಣ್ಯಪುರುಷನಿಗೆ ಅನುಗ್ರಹಿಸಲ್ಪಡುವುದೋ, ಆತನ ಸುಕೃತಕ್ಕೆ ಪರಿಮಿತಿಯುಂಟೆ! ನಿನ್ನ ಅಂತರಂಗ ಕೃಪಾಕಟಾಕ್ಷಕ್ಕೆ ಪಾತ್ರನಾದವನನ್ನು ಮತ್ತಾವ ಬಗೆಯ ಕ್ಷಣಿಕವಾದ ರೂಪತೃಷ್ಣೆಯಾಗಲೀ ಬಳಿಗೆ ಸೇರುವುದೇ? ಎಂದಿಗೂ ಇಲ್ಲ. ಅಂತಹನಲ್ಲಿ ದುರ್ವ್ಯಸನ ಚಿಂತೆಗಳು ಹೇಗೂ ಸೇರುವುದಿಲ್ಲ. ಇದು ಸತ್ಯವಾದುದು. ಆದರೆ, ಎಲೈ ಜನನೀ! ನಿನ್ನ ದಿವ್ಯರೂಪ ಸಾಕ್ಷಾತ್ಕಾರಲಾಭವನ್ನು ನನಗೆ ಅನುಗ್ರಹಿಸು! ಹೇ, ಭಗವತಿ! ಸಕಲ ಧರ್ಮಕರ್ಮ-ಕ್ರಿಯಾಕಲಾಪಗಳಿಗೂ ಸಾಫಲ್ಯವನ್ನುಂಟುಮಾಡುವ ಸತ್ಯವೇ ಶಿರಸ್ಸಾಗಿಯೂ, ಭಕ್ತಿಯೇ ಫಾಲಸ್ಥಲವಾಗಿಯೂ, ಆತ್ಮೋನ್ನತಿಯನ್ನು ಹೊಂದಲು ಅತ್ಯಂತ ಮುಖ್ಯವೂ ಮಾನವನ ಸುಗುಣಗಳಿಗೆ ಕಾಂತಿಪ್ರದವೂ ಆದ ವಿನಯವೇ ಸರ್ವಾಂಗಪರಿಪುಷ್ಟತೆಯನ್ನು ತೋರುವ ನಾಶಿಕವಾಗಿಯೂ, ಮತ್ತು ಶಾಶ್ವತಸುಖದಾಯಕರಾದ ಚಂದ್ರಸೂರ್ಯರಂತೆ ಪರಿಶೋಭಿಸುವ ವಿವೇಕ, ಜ್ಞಾನಗಳೇ ನೇತ್ರಗಳಾಗಿಯೂ, ಅಮೃತಧಾರಾಮಯವಾದ ಸುಧಾಪರಿಪೂರ್ಣಪಾತ್ರದಂತೆ ಪರಿಶೋಭಿಸುವ ವೇದವೇ ವದನವಾಗಿಯೂ, ವೇದದ ರಸಾಸ್ವಾದನಮಾಡಲು ಮಾರ್ಗವನ್ನು ತೋರುತ್ತಿರುವ ವೇದಾಂಗಗಳೇ ದಂತಪಙ್ಕ್ತಿಯಾಗಿಯೂ ಸಮಸ್ತವಸ್ತುಸ್ಥಿತಿಯನ್ನೂ ಸರಸವಾಗಿ ವರ್ಣಿಸಿ, ಭಗವನ್ನಾಮಗುಣಕಥನಕ್ಕೆ ಮನವನ್ನಾಕರ್ಷಿಸುವ ಮಂತ್ರದಂತಿರುವ ಕವಿತಾಶಕ್ತಿಯೇ ರಸನೆಯಾಗಿಯೂ ಪ್ರಕಾಶಿಸುತ್ತಿರುವ ಈ ನಿನ್ನ ದಿವ್ಯಾನನದ ಸೌಂದರ್ಯವನ್ನು ವರ್ಣಿಸಲು ಕೇವಲ ಬಾಲಮಾತ್ರನಾದ ನನಗೆ ಸಾಧ್ಯವೇ? ತಾಯಿ! ಈ ನಿನ್ನ ಸರ್ವಾಂಗಸ್ವರೂಪವರ್ಣನೆಯನ್ನು ಮಾಡಬೇಕಾದರೆ, ಸರಸ ಸಹಸ್ರಫಣಿಯಾದ ಆದಿಶೇಷನೇ ಆಗಬೇಕಲ್ಲದೆ ಸಾಮಾನ್ಯರಿಗೆ ಸಾಧ್ಯವಲ್ಲ. ಎಲೈ ವಾಗ್ದೇವಿ! ಇಂತಹ ಅದ್ಭುತಮಹಿಮಾನ್ವಿತೆಯಾದ ನಿನ್ನಲ್ಲಿ ನಾನು ಅನನ್ಯಭಕ್ತಿಭಾವದಿಂದ ಪ್ರಣಮಿಸುತ್ತಿರುವೆನು. ಕೃಪಾದೃಷ್ಟಿ

ಯಿಂದ ಕಟಾಕ್ಷಿಸಿ, ಕೈಹಿಡಿದು ಕೃತಾರ್ಥನೆನ್ನಿಸು" ಎಂದು ಹೇಳಿ ಸುಮ್ಮನಾಗಿ ನಿಲ್ಲುವನು.

---

ರಾಗ — ಜಂಗಲ್. (ಅರಳಿದ ಮಲ್ಲಿಗೆ ಪರಿಮಳ)

ಸರಸಿಜ ಭವಸತಿ— ಕರುಣಿಸು ಸನ್ಮತಿ— ಹರಿಸ್ಮರಣಾಭಿರತಿ ॥ ॥ ಪ ॥
ಪರಮಕೃಪಾಕರೆ— ವರದಾಭಯಕರೆ— ನೀನಹುದ್ದೈ ಸುಕರೇ ॥ ॥ ಅನು ॥
ಸತ್ಯವೇ ನಿನಗಿದು, ಉತ್ತಮಾಂಗವು, ಭಕ್ತಿಯೇ ಫಾಲಸ್ಥಲವು ।
ಉತ್ತಮೋತ್ತಮವೆನಿಸುವ ವಿನಯವು— ನಾಸಿಕವದು ನಿಜವು ॥ ॥ ೧ ॥
ಜ್ಞಾನವಿವೇಕ ಸುಲೋಚನವಾಗಿರೆ— ಆನನವಿದರೊಳ್ ।
ತಾನಾಗಿರೆ ವೇದವೆ ವದನವು — ಮಾನಸಕಳಿಸುಖವು ॥ ॥ ೨ ॥
ಬಗೆಗೊಳ್ಳುವ ನಿನ್ನೀ ಬಗೆಬಗೆರೂಪವ— ಬಗೆಬಗೆದಾನೆರವೇ ।
ಸೊಗಸಿತೆ ನಿನ್ನೀ ಬಗೆ ಸೇವೆಗೆ ನಿ— ನ್ನಣುಗರ ವರಿಸೆನುವೇ ॥ ॥ ೩ ॥
ದೇಶಸೇವೆಯೊಳಾಶಿಸುತಿರುವೆವು — ಗಾಶ್ರಯತರು ನೀನೇ ।
ಭಾಷಾಮಾನಿನಿ, ಬಲಗೊಂಬೆವು ನಿನ್ನನು — ಶೇಷಗಿರಿವರನಾಣೆ ॥ ॥ ೪ ॥

ವಿದ್ಯಾ:— (ಸುತ್ತಲೂ ನೋಡುವನು.)

(ರವಿವರ್ಮಾದಿಗಳು ಪರಸ್ಪರ ಮುಖಗಳನ್ನು ನೋಡಿಕೊಳ್ಳುವರು.)

ವಿದ್ಯಾ:— ಏನಯ್ಯಾ? ಹೀಗೆ ಒಬ್ಬರನ್ನೊಬ್ಬರು ನೋಡುತ್ತಿರುವಿರಿ? ವಿಚಾರವೇನು?

ರವಿ:— ಕ್ಷಮಿಸಬೇಕು ಗುರುದೇವ! ನಿಜಾಂಶವನ್ನು ಸನ್ನಿಧಾನದಲ್ಲಿ ನಿವೇದಿಸಿದೆವಾದರೆ, ರಮಾನಂದನಿಗೆ ಅಪ್ರಿಯರಾಗುವೆವೆಂದು ಚಿಂತಿಸುತ್ತಿರುವೆವು.

ವಿದ್ಯಾ:— (ಕೌತುಕದಿಂದ) ಅದೇನದು? ರಮಾನಂದನಿಂದ ಅಲ್ಲದ-ಸಲ್ಲದುದೇನಾದರೂ ಮಾಡಲ್ಪಟ್ಟಿತೇನು? ಹಾಗಾಗಿದ್ದರೂ ಹೇಳದೆ ಇರುವುದು ನ್ಯಾಯವಲ್ಲ. ಉಚಿತಾನುಚಿತಗಳನ್ನು ತಿಳಿಸಿ, ಎಚ್ಚರಿಸುವುದೇ ಆಪ್ತರ ಲಕ್ಷಣವು.

ರವಿ:— ಉಚಿತವೊ, ಅನುಚಿತವೊ, ನಾವು ಅದನ್ನು ಹೇಳಲಾ

ರೆವು.

ವಿದ್ಯಾ:—ಅದೇನೆಂಬುದನ್ನು ಬಾಯ್ದೆರೆದು ಹೇಳಬಾರದೇ ?

ರವಿ:— ಮತ್ತೇನೂ ಇಲ್ಲ. ರಮಾನಂದನು ಶಾಲೆಗೆ ಬರುವಾಗ ಚಾವಡಿಯ ಮುಂದೆ ಬರುತ್ತಿದ್ದನು.

ರಮಾ:— (ಕೌತುಕವಿಸ್ಮಯಗಳಿಂದ ನೋಡುವನು).

ವಿದ್ಯಾ:— ಆ ಮೇಲೆ ?

ರವಿ:— ಹಾಗೆ ಬರುತ್ತಿದ್ದವನ ಹಿಂದೆಯೇ ಮತ್ತೊಬ್ಬ ಜೂಜುಗಾರನು ಓಡಿಬಂದು, ಇವನನ್ನು ಹಿಡಿದು ನಿಲ್ಲಿಸಿಕೊಂಡನು. ಹಿಂದೆ ದೂರದಲ್ಲಿ ಬರುತ್ತಿದ್ದ ನಾವು ಇದನ್ನು ನೋಡಿ, ಸಂಗತಿಯನ್ನು ತಿಳಿಯಲು ಅಲ್ಲಿಯೇ ನಿಂತೆವು.

ವಿದ್ಯಾ:— (ಶಂಕಿತನಾಗಿ) ಆ ಮುಂದೆ ?

ರವಿ:— ಹಾಗೆ ಆತನು ಹಿಡಿದು ನಿಲ್ಲಿಸಿಕೊಂಡ ಒಂದೆರಡು ನಿಮಿಷದಲ್ಲಿಯೇ ಈತನು ತಪ್ಪಿಸಿಕೊಂಡು ಓಡಿಹೋದನು.

ವಿದ್ಯಾ:— ಇದೇನೋ ವಿಚಿತ್ರವಾಗಿದೆ. ಮುಂದೆ ಹೇಳಿರಿ.

ರವಿ:— ಇವನು ಓಡಿದ ವೇಗದಿಂದ ಕಂಕುಳಲ್ಲಿ ಅಡಗಿದ್ದ ಪುಸ್ತಕವು ಕಳೆದು ಕೆಳಗೆ ಬಿದ್ದುಹೋಯಿತು. ಆತುರದಲ್ಲಿದ್ದ ಇವನಿಗೆ ಅದು ಗೊತ್ತಾಗಲಿಲ್ಲವೇನೋ ತಿಳಿಯೆವು. ಹೇಗೂ ಅದನ್ನು ಆತನು ಕೈಕೊಂಡು ತೆರೆದುನೋಡುತ್ತ ಅದರಲ್ಲಿದ್ದ ಪತ್ರವನ್ನು ತೆಗೆದು, ಕೆಳಗೆ ಬಿಸುಟು, ಬಂದದಾರಿಯಲ್ಲಿ ಹಿಂದಿರುಗಿದನು.

ರಮಾ:— ( ತಲೆದೂಗಿ ) ಅಣ್ಣಾ ! ವಾರ್ತಾಂತರಂಗಗಳು ಬಹು ಪ್ರಯಾಸದಿಂದ ಕಂಠಪಾಠಮಾಡಲ್ಪಟ್ಟು ಹೊರಹೊರಡುವುವೆಂದು ತೋರುತ್ತಿರುವುವು.

ವಿದ್ಯಾ:— ( ದರ್ಪಿತನಾಗಿ ) ಸಂಗತಿಯನ್ನು ವಿಸ್ತರಿಸುವುದಕ್ಕೆ ಮೊದಲೇ ನೀನೇಕೆ ತಡೆಯುತ್ತಿರುವೆ ?

ರಮಾ:— ಗುರುದೇವ ! ಸತ್ಯಕ್ಕೆ ಸಾವಿಲ್ಲವೆಂದು ನಂಬಿರು

ವೆನು. ಇವರ ಕುಕಲ್ಪನೆಯು ನಿಜಸ್ವರೂಪವು ಹೇಗಾದರೂ ಸನ್ನಿಧಾನಕ್ಕೆ ವಿದಿತವಾಗದೆ ಇರುವುದಿಲ್ಲ. ಇವರು ಈಗ ಏನನ್ನು ಬೇಕಾದರೂ ಹೇಳಿಕೊಳ್ಳಲಿ; ತಡೆಯಿಲ್ಲ.

ಕಳಿಂಗ:— "ಕಂಡುದನ್ನು ಹೇಳಿದರೆ, ಕೆಂಡದಂತಾಗುವುದು ಲೋಕಸ್ವಭಾವ." ನಿನ್ನ ನಡೆತೆಯಲ್ಲಿ ಕಣ್ಣಾರೆ ಕಂಡುದನ್ನು ಹೇಳಿದೆವಲ್ಲದೆ, ನಿನ್ನ ಮೇಲೆ ಇಲ್ಲದ ದೋಷವನ್ನು ಹೊರಿಸಬೇಕೆಂದು ಹೇಳಿದುದಲ್ಲ.

ವಿದ್ಯಾ:— ಸಾಕು, ನಿಲ್ಲಿಸಿರಿ! ಅಧಿಕಪ್ರಸಂಗಕ್ಕೆ ಇದು ಸ್ಥಳವಲ್ಲ. ಮುಂದೆ ಹೇಳಿರಿ.

ರವಿ:— ಹಿಂತಿರುಗುತ್ತಿದ್ದವನನ್ನು ನಾನು ತಡೆದು ವಿಚಾರವೇನೆಂದು ಕೇಳಿದೆನು. ಅದಕ್ಕಾತನು-'ರಮಾನಂದನು ಈಗ ನಾಲ್ಕಯ್ದು ದಿನಗಳಿಂದಲೂ ಜೂಜಿನ ಚಾವಡಿಗೆ ಬರುತ್ತಿದ್ದನು. ನಿನ್ನೆ ರಾತ್ರಿಯಲ್ಲಿ ನಾವು ಬೇಡವೆಂದರೂ ಪಂಥಕ್ಕೆ ನಿಂತು, ಸೋತು, ಹಣವನ್ನು ಕೊಡದೆ ತಪ್ಪಿಸಿಕೊಂಡು ಓಡಿಹೋಗಿದ್ದು, ಈಗ ಇಲ್ಲಿ ಸಿಕ್ಕಿದನು. ಈಗಲೂ ತಾನು ಹಣವನ್ನು ಕೊಡುತಕ್ಕುದಿಲ್ಲವೆಂದೂ, ತನ್ನನ್ನು ತಡೆದು ನಿಲ್ಲಿಸಿಕೊಂಡುದಕ್ಕೆ ಎಂದಾದರೂ ಪ್ರತೀಕಾರ ಮಾಡದಿರಲಾರೆನೆಂದೂ ಹೇಳಿ ಬಿಡಿಸಿಕೊಂಡು ಓಡಿದನು. ಆವನ ಕಕ್ಷದಿಂದ ಈ ಪುಸ್ತಕವು ಜಾರಿಬಿದ್ದುದರಿಂದ, ಇದೇ ನನ್ನ ಹಣಕ್ಕೆ ಪ್ರತಿಫಲವಾಗಿ ದಕ್ಕಿತೆಂದು ತಿಳಿದು, ಸುಮ್ಮನಾಗಿ ಬಂದೆನು.' ಎಂದು ಹೇಳಿ, ಕೈಯಲ್ಲಿದ್ದ ವ್ಯಾಕರಣವನ್ನು ತೋರಿಸಿ ಹೊರಟುಹೋದನು. ನಾವು ಬರಿಯ ಕೈಯಲ್ಲಿ ಬಂದಿದ್ದುದರಿಂದ ಅದನ್ನು ಬಿಟ್ಟುಬರಬೇಕಾಯಿತು. ಹಾಗೆಯೇ ಕೆಳಗೆ ಬಿದ್ದಿದ್ದ ಪತ್ರವಾವುದೆಂದು ತೆಗೆದುನೋಡುವಲ್ಲಿ, ಈತನ ಕೈಬರೆಹವೆಂದೂ, ಶಾರದಾಸ್ತುತಿವಚನವಾಗಿದೆಯೆಂದೂ ತಿಳಿದು, ಇವನಿಗೆ ಮುಟ್ಟಿಸಲು ಅದನ್ನು ಕೈಕೊಂಡು ಬಂದೆವು. ಇಷ್ಟೆ.

ವಿದ್ಯಾ:— ( ಸಂಶಯದಿಂದ ) ಜೂಜಿಗೂ ಸೇರಿದನೆ ? ಆಗಲಿ; ಅದರಿಂದಾಗುವ ಅನಿಷ್ಟವು ಇನ್ನೂ ಈಗಲೇ ಹೇಗೆ ತಿಳಿಯಬೇಕು ! ಫಲಪ್ರಾಪ್ತಿಕಾಲದಲ್ಲಿ ಪರಿತಪಿಸಬೇಕಾದೀತು. ಇರಲಿ; ಆ ಪತ್ರವನ್ನು ಇಲ್ಲಿ ತಾ.

ರವಿ:—(ಅಂಗಿಯ ಕಿಸೆಯಿಂದ ಮಡಿಸಿದ್ದ ಪತ್ರವನ್ನು ತೆಗೆದುಕೊಡುವನು)

ವಿದ್ಯಾ:— (ಹಿಂದೆಮುಂದೆ ನೋಡಿ) ಇದೇನಯ್ಯಾ! ಮಣ್ಣು, ಮಸಿ, ಕೊಳೆ ?

ರವಿ:— ಇದು ಬಿದ್ದಿದ್ದ ಸ್ಥಳವು ನೀರಿನಿಂದ ತೊಯ್ದುಹೋಗಿದ್ದ ನೆಲವಾಗಿದ್ದಿತು. ಆದುದರಿಂದ ಹೀಗಾಗಿದೆ.

ವಿದ್ಯಾ:— ರಮಾನಂದ ! ಇತ್ತ ಬಾ; ಇದು ನಿನ್ನ ಬರಹವೇ ಅಹುದೋ ಅಲ್ಲವೋ ನೋಡಿ ಹೇಳು.

ರಮಾ:— ( ಮುಂದೆಬಂದು ನೋಡಿ, ವಿನಯದಿಂದ ) ಇದು ನನ್ನ ಬರಹವೇ ಅಹುದು.

ವಿದ್ಯಾ:—ಹಾಗಿದ್ದರೆ. ನೀನು ಜೂಜಿಗೆ ಹೋಗಿದ್ದುದೂ ನಿಜ!

ರಮಾ:— ಜೂಜಿಗಾಗಲಿ, ಮತ್ತಾವ ಮನೋವಿಕಲ್ಪಹೇತುಗಳಾದ ಆಟಗಳಿಗೇ ಆಗಲೀ ನಾನು ಈ ವರೆಗೂ ಸೇರಿರುವುದಿಲ್ಲ; ಮುಂದೆಯೂ ಸೇರತಕ್ಕವನಾಗಿಲ್ಲ ಹಿರಿಯರ ಆಶೀರ್ವಾದದಿಂದ ಅವೆಲ್ಲವನ್ನೂ ಮನಃಪೂರ್ವಕವಾಗಿ ತಿರಸ್ಕರಿಸಿರುವೆನು. ಮತ್ತು ಈ ವರೆಗೆ ಹೇಳಲ್ಪಟ್ಟುದಾವುದೂ ನಿಜವಲ್ಲವೆಂದೂ ನಾನು ಖಂಡಿತವಾಗಿ ಹೇಳಬಲ್ಲೆನು.

ವಿದ್ಯಾ:— ಆಗಲಿ; ಕಳ್ಳನಿಗೆ ಸುಳ್ಳೇ ಮಂತ್ರ. ಇರಲಿ; ಈಗ ನಿನ್ನ ಪತ್ರವು ಆತನಿಗೆ ಮತ್ತೆ ಹೇಗೆ ಸಿಕ್ಕಿತು ?

ರಮಾ:— ನನಗೆ ತಿಳಿಯದು.

ವಿದ್ಯಾ:— ನಿನಗೆ ತಿಳಿಯದೆ ನಿನ್ನ ಪದಾರ್ಥವು ಮತ್ತೊಬ್ಬರ ಬಳಿಗೆ ಹೋಗುವುದೇ ?

ರಮಾ:— ನಾನು ಮಂದಿರದಿಂದ ಶಾಲೆಗೆ ಸೌಮ್ಯ, ಸುಮುಖಿ, ಯುವಾನರ ಒಡಗೊಂಡೇ ಬಂದೆನಲ್ಲದೆ ಒಂಟಿಯಾಗಿಯಾಗಲೀ, ಜಾವಡಿಯು ಮುಂದೆಯಾಗಲೀ ಬಂದುದಿಲ್ಲ. ಅಲ್ಲದೆ ನಾವು ಬರುತ್ತಾ ಬಾಲೋದ್ಯಾನದ ಮಧ್ಯೇ ಕುಳಿತು, ಕೆಲವು ಹೊತ್ತು ವಿದ್ಯಾವಿಚಾರವನ್ನು ಪ್ರಸ್ತಾಪಿಸುತ್ತಿದ್ದೆವು. ಆಗ ಇದು ನನ್ನ ಬಳಿಯಲ್ಲಿಯೇ ಇದ್ದಿತು.

ವಿದ್ಯಾ:— ಮತ್ತೆ ನೀನು ಅದನ್ನು ನೋಡಿದುದೆಲ್ಲಿ? ಯಾವಾಗ?

ರಮಾ:— ಇದಕ್ಕೆ ಮೊದಲು ನೋಡಬೇಕಾದ ಅಗತ್ಯವಿರಲಿಲ್ಲ. ಇಲ್ಲಿಯೇ ಈಗಲೇ ನೋಡಿದುದು

ವಿದ್ಯಾ:— ಇದನ್ನು ಎಲ್ಲಿರಿಸಿದ್ದೆ ?

ರಮಾನಂದ:— ರವಿವರ್ಮನು ಹೇಳಿದಂತೆ ವ್ಯಾಕರಣಪುಸ್ತಕದಲ್ಲಿಯೇ ಇದ್ದಿತು.

ವಿದ್ಯಾ:— ಹಾಗಿದ್ದರೆ, ಅವನು ಹೇಳಿದುದೇ ನಿಜವಾಗಿರಬೇಕಷ್ಟೆ ?

ರಮಾ:— ಪೂಜ್ಯರೆ ! ನ್ಯಾಯಾನ್ಯಾಯವನ್ನು ವಿಚಾರಿಸಿ, ನಿರ್ಧರಿಸುವುದು ಗುರುಜನರನ್ನೇ ಸೇರಿದೆ. ನಾನು ಈ ವಿಚಾರದಲ್ಲಿ ಮತ್ತೇನನ್ನೂ ಹೇಳಲು ಶಕ್ತನಲ್ಲ. ಚಿತ್ತಕ್ಕೆ ಸರಿದೋರಿದಂತೆ ಮಾಡಬಹುದಲ್ಲದೆ, ಸನ್ನಿಧಾನದಿಂದ ಕೊಡಲ್ಪಡುವ ಯಾವ ಶಿಕ್ಷೆಗಾಗಲೀ ಬದ್ಧನಾಗಿರುವೆನೆಂದೂ ನಿವೇದಿಸಿರುವೆನು.

ವಿದ್ಯಾ:— (ಖತಿಯಿಂದ ಸಿಟ್ಟುಸಿರಿಟ್ಟು) ರಮಾನಂದ ! ವಿದ್ಯಾರ್ಥಿಯಾದವನಿಗೆ ಅಸೃತ, ಅಸೂಯೆ, ವಂಚನೆ, ದ್ಯೂತ, ಕಾಮುಕತ್ವ ಇವುಗಳೆಲ್ಲವೂ ಶತ್ರುಸ್ವರೂಪವಾಗಿ, ಸರ್ವನಾಶಮಾಡತಕ್ಕವುಗಳಾಗಿರುವುವು. ಮತ್ತು ವಿದ್ಯಾರ್ಥಿಯು ದಂಭ, ಅಲಂಕಾರ, ಸುಗಂಧಾನುಲೇಪನ, ವಿಡಂಬನ, ನರ್ತನಾದಿ ವಿಲಾಸಗಳಲ್ಲಿ ಆಸಕ್ತನಾಗುವುದೂ ಅನಿಷ್ಟಹೇತುವು. ಇದನ್ನು ಖಂಡಿತವಾಗಿ ತಿಳಿದು, ಮನಸ್ಸನ್ನು

ಮೇಲಿನ ದುರ್ವಿಷಯಚಿಂತೆಗಳಿಗೆ ಒಳಪಡಿಸದೆ ಎಚ್ಚೆತ್ತಿದ್ದು ವಿನಯ, ಸತ್ಯ, ಶಾಂತಿ ಕ್ಷಮಾ ವಿವೇಚನೆಗಳನ್ನು ಅವಲಂಬಿಸಿ, ಬ್ರಹ್ಮಚರ್ಯ ನಿಷ್ಠೆಯಿಂದ ಗುರುಕುಲವಾಸದಲ್ಲಿ ಪರಿಪಕ್ವ ಬುದ್ಧಿಯನ್ನು ಹೊಂದುವವನೇ ನಿಜವಾದ ವಿದ್ಯಾಧನವನ್ನು ಅರ್ಜಿಸಲು ಅರ್ಹನು. ಇದನ್ನು ನಿಮಗೆ ಎಷ್ಟೋಬಾರಿ ಹೇಳಿದ್ದೇನು. ಆದರೂ ನೀವು ಇನ್ನೂ ನಂಬಿಕೆಯನ್ನುಂಟುಮಾಡಲು ಪ್ರಯತ್ನಿಸಿದಂತೆ ತೋರಲಿಲ್ಲ. ಮತ್ತೇನು ಹೇಳಲಿ? ರಮಾನಂದ! ಅಪಾತ್ರನಿಗೆ ದಾನಮಾಡಬಾರದೆಂಬ ನೀತಿಯುಂಟು. ಆದುದರಿಂದ ಶ್ರೇಷ್ಠವಾದ ವಿದ್ಯಾಧನವನ್ನು ದಾನಮಾಡಲು, ಪಾತ್ರಾಪಾತ್ರವನ್ನು ತಿಳಿಯಬೇಕೆಂದೇ ಈ ವರೆಗೂ ನಿಮ್ಮನ್ನು ಕೇವಲ ಅಲ್ಪವಿಷಯವಿಚಾರದಲ್ಲಿ ಮಾತ್ರ ನಿಯಮಿಸಿದ್ದೇನು. ನಿಮ್ಮ ಯೋಗ್ಯತಾಪರಿಶೀಲನೆಗೆಂದೇ ಈ ದಿನವನ್ನು ಗೊತ್ತುಮಾಡಿದ್ದೆನು. ಆದರೆ ಇಷ್ಟು ದೀರ್ಘಕಾಲವೂ ನಿನ್ನ ನಡೆನುಡಿಯಲ್ಲಿ ಲೇಶಮಾತ್ರದ ಸಂಶಯಕ್ಕೂ ಅವಕಾಶವಿಲ್ಲದಿದ್ದುದು, ಇಂದು ಒಂದೇತಡವೆ ಒಟ್ಟಾಗಿ ಹೊರಬಿದ್ದಿರುವುದನ್ನು ನೋಡಿದರೆ, ನನಗೆ ಅತ್ಯಂತ ವ್ಯಾಕುಲವೂ, ಕ್ರೋಧವೂ, ಸಂದೇಹವೂ ಉಂಟಾಗಿವೆ. ಇದರ ಪೂರ್ವಾಪರವನ್ನು ಚೆನ್ನಾಗಿ ತಿಳಿದು, ಸಂಶಯವು ಪರಿಹಾರವಾಗುವ ವರೆಗೂ, ನಾನು ನಿಮ್ಮನ್ನು ಬಿಟ್ಟುಬಿಡುವುದಕ್ಕಾಗಲೀ, ಇಲ್ಲವೇ ಪ್ರೌಢವಿದ್ಯಾಭ್ಯಾಸದಲ್ಲಿ ನಿಯೋಜಿಸುವುದಕ್ಕಾಗಲೀ ಇಷ್ಟವುಳ್ಳವನಾಗಿಲ್ಲ. ಇದಕ್ಕೆ ಇನ್ನೂ ಒಂದು ವಾರದ ವರೆಗೆ ಅವಧಿಯನ್ನು ಕೊಟ್ಟಿರುವೆನು. ಅಷ್ಟರಲ್ಲಿಯಾದರೂ ಅಪಚಾರವಿಂತಹುದೆಂದು ತಿಳಿದು ಹೇಳಿ, ಕ್ಷಮೆಯನ್ನು ಕೋರುವುದು ಶ್ರೇಯಸ್ಕರವೆಂದು ನಿಮ್ಮೆಲ್ಲರಿಗೂ ಹೇಳಿರುವೆನು.

(ತೆರೆಯಲ್ಲಿ): ಪರಿಚಾರಕರೇ! ಶಾರದಾ ಉಪಾಸನೆಗೆ ಹೊತ್ತು
ಮೀರುತ್ತಿದೆ. ನಿಮ್ಮ ನಿಯಮಿತ ಕಾರ್ಯಗಳನ್ನು
ಸಾಂಗವಾಗಿ ಮಾಡಿರುವಿರಷ್ಟೆ?

ವಿದ್ಯಾ:— (ಗಾಬರಿಯಿಂದೆದ್ದು) ಓಹೋ! ಆಗಲೇ ಹೊತ್ತು ಮೀರುತ್ತಿದೆ. ಇಂದಿನ ವಿದ್ಯಮಾನವಿಶೇಷದಿಂದ ವಿಷಾದಗ್ರಸ್ತೆನಾಗಿದ್ದ ನನಗೆ ಹೊತ್ತೇ ತಿಳಿಯಲಿಲ್ಲ. ಇಂದು ಇಷ್ಟಕ್ಕೆ ಸಾಕಾಗಿರಲಿ; ಮುಂದೆ ನೋಡುವ. ಇನ್ನು ಎಲ್ಲರೂ ಶಾರದಾ ಉಪಾಸನೆಗೆ ನಡೆಯಿರಿ.

(ಎಲ್ಲರೊಡನೆ ಹೊರಡುವರು).

---

## ಶಾರದಾ-ಉಪಾಸನೆ.

ರಾಗ— (ಶ್ರೀ ಸಣಾರ್ಣಂಬಿಕೆ)

ಶ್ರೀ ಸರಸ್ವತೀ — ಸುಮತೀ — ಭಗವತೀ — ಭಾರತೀ — ||ಪ||
ವಾಣೀ — ವೀಣಾ ಪುಸ್ತಕಪಾಣಿ — ಪಂಕಜಯುಗೆ ಫಣಿವೇಣಿ — ಮಂಜುಳವಾಣೀ |
ಏಣಾಂಕವದನೆ ಶುಭಗುಣಶ್ರೇಣೀ | ಗೀರ್ವಾಣಿ — ಬ್ರಹ್ಮಾಣಿ — ಜನನೀ || ೧ ||
ಶಾರೇ — ನಿಗಮಾಗಮವಿಚಾರೇ | ಘೋರಭವಭಯದೂರೆ — ಶುಭ್ರಾಂಬರಧಾರೆ |
ಸಾರಸಭವಹೃತ್ಸಾರಸವಿಹಾರೇ | ಧೀರೇ-ಚತುರೇ-ಕೀಪಲ್ಲವಚಿಕುರೇ-ಶ್ರೀ || ೨ ||
ವರದೇ — ರಸನದಿ ನಿಂತವಸರದೇ — ಸರಸದಿನುಡಿ ನಿಜಗುಣದಿ — ಸೂನೃತವ್ರತದಿ |
ವರಶೇಷಾದ್ರಿನಿಕೇತನಂಘ್ರಿಯ-ಮರೆಯದೆ-ಭಜಿಸುವ-ತೆರದಿಂ ಕೊಡುವರವಂ || ೩ ||

— ಇಷ್ಟಕ್ಕೆ ತೃತೀಯಾಂಕವು —

ಶ್ರೀ

॥ ಶ್ರೀ ಲಕ್ಷ್ಮೀ ಪ್ರಸನ್ನ ॥

## ತುರೀಯಾಂಕ

### ( ಪ್ರಾರ್ಥನೆ. )

ರಾಗ— ( ತರಣಿ ವಂಶಾಬ್ಧಿ ಚಂದ್ರ )

ಪಾಲಿಸೆನ್ನನು ಜಾನಕಿ—ಅರವಿಂದನಾಯಕಿ—ಪಾಲಿಸೆನ್ನನು ಜಾನಕೀ ||ಪ||
ಫಾಲಲೋಚನನುತೆ—ತ್ರೈಲೋಕ್ಯವಿಖ್ಯಾತೆ—ಬಾಲಾರ್ಕದ್ಯುತಿ ಭಾಸುರಾನನೆ—
ನೀಲಾಳಕ ನಿತ್ಯನಿರ್ಮಲೆ ॥ ಪಾಲಿಸೆನ್ನನು ||ಅನು||
ಜನನಿಯಲ್ಲವೆ ನೀನು—ತನುಭವರೊಳು—ಇನಿತು ನಿರ್ದಯವೇನು? ।
ಮನಕೆತಾಳಲು ನೀನು—ಕ್ಷಣದೊಳು ದೀನನಂ-ಅನಘಸಂಪದದಿಂದ ಮೆರೆಯಿಪ—
ಘನತೆಯಾಂತವಳಲ್ಲವೇನು?— ಪಾಲಿಸೆನ್ನನು ||೧||
ಬಾಗುತೆಶಿರವಿಳೆಗೆ—ಬೇಡುವಬಗೆ—ಕೂಗುಬೀಳದೆ ಕಿವಿಗೆ ।
ಭಾಗವತಾರ್ಚಿತೆ—ಭಾರ್ಗವೀನಾಮಖ್ಯಾತೆ—ಬೇಗೆಯೆಲ್ಲವ ಪರಿದುಯೆನ್ನನು—
ರಾಗದಿಂದಲಿ ನೋಡು ಭರದಲಿ ॥ ಪಾಲಿಸೆನ್ನನು ||೨||
ನೀನಲ್ಲದನ್ಯರ—ಕಾಣೆನು ಹಿತರ—ಮಾನಿತಗುಣಯುತರ ।
ಆನತರಾಗುವ—ಸೂನೃತವ್ರತಿಗಳಿ—ಗಾನಂದವಿತ್ತು ಸಲಹುವ—ರಾಜೇಂದ್ರ
ನಾಥನ ರಾಣಿ ಶ್ರೀಮಣಿ ॥ ಪಾಲಿಸೆನ್ನನು ||೩||

### ಸ್ಥಾನ ೧:—ಬಾಲೋದ್ಯಾನದ ಮುಂಗಡೆಯ ದಾರಿ.

(ವ್ಯಸ್ತಚಿತ್ತನಾದ ರಮಾನಂದನ ಸಹಾಧ್ಯಾಯಿ ಸೌಮ್ಯನ ಪ್ರವೇಶ.)

ಸೌಮ್ಯ:— (ಮೇಲೆ ನೋಡಿ ನಿಟ್ಟುಸಿರಿಟ್ಟು) "ನಮ್ಮ ಆಯುಷ್ಮಂತನಾದ ರಮಾನಂದ ಕುಮಾರನು ಎಲ್ಲಿ ಹೋದನೋ, ಏನಾದನೋ ಏನು ಮಾಡುತ್ತಿರುವನೋ ಗೊತ್ತಾಗಲಿಲ್ಲ, ನಾನು ವಿದ್ಯಾರ್ಥಿಮಂದಿರ, ವಿದ್ಯಾಶಾಲೆ ಮೊದಲಾದೆಡೆಗಳಲ್ಲೆಲ್ಲಾ ಹುಡುಕಿ ಸಾಕಾಗಿ

ಬಂದೆನು. ಎಲ್ಲಿಯೂ ಆತನನ್ನು ಕಾಣಲಿಲ್ಲ. ಗುರುಕುಲವಾಸಕ್ಕೆ ಬಂದುದು ಮೊದಲು, ಈವರೆಗೆ ಒಂದು ದಿನವಾದರೂ ಹೊರಗೆ ಕಾಲಿಟ್ಟನೆಂಬುದು ತಿಳಿದುದಿಲ್ಲ. ಇಂದು ಈಗ ಈ ರಾತ್ರಿಯಲ್ಲಿ ಎಲ್ಲಿಗೆ ಹೋಗಿರಬೇಕು? (ಸ್ವಲ್ಪ ಹೊತ್ತು ಚಿಂತಿಸುತ್ತಿದ್ದು ಬಳಿಕ) ಇಂದು ಶಾಲೆಯಲ್ಲಿ ನಡೆದ ವಿದ್ಯಮಾನಗಳಿಂದ ಏನಾದರೂ ಖತಿಗೊಂಡು ಹೊರಟುಹೋದನೊ? ಹಾಗೆ ಹೋಗಿದ್ದರೆ ಎಲ್ಲಿಗೆ ಹೋಗಿರಬಹುದು? ಪಿತೃಸಮ್ಮುಖಕ್ಕೆ ಹೋಗುವವನಲ್ಲ; ಗುರುಗೃಹಕ್ಕೂ ಹೋಗುವವನಾಗಿಲ್ಲ; ಮತ್ತಾವ ಆಪ್ತರ ಮನೆಗಳಾದರೂ ಇಲ್ಲಿರುವುವೆಂಬುದು ತಿಳಿಯುತ್ತಿಲ್ಲ. ಈ ಕತ್ತಲೆಯಲ್ಲಿ ಇನ್ನು ಎಲ್ಲಿ ಹುಡುಕಲಿ? ಯಾರನ್ನು ಕೇಳಲಿ? [ತೆರೆಯಕಡೆ ನೋಡಿ] ಇದೋ ಗುರುಸೇವಕನಾದ ಸತ್ಯಸೇನನು ಇತ್ತಕಡೆಗೆ ಬರುತ್ತಿರುವನು. ಈತನಿಂದಾದರೂ ಕುಮಾರನ ವಿಚಾರವನ್ನು ತಿಳಿಯಬಹುದೋ? ನೋಡುವೆನು."

(ಪತ್ರಹಸ್ತನಾದ ಸತ್ಯಸೇನನ ಪ್ರವೇಶ)

ಸೌಮ್ಯ:— ಏನಯ್ಯಾ ಸತ್ಯಸೇನ!

ಸತ್ಯಸೇನ:— ಯಾರು? ಸೌಮ್ಯನೆ! ಇದೇನು ಇಷ್ಟು ಹೊತ್ತಿನಲ್ಲಿ? ಇಲ್ಲಿ ನಿಂತು ಮಾತಾಡುತ್ತಿರುವುದೇನು? ಯಾರನ್ನು ನೋಡುತ್ತಿರುವೆ?

ಸೌಮ್ಯ:— ರಮಾನಂದನನ್ನು ನಿರೀಕ್ಷಿಸುತ್ತಾ ನಿಂತಿರುವೆನು.

ಸತ್ಯ:— ರಮಾನಂದನನ್ನೇ ಏತಕ್ಕಾಗಿ?

ಸೌಮ್ಯ:— ಸುಖದು:ಖಗಳಲ್ಲಿ ಸಹಭಾಗಿಗಳಾಗಿದ್ದು, ಕಾಲೋಚಿತವಾದ ಹಿತಸೂಚನೆಗಳಿಂದ ಸಮಾಧಾನಪಡಿಸುವುದೇ ಸ್ನೇಹದ ಲಕ್ಷಣವಲ್ಲವೆ?

ಸತ್ಯ:— ರಮಾನಂದನ ವ್ಯಸ್ತತೆಗೆ ಕಾರಣವೇನು?

ಸೌಮ್ಯ:— ವಿದ್ಯಾಶಾಲೆಯಲ್ಲಿ ನಡೆದ ವಿದ್ಯಮಾನವು ನಿನಗೆ ಗೊತ್ತಿದೆಯಷ್ಟೇ?

ಸತ್ಯ:— ಗೊತ್ತು; ಆದರೆ ರಮಾನಂದನು ಹಾಗೆ ಸಹವಾಸ ದೋಷದಿಂದ ಕೆಟ್ಟುಹೋಗುವನೆಂದು ತಿಳಿದಿರಲಿಲ್ಲ.

ಸೌಮ್ಯ:— ಅಯ್ಯಾ! ಬೆಂಕಿಯನ್ನು ಇರುವೆಗಳು ಹೇಗೆ ಮುಟ್ಟಲಾರವೋ, ಹಾಗೆಯೇ ಕುಮಾರನನ್ನು ದುರ್ಗುಣ, ದುರಾಚಾರಗಳು ಮುಟ್ಟಲಾರವು.

ಸತ್ಯ:— ಹಾಗಿದ್ದರೆ ಹೀಗಾಗಲು ಕಾರಣವೇನು?

ಸೌಮ್ಯ:— ಅಯ್ಯಾ! ಕ್ಷುದ್ರಜೀವಿಗಳಾದ ಜಂಬುಕಗಳಿಂದ ಕೇಸರಿಯು ವಂಚಿಸಲ್ಪಟ್ಟಿತೆಂದು ತಿಳಿಯೆಯೇನು ?

ಸತ್ಯ:— ಅಯ್ಯಾ! ಲೋಕದಲ್ಲಿ ಮಾತ್ಸರ್ಯವೆಂಬುದು ಮಹಾಪಾಪಿಯು. ಅದು ಪರೋತ್ಕರ್ಷೆಯನ್ನು ನೋಡಿ ಸಹಿಸದೆ, ಅವರನ್ನು ಸರ್ವವಿಧದಿಂದಲೂ ಕೆಡಿಸುವ ಪ್ರಯತ್ನವನ್ನೇ ಮಾಡುವುದು. ಇದರಿಂದ ತನಗಾಗುವ ಫಲವೇನೆಂಬುದನ್ನು ಕುರಿತು ಸ್ವಲ್ಪವಾದರೂ ಚಿಂತಿಸುವುದನ್ನು—ಪಾಪ! ಅದು ಹೇಗೆ ತಿಳಿಯಬೇಕು?

ಸೌಮ್ಯ:— ಅಯ್ಯಾ! ದುರ್ಜನರ ನಡತೆಯೇ ಹೀಗಲ್ಲವೆ?

ವೃತ್ತ॥ ವ್ರತಸ್ಥನಲ್ಲಿ ದಂಭಮಂ, ಸುಬುದ್ಧಿಯಲ್ಲಿ ಜಾಡ್ಯಮಂ ।
ಹಿತೋಕ್ತಿಯಲ್ಲಿ ದೈನ್ಯಮಂ, ಶುಚಿತ್ವದಲ್ಲಿ ದೋಷಮಂ ॥
ಸ್ವತಂತ್ರನಲ್ಲಿ ಗರ್ವಮಂ, ಪ್ರತಾಪಿಯಲ್ಲಿ ತೈಕ್ಷ್ಣ್ಯಮಂ ।
ಕುತರ್ಕರಿಂತು ದೋಷಮಂ, ಗುಣಾಢ್ಯರಲ್ಲಿ ತೋರುವರ್ ॥

(ಛಂದ:ಸಾರ)

ಸತ್ಯ:— ಆದುದರಿಂದಲೇ ಅಂತಹರ ಸಹವಾಸವು ಸರ್ವಥಾ ಕೂಡದೆಂದು ಬಲ್ಲವರು ಹೀಗೆ ತಿರಸ್ಕರಿಸುವರು.

ವೃತ್ತ॥ ಹಳುವದ ಬೆಟ್ಟದ ದುರ್ಗಮ ಮಾರ್ಗ ।
ಸ್ಥಳದಿ ವನೇಚರರಿಂದೆಡೆಯಾಟಂ ॥
ಒಳಿತು, ಸುರೇಂದ್ರನಿವಾಸದೊಳಿದ್ದುರ್ ।
ತಿಳಿದಿರು ಮೂರ್ಖರ ಸಂಗತಿಬೇಡೈ ॥ (ಛಂದ:ಸಾರ)

ಸೌಮ್ಯ:— ಅದಕ್ಕೆಂದೇ ನಾವೂ ಹಲವು ಬಗೆಯಿಂದ ಮೂರ್ಖರ ಸಂಗತಿಗೆ ಹೋಗಬೇಡವೆಂದು ತಡೆದೆವು. ಆದರೂ ಕುಮಾರನು ಕೇಳದೆ ಈ ಅಪವಾದಧಾನಲಕ್ಕೆ ಗುರಿಯಾದನು.

ಸತ್ಯ:— ಅಯ್ಯೋ ! ಕುಮಾರನು ಈ ಅಪವಾದದಿಂದ ಬಿಡುಗಡೆಯಾಗುವ ಬಗೆ ಹೇಗೆ?

ಸೌಮ್ಯ:— ಅಯ್ಯೋ! ಅಪವಾದವು ಹಾಗಿರಲಿ: ಆಪತ್ತಿಗೆ ಗುರಿಯಾಗದಿದ್ದರೆ ಸಾಕು.

ಸತ್ಯ:— (ಕುತೂಹಲದಿಂದ) ಅದೇನು ಅಪವಾದವೂ ಉಂಟೊ !

ಸೌಮ್ಯ:— ವೃಶ್ಚಿಕ ಸರ್ಪಗಳನ್ನು ರಕ್ಷಿಸಬೇಕೆಂದು ಪ್ರಯತ್ನಿಸುವವನಿಗೆ ಯಾವ ಪ್ರತಿಫಲವುಂಟೋ, ಅದೇ ಫಲವೇ ನಮ್ಮ ರಮಾನಂದನಿಗೂ ಆದೀತೆಂಬ ಶಂಕೆ ! ಏಕೆಂದರೆ— ಆ ದುರ್ಮಾರ್ಗಿಗಳ ಸ್ವಭಾವವೇ ಹಾಗೆ ಹೇಳುತ್ತಿದೆ.

ವೃತ್ತ॥ ಕಾರುಣ್ಯಾಭಾವಂ ಪರಸತಿಯರ ಮೇಲಾಸೆ ।
ಪಾರುಷ್ಯಂ ನಿತ್ಯಂ ಸ್ವಜನ ಸುಜನರೊಳ್ ವೈರಂ ॥
ಕ್ರೂರ ವ್ಯಾಪಾರಂಗಳ ಜಗಳಗಳ ನಿಮಿತ್ತಂಗಳ್ ।
ಸೇರಿರ್ಕುಂ ಮೈಯೊಳ್ ಜನನದೊಳೆ ದುರಾತ್ಮರ್ಗೆ ॥ (ಛಂದ:ಸಾರ)

ಸತ್ಯ:— ಅಯ್ಯೋ ! ಹೊತ್ತು ಮೀರುತ್ತಿದೆ. ನಾನು ಈಗಲೇ ಶ್ರೀಮಂತರ ಬಳಿಗೆ ಹೋಗಲು ಗುರುಪ್ರೇರಿತನಾಗಿ ಬಂದಿದ್ದೇನೆ.

ಸೌಮ್ಯ:— ಅದಾವ ಕೆಲಸಕ್ಕಾಗಿ ?

ಸತ್ಯ:— ನಾಳೆಯೇ ನಡೆಯಬೇಕಾಗಿದ್ದ ಪರೀಕ್ಷಾ ಕೂಟವು ನಿಲ್ಲಿಸಲ್ಪಟ್ಟಿತೆಂದು ತಿಳಿಸಬೇಕಂತೆ.

ಸೌಮ್ಯ:— ಏನನ್ನಾದರೂ ಮಾಡು. ಆದರೆ ಒಂದುಮಾತು. ನೀನು ಬರುವಾಗ ರಮಾನಂದನನ್ನು ನೋಡಿದ್ದೆಯಾ ?

ಸತ್ಯ:— ನಿಜ. ಮರತಿದ್ದೆನು, ಬಾಲೋದ್ಯಾನದ ಮಾವಿನ ಮರದಡಿಯಲ್ಲಿ ನಿಂತಿದ್ದುದನ್ನು ಕಂಡುಬಂದೆನು.

ಸೌಮ್ಯ:—ಏನು ಮಾಡುತ್ತಿದ್ದನು ? ಬಳಿಯಲ್ಲಿ ಮತ್ತಾರಿದ್ದರು?

ಸತ್ಯ:—ತಲೆವಾಗಿ ನಿಂತಿದ್ದನು. ಮುಂದೆ ಯಾರೋ ಅವಕುಂಠನವತಿಯೊಬ್ಬಳು ನಿಂತಿದ್ದಂತೆ ತೋರಿತು. ಆದರೆ ನಾನು ಚೆನ್ನಾಗಿ ನೋಡಲಿಲ್ಲ. ಅಲ್ಲದೆ, ನನ್ನನ್ನು ಕಂಡು ಆ ಸ್ತ್ರೀವ್ಯಕ್ತಿಯು ಮರದ ಹಿಂದೆ ಅಡಗಿಕೊಂಡಿತು. ರಮಾನಂದನೂ ಅಲ್ಲಿಂದ ಕಲ್ಲು ಜಗತಿಯ ಬಳಿಗೆ ಹೊರಟುಹೋದನು.

ಸೌಮ್ಯ:—ಹಾಗಾದರೆ ನೀನಿನ್ನು ಹೊರಡು. ನಾನು ರಮಾನಂದನಲ್ಲಿಗೆ ಹೋಗುವೆನು.

ಸತ್ಯ:—ಅಯ್ಯಾ! ನೀನೇ ಸನ್ಮಿತ್ರನು: ಸ್ವೈತ್ರೀ ಲಕ್ಷಣವು ನಿನ್ನಲ್ಲಿಯೇ ಇರುವುದು. ಭಗವಂತನು ನಿನಗೆ ಸಹಾಯಕನಾಗಿರಲಿ

(ಹೊರಟುಹೋಗುವನು)

(ಸೌಮ್ಯನು ಗಮನವನ್ನಭಿನಯಿಸಿ ಮುಂದೆ ನೋಡಿ) ಇದೇ ನಂದನವು. ಮತ್ತೆ ನೋಡಿ. (ಸಂಭ್ರಮದಿಂದ)—'ಕುಮಾರನು ಇಲ್ಲಿಯೇ ಪರವಶನಾಗಿ ಕುಳಿತಿರುವನು.' (ಎಂದು ಮುಂದೆ ಬಂದು ನಿಲ್ಲುವನು)

ಸ್ಥಾನ ೨:—ಬಾಲೋದ್ಯಾನದ ತಳಿರುಮಂಟಪ.

(ಕಲ್ಲು ಜಗಲಿಯಮೇಲೆ ರಮಾನಂದನು ತಲೆವಾಗಿ ಕುಳಿತಿರುವನು)

ಸೌಮ್ಯ:—(ರಮಾನಂದನನ್ನು ನೋಡಿ ಮರುಕದಿಂದ) ಆಹಾ! ಕರ್ಮಫಲವೇ ಬಲವತ್ತರವು. ಕರ್ಮಫಲದ ಮುಂದೆ ರೂಪ, ಗುಣ, ಸಂಪದ ವಿದ್ಯಾಗೌರವಗಳಾವುವೂ ಕಾರ್ಯಕಾರಿಗಳಾಗಲಾರವು. ಹಾಗಿಲ್ಲದಿದ್ದರೆ, ಈ ಸಕಲ ಗುಣೋಪೇತನಾದ ನಮ್ಮ ರಮಾನಂದನು ಹೀಗೆ ಅಪಮಾನವನ್ನು ಹೊಂದುತ್ತಿರಲಿಲ್ಲ. ನಿಜ! ಆ ಕರ್ಮಫಲದ ಬಲಾಧಿಕ್ಯಕ್ಕೆಂದೇ ಈ ನೀತಿ ಹುಟ್ಟಿರಬೇಕು.—

ವೃತ್ತ॥ ಪೋಲುಂ ವಿದ್ಯಾಬುದ್ಧಿ ಕುಲಂ ಭೂಪತಿ ಸೇವೆ ।
ಶೀಲಂ ರೂಪಂ ಬೀರುವುದಿಲ್ಲೈ ಫಲವನ್ನು ।

ಮೂಲಂ ಭಾಗ್ಯಂ ಪೂರ್ವದಿತಾಂ ಮಾಡಿದ ಕರ್ಮಂ |
ಕಾಲಕ್ಕಕ್ಕುಂ ಸತ್ಫಲಿತಂ ಭೂರುಹದಂತೇ ||(ಛಂದಃಸಾರ)

( ಕೆಲವು ಹೊತ್ತು ಚಿಂತಿಸುತ್ತಿದ್ದು ಬಳಿಕ ರಮಾನಂದನ ಕೈಹಿಡಿದು )—
“ ಆಯುಷ್ಮಂತನಾದ ರಮಾನಂದನೆ ! ಇಲ್ಲಿ ಕುಳಿತೇನು ಮಾಡುತ್ತಿರುವೆ? ”

ರಮಾ:—( ಕಣ್ದೆರೆದು ನೋಡಿ ಕುತೂಹಲದಿಂದ ) ‘ ಸೌಮ್ಯನೇ ! ಸಕಾಲದಲ್ಲಿ ಬಂದೆ, ಬಾ ಕುಳಿತುಕೊ.’

ಸೌಮ್ಯ:—( ರಮಾನಂದನ ಬಳಿಯಲ್ಲಿ ಕುಳಿತು ) ‘ ಕುಮಾರನೆ ! ಇಲ್ಲೇನು ಮಾಡುವೆ? ’

ರಮಾ:—ಮನಸ್ಸು ವಿವಿಧ ವಿಚಾರಗಳಿಂದ ವ್ಯಸ್ತವಾಗಿದ್ದಿತು. ವಿಶ್ರಾಂತಿಗೆಂದು ಬಂದು ಇಲ್ಲಿ ಕುಳಿತೆನು; ನೀನೇಕೆ ಬಂದೆ?

ಸೌಮ್ಯ:—ನಾನು ಬರಲಿಲ್ಲ. ನಿನ್ನಲ್ಲಿರುವ ಆಕರ್ಷಣಾಯಂತ್ರವೇ ಎಳೆತಂದಿದೆ.

ರಮಾ:—(ನಿಟ್ಟುಸಿರಿಟ್ಟು) “ಆಕರ್ಷಣಾಯಂತ್ರವು ನನ್ನಲ್ಲಿದ್ದರೆ, ನಾನು ಹೀಗೆ ಅಹಿತನಾಗಿ ತೊಳರುತ್ತಿರಲಿಲ್ಲ.”

ಸೌಮ್ಯ:—ಕುಮಾರ! ಕೋಪಿಸಬೇಡ. ಬೇವಿನ ಕಹಿಯನ್ನು ಹೋಗಲಾಡಿಸುವೆನೆಂಬಂತೆ, ವಿವೇಕಶೂನ್ಯರಾದ ಮೂರ್ಖರನ್ನು ಸನ್ಮಾರ್ಗಕ್ಕೆ ತರಬೇಕೆಂದು ಪ್ರಯತ್ನಿಸಿದರೆ ಸಾಧ್ಯವೇ?

ರಮಾ:—ಅಯ್ಯ ! ಕುಲಕ್ಕೆ ರಂಜನನೂ, ಮಾತಾಪಿತೃಗಳ ಆನಂದಕ್ಕೆ ಉಕ್ಕಂದಸ್ವರೂಪನೂ ಆದವನೇ ಸತ್ಪುತ್ರನಲ್ಲವೆ ?

ಸೌಮ್ಯ:—ನಿಜ ! ಹಾಗೆ ಸತ್ಪುರುಷನಾಗಬೇಕೆಂಬುವವನು ಮೂರ್ಖರ ಸಹವಾಸಕ್ಕೆ ಹೋಗಬಾರದು.

ರಮಾ:—ಸನ್ಮಿತ್ರನೇ! ಸತ್ಯವೂ ಪಥ್ಯವೂ ಯಾರಿಗೂ ಎಂದಿಗೂ ವ್ಯಥೆಯನ್ನುಂಟು ಮಾಡುವುದಿಲ್ಲ. ಶೀಲವೂ ಸತ್ಯವೂ ನಮ್ಮಲ್ಲಿ ಸ್ಥಿರವಾಗಿದ್ದರೆ, ದುರ್ಜನರ ಕಿರುಕುಳದಿಂದ ನಮಗೆ ಕೀರ್ತಿಯೂ

ಮನೋದಾರ್ಢ್ಯವೂ ಮತ್ತೂ ಹೆಚ್ಚುವುವಲ್ಲದೆ ಬೇರಿಲ್ಲ.

ಸೌಮ್ಯ:—ಹಾಗಿದ್ದರೆ, ನೀನೇಕೆ ಹೀಗೆ ಚಿಂತಾಪರವಶನಾಗಿ ಕುಳಿತಿರಬೇಕು?

ರಮಾ:—ಏಕೆಂಬುದನ್ನು ನೀನೂ ತಿಳಿದೇ ಇರಬಹುದಲ್ಲವೆ ?

ಸೌಮ್ಯ:—ಏನದು ? ಶಾಲೆಯಲ್ಲಿ ನಡೆದ ವಿದ್ಯಮಾನಗಳಿಂದ ಹೀಗಾಗಿರುತ್ತೀಯಲ್ಲವೇ?

ರಮಾ:—ನಿಜ! ಅದುದರಿಂದಲೇ ಹೀಗಾಗಿರುವೆನು. ಆದರೆ ನನ್ನ ದೇಹ ಸೌಖ್ಯವನ್ನು ಕುರಿತ ಚಿಂತೆಯೊಂದು ಮಾತ್ರ ತಿಳಿಯಬೇಡ.

ಸೌಮ:—(ವಿಸ್ಮಿತನಾಗಿ) "ಮತ್ತಾವುದನ್ನು ಕುರಿತು ಚಿಂತೆ?"

ರಮಾ:— ಮಾತ್ಸರ್ಯಪರವಶತೆಯಿಂದ ನನ್ನ ಒಬ್ಬನನ್ನು ಕೊಲ್ಲಬೇಕೆಂದು ಹಲವು ಬಗೆಯ ಮಾಟಗಳನ್ನು ಹೂಡಿರುವ ರವಿವರ್ಮಾದಿಗಳಿಗೆ, ಮುಂದೆ ಒದಗಬಹುದಾಗಿರುವ ಅಲಂಘ್ಯ ಫಲಗಳನ್ನು ಕುರಿತು ಹೀಗೆ ವ್ಯಾಕುಲಿತನಾಗಿರುವೆನು.

ಸೌಮ್ಯ:—ಇದಕ್ಕೆ ನಿನಗೇಕೆ ವ್ಯಾಕುಲವು?–'ಮಾಡಿದ್ದುಣ್ಣೊ ಮಹಾರಾಯ' ಎಂದಿದೆಯಲ್ಲವೆ ? ಅಟ್ಟಿದನ್ನು ಚೆನ್ನಾಗಿ ಉಂಡು ತಿಂದು ತೇಗಲಿ; ಮತ್ತು ಹೇಗಾದರೂ ನರಳಲಿ.

ರಮಾ:—ಮಿತ್ರನೇ! ಹಾಗಲ್ಲ. ಕೇಳು—'ಪರರ ಕೇಡು ತನ್ನ ಕೇಡು' ಎಂಬ ನ್ಯಾಯಕ್ಕನುಸಾರವಾಗಿ,—

ಕಂದ|| "ಮನದೊಳಗನ್ಯರಿಗಹಿತವ|
ನೆನೆದರೆ ತಾಂ ಮುನ್ನ ಕೆಡುವ ತನಗಿಚ್ಚೆದ್ದಾ
ಮನೆಮುನ್ನ ಬೆಂದು ಮಿಕ್ಕಿನ |
ಮನೆಯಂ ಸುಡುವಂತೆ ಕದೆಗೆ ಸುಜನೋತ್ತಂಸಾ ||

ಎಂದು ನೀತಿಯೂ ಹೇಳುತ್ತಿರುವುದು.

ಸೌಮ್ಯ:—ಅಹುದಷ್ಟೇ. ಅದಕ್ಕೆಂದೇ ಅಂತಹರ ಗೊಡವೆಗೆ

ಹೋಗಬಾರದೆಂದು ಬಲ್ಲವರು ಹೀಗೆ ಹೇಳುತ್ತಿರುವರು.—

ಕಂದ|| "ಸಲ್ಲದ ಬವರಮುಮಂ ತನ |
ಗಲ್ಲದ ನಂಟರು ಮನಿಚ್ಛೆಯರಿಯದ ಸತಿಯುಂ |
ಹೊಲ್ಲಹವ ನುಡಿವ ಮನುಜರ |
ಮೆಲ್ಲನೆ ಬಿಡುವುದು ವಿವೇಕ ಚಿಂತಾರತ್ನಾ ||

ರಮಾ:— ನಿಜ! ಆದರೂ ಕೇಳು. ಸ್ವಾರ್ಥಸುಖವನ್ನೇ ದೊಡ್ಡದೆಂದು ಭಾವಿಸಿ ತನ್ನ ಸುತ್ತುಮುತ್ತಲಿರುವ ಬಳಿಯುವರನ್ನು ಉನ್ನತಿಗೆ ತರಲು ಪ್ರಯತ್ನಿಸದೆ, ತನ್ನ ಸುಖದದಾರಿಯೊಂದನ್ನೇ ನೋಡಿಕೊಳ್ಳುವುದು ಸತ್ಪುರುಷರ ಲಕ್ಷಣವಲ್ಲ. ದುಸ್ಸಹವಾಸದಲ್ಲಿ ಸೇರಿ, ಯುಕ್ತಾಯುಕ್ತ ವಿಚಾರವನ್ನು ಬಿಟ್ಟು, ಮದಾಂಧತೆಯಿಂದ ದುರಾಚಾರದಲ್ಲಿ ಬಿದ್ದು ಕೆಟ್ಟುಹೋಗುತ್ತಿರುವ ಜಡರನ್ನು ಸರ್ವವಿಧದಿಂದಲೂ ನೀತಿ ಮಾರ್ಗಕ್ಕೆ ಕರೆತಂದು, ದೇಶಕ್ಕೆ ಹಿತವಾಗುವಂತೆ ಮಾಡಬೇಕಾದ ತಮ್ಮ ಕರ್ತವ್ಯದಲ್ಲಿ ನಿರತರಾಗಿರುವುದೇ ಮಹನೀಯರ ಶೀಲವು. ಅಂತಹರಿಗೆ ಇವರು ತಮ್ಮವರು, ಇವರು ಪರರು, ಇವರು ದೀನರು, ಇವರು ಸಂಪನ್ನರೆಂಬ ಪಕ್ಷಪಾತ ಬುದ್ಧಿಯಾಗಲೀ, ಇತರ ಕಷ್ಟನಷ್ಟಗಳ ಭಯವಾಗಲೀ ಇರುವುದಿಲ್ಲ. ಇದಕ್ಕೆ ನಿದರ್ಶನವಾಗಿ ಲೋಕಾನುಭವಜ್ಞರ ಹಿತೋಪದೇಶವೂ ಹೇಳುವುದು.--

ವೃತ್ತ|| " ಪರರಿವರ್ ಸ್ವಜನರ್ಗೆ ಇವರೆಂದು |
ಸ್ಮರಿಸುವರ್ ಪರಿಕಿಸಲ್ ಮತಿಮಂದರ್ ||
ಅರಿಯರೀ ಪರಿಗಳಂ ಸದುದಾರರ್ |
ಧರಣಿಯೊಳ್ ಬಳಗವೈ ಸುಜನರ್ಗೆ || " (ಛಂದಃಸಾರ)

ಸೌಮ್ಯ:— ಸಾಧು! ಸನ್ಮಿತ್ರಳೇ! ನಿನ್ನ ಸತ್ಸಂಕಲ್ಪವು ಪರಮ ಸಾಧು. ಆಗಲಿ; ಇಂದಿನ ವಿಚಾರವು ಇಷ್ಟಕ್ಕೆ ನಿಂತಿರಲಿ. ಹೊತ್ತು ಮೀರಿಹೋಗಿದೆ. ಈ ನಟ್ಟಿರುಳಲ್ಲಿ ಇಲ್ಲಿ ಕುಳಿತಿರುವದರಿಂದ ಗುರುಗಳ ಸಂದೇಹವು ಮತ್ತೂ ಹೆಚ್ಚಬಹುದಾಗಿದೆ.

ರಮಾ:— ( ಬೆದರಿನೋಡುತ್ತ ) ಏನು ಏನು ! ಈಗ ನಟ್ಟಿರುಳೆ ? ಹಾಗಿದ್ದರೆ ನಡೆ ಹೋಗುವ.

ಸೌಮ್ಯ:—ಪ್ರಿಯ ಮಿತ್ರನೇ! ಮತ್ತೊಂದು ಮಾತು.

ರಮಾ:—ಏನು? ಹೇಳಲು ತಡೆಯೇಕೆ ?

ಸೌಮ್ಯ:—ಮತ್ತೇನೂ ಇಲ್ಲ. ನೀನು ಇಲ್ಲಿ ಮತ್ತಾರ ಜತೆಯಲ್ಲಾದರೂ ಮಾತನಾಡುತ್ತಿದ್ದೆಯೇನು!

ರಮಾ:—ನಾನು ಇಲ್ಲಿಗೆ ಬಂದು ಸ್ವಲ್ಪಹೊತ್ತಿನಲ್ಲಿಯೇ ಈ ಪಟ್ಟಣದಲ್ಲಿ ಮಧುಕರಿಯೆಂಬವಳೊಬ್ಬಳಿರುವಳೆಂದೂ, ಅವಳಿಂದ ಕಳುಹಲ್ಪಟ್ಟು ಬಂದಿರುವ ದಾಸಿಯೇ ತಾನೆಂದೂ ಹೇಳಿಕೊಂಡು ಬಂದಿದ್ದ ಸ್ತ್ರೀಯೊಬ್ಬಳು, ಆತುರದಿಂದ ಕೂಗಿಕೊಂಡುದರ ಮೇಲೆ, ನಾನು ಅದೇನೆಂದು ಹೋಗಿ ಕೇಳಿದೆನು. ಅವಳದಕ್ಕೆ ಏನೇನನ್ನೋ ಹೇಳಿದಳು ನಾನವನ್ನು ಕೇಳಲಾರದೆ ತಿರಸ್ಕರಿಸಿ ಹೊರಟುಬಂದೆನು. ಏಕೆ ಕೇಳಿದೆ? ಏನಾಯ್ತು?

ಸೌಮ್ಯ:—ಸತ್ಯಸೇನನು ಯಾವಳೋ ಹೆಂಗಸಿನೊಡನೆ ಮಾತನಾಡುತ್ತಿದ್ದನೆಂದು ಹೇಳಿದುದರಿಂದ ಹಾಗೆ ಕೇಳಿದೆನು. ಅಷ್ಟೆ. (ತೆರೆಯಲ್ಲಿ) "ಕುಮಾರ, ರಮಾನಂದ! ರಮಾನಂದ!! ಎಲ್ಲಿರುವೆ !"

ಸೌಮ್ಯ:—(ಗಾಬರಿಯಿಂದ) ಇದೇನಿದು? ರಮಾನಂದ! ಇದೇನು? ಯುವಾನನು ಕೂಗುತ್ತ ಬರುವಂತಿದೆ.

ರಮಾನಂದ:—(ತೆರೆಯುಕಪೆಗೆ ತಿರುಗಿ ಗಟ್ಟಿಯಾಗಿ) ಇಲ್ಲಿರುವೆನು, ಇಲ್ಲಿರುವೆನು.

(ಯುವಾನನು ಬಂದು, ಮುಂದೆ ಬೆರಗಾಗಿ ನಿಲ್ಲುವನು.)

ರಮಾ:—( ಯುವಾನನ ಕೈಹಿಡಿದು ಬಳಿಯಲ್ಲಿ ಕುಳ್ಳಿರಿಸಿಕೊಂಡು ) ಯುವಾನ್! ಇದೇಕೆ? ಹೀಗಾಗಿರುವೆ? ಸಮಾಚಾರವೇನು?

ಯುವಾನ:— (ನಿಟ್ಟುಸಿರಿಟ್ಟು) ಭಗವಂತ ! ಕುಮಾರನನ್ನು ಕಾಪಾಡಿ, ನಮ್ಮೆಲ್ಲರನ್ನೂ ಉದ್ಧರಿಸು.

ಸೌಮ್ಯ:—(ಆತುರದಿಂದ) ಯುವರಾಜನೇ ಏನಾಗಿದೆ ? ಇದೇಕೆ ಹೀಗೆ ಆರ್ತನಾಗಿರುತ್ತೀಯೆ? ಬೇಗ ಹೇಳು.

ಯುವರಾಜ:—ಕುಮಾರನಿಗೂ ಮತ್ತು ನಮಗೂ ಗ್ರಹಚಾರವು ಕ್ರೂರವಾಗಿ ತಿರುಗಿದೆ. ಪ್ರತಿಯೊಂದು ವಿಚಾರವೂ ವಿಷಮವಾಗಿಯೇ ಪರಿಣಮಿಸಿರುತ್ತದೆ. ಸಾಲದುದಕ್ಕೆ ಈ ನಟ್ಟಿರುಳಲ್ಲಿ ನೀವು ಇಲ್ಲಿರುವುದಂತೂ ಹೇಳಿ ಕೇಳುವಂತೆಯೇ ಇಲ್ಲ.

ರಮಾ:—(ಭಯಚಕಿತನಾಗಿ) ಭಗವತ್ಸಹಾಯವಿದ್ದರೆ, ಎಲ್ಲವೂ ಸುಖರೂಪವಾಗಿಯೇ ತಿರುಗುವುವು. ಅದಿಲ್ಲವಾದರೆ ಯಾರು ಹೇಗಿದ್ದರೂ ಕಷ್ಟವು ತಪ್ಪಿದುದಲ್ಲ. ಅದಿರಲಿ; ವಿಚಾರವೇನೆಂಬುದನ್ನು ಸ್ಪಷ್ಟಪಡಿಸು.

ಯುವರಾಜ:—(ಕಂಪಿತಸ್ವರದಿಂದ) ಕುಮಾರ ! ಏನು ಹೇಳಲಿ ? ನಾನು ನಾಳೆಯ ಪಾಠವನ್ನು ಮನನಮಾಡಿಕೊಳ್ಳುತ್ತ ನನ್ನ ಕಿರುಮನೆಯಲ್ಲಿ ಒಳಗೆ ಕುಳಿತಿದ್ದೆನು. ಗುರುಗಳು ನಳ, ಕಳಿಂಗ, ರವಿವರ್ಮರೊಡನೆ ಅಲ್ಲಿಗೆ ಬಂದು ನನ್ನನ್ನು ಕೂಗಿದರು. ನಾನು ಸಂಗತಿಯೇನೆಂಬುದನ್ನು ತಿಳಿಯದೆ, ಭಯಕೌತುಕದಿಂದ ಗುರುಗಳ ಮುಂದೆ ಬಂದು ನಿಂತೆನು.

ರಮಾ:—(ಆತುರದಿಂದ) ಆಮೇಲಾಮೇಲೆ?

ಯುವರಾಜ:— ಆ ಬಳಿಕ, ಅವರು ನನ್ನನ್ನು ಕುರಿತು--"ರಮಾನಂದನೆಲ್ಲಿ ಹೋದನು? ಉಳಿದವರೆಲ್ಲಿರುವರು? " ಎಂದು ಕೇಳಿದರು. ನಾನು ಯಾರು ಎಲ್ಲಿ ಹೋಗಿರುವರೋ ನನಗೆ ತಿಳಿಯದೆಂದು ಮೆಲ್ಲನೆ ಹೇಳಿದೆನು. ಗುರುಗಳು ಮತ್ತೂ ಆಗ್ರಹದಿಂದ ನನ್ನನ್ನೂ ಹಿಂದೆಯೇ ಬರುವಂತೆ ಹೇಳಿ, ರವಿವರ್ಮಾದಿಗಳೊಡನೆ 'ನಿನ್ನ ಕಿರುಮನೆಯ ಕಡೆಗೆ ನಡೆದರು. ನಾನೂ ಕೂಡ ಮರುಮಾತಿಲ್ಲದೆ ಅವರ ಹಿಂದೆಯೇ ಹೋದೆನು ?

ರಮಾ:—ಆ ಬಳಿಕ?

ಯುವಾನ:—ಆ ಬಳಿಕ ನಿನ್ನ ಕಿರುಮನೆಗೆ ಹಾಕಿದ್ದ ಬೀಗವನ್ನು ಒಡೆದುಹಾಕಿ ಕಿರುಮನೆಯೊಳಹೊಕ್ಕು ನಿನ್ನ ಪುಸ್ತಕ, ಪೆಟ್ಟಿಗೆ, ಬಟ್ಟೆ, ಹಾಸಿಗೆ ಮೊದಲಾದುವನ್ನು ಕ್ರಮಕ್ರಮವಾಗಿ ತೆಗೆಯಿಸಿ ನೋಡುತ್ತ ಬಂದರು.

ರಮಾ:—ಏನಿದ್ದಿತು ? ಏನೇನು ಕಂಡುಬಂದಿತು ? ಯಾವಾವುದು ಸಿಕ್ಕಿತು?

ಯುವಾನ:—(ಒಣಗಿದ ತುಟಿಯನ್ನು ನಾಲಿಗೆಯಿಂದ ಸವರಿಕೊಳ್ಳುತ್ತ) ನಾನೇನನ್ನಲಿ? ರಮಾನಂದ! ನಿನ್ನ ಹಾಸಗೆಯ ಕೆಳಗೆ ಒಬ್ಬ ಹೆಂಗಸಿನ ಭಾವಚಿತ್ರವೂ, ಪುಸ್ತಕದೊಳಗೆ ಮತ್ತು ನಿನ್ನ .ಕೈಪೆಟ್ಟಿಗೆಗಳೊಳಗೆ ಕೆಲವು ಕಾಗದಗಳೂ ಸಿಕ್ಕಿದುವು. ಅಲ್ಲದೆ ನಿನ್ನ ಹಾಸಿಗೆಯ ಹಿಂದಿರುವ ಪೆಟ್ಟಿಗೆಯಲ್ಲಿ ಕೆಲವು ಸುಂಗಧದ ಸೀಸೆಗಳೂ ಇದ್ದುವು.

ರಮಾ:—ಇದೇನೋ ಐಂದ್ರಜಾಲವೇ ಸರಿ. ದೇವರೇ ನೋಡಿಕೊಳ್ಳಲಿ. ಮುಂದೆ ಹೇಳು.

ಯುವಾನ:—ಆ ಮೇಲೆ ಗುರುಗಳು ಅವೆಲ್ಲವನ್ನೂ ತೆಗೆದು ತಮ್ಮ ಅಂಗಿಯ ಕಿಸೆಗೆ ಸೇರಿಸಿಟ್ಟು, ಅವರನ್ನು ಕುರಿತು-"ಸರಿ. ಈಗಲೀಗ ಸಂದೇಹವು ಅರೆಪಾಲು ಕಳೆಯಲ್ಪಟ್ಟಿತು. ಆಗಲಿ, ಈ ಒಳಸಂಚು ಎಷ್ಟು ದಿನಗಳಿಂದ ನಡೆಯುತ್ತಿದ್ದುವು ಗೊತ್ತುಂಟೋ ? " ಎಂದು ಕೇಳಿದರು. ಕಳಿಂಗನು-"ಅದೆಷ್ಟು ದಿನಗಳಿಂದ ನಡೆಯುತ್ತಿದ್ದುವೋ ಹೇಳಲಾರೆವು. ಆದರೆ ಈಗ ಒಂದೆರಡು ವಾರಗಳ ಹಿಂದೆ ನಾವೆಲ್ಲರೂ ಮಾತನಾಡುತ್ತಿರುವಾಗಲೇ, ರಮಾನಂದನೊಬ್ಬನೇ ಅಲಂಕೃತನಾಗಿ ಠೀವಿಯಿಂದ ಮಂದಿರವನ್ನು ಬಿಟ್ಟು ಹೊರಹೊರಟನು. ಅದನ್ನು ನೋಡಿದ ನಾವು ಅದೆಲ್ಲಿಗೆ ಹೋಗುವನೋ ಪರೀಕ್ಷಿಸಬೇಕೆಂದು ಹಿಂದೆ ಹೊರಟೆವು. ಆತನು ಸ್ವಲ್ಪದೂರ ಹೋಗಿ, ಒಂದು ಸಂದಿಬೀದಿಯಲ್ಲಿ ನಮ್ಮ ಕಣ್ಣಿಗೆ ಸಿಕ್ಕದಂತೆ ಮರೆಯಾಗಿ ಹೊರಟು ಹೋದನು. ಅಂದಿನಿಂದ ಪ್ರತಿದಿನವೂ ರಾತ್ರಿಯ ವೇಳೆಯಲ್ಲಿ ನಾವು

ಇಲ್ಲಿ ಆತನಿರುವುದನ್ನು ಕಂಡುದಿಲ್ಲ” ಎಂದರು.

ಸೌಮ್ಯ:—(ಹಲ್ಲಡಿಯುತ್ತ ರೋಷದಿಂದ ನೆಲವನ್ನು ನೋಡ್ಡಿ ಪಾಪಿ! ಚಂಡಾಲ!! ಅಸಂಬದ್ಧಪ್ರಲಾಪಿ!!! ನಿನ್ನ ನಾಲಿಗೆ ಇನ್ನೂ ಸೇದಲಿಲ್ಲವೇಕೆ? ಹೀಗೆಲ್ಲಾ ಅಪಲಪಿಸಿ ನೀನು ಹೊಂದುವುದೇನೆಂದು ತಿಳಿದಿರುವೆ!

ರಮಾ:—( ಶಂಕಾತಂಕದಿಂದ ) ಸೌಮ್ಯನೆ ! ನನ್ನಾಣೆಯಿಟ್ಟು ಕೇಳುವೆನು. ಸುಮ್ಮನಿರು. ಅವರನ್ನೇಕೆ ಬಯ್ಯುವೆ? ನ್ಯಾಯಾನ್ಯಾಯ ವಿಧಾಯಕನಾದ ಭಗವಂತನಿಲ್ಲವೆ ? ಚಿತ್ರಗುಪ್ತನಂತೆ ನಮ್ಮ ಪ್ರತಿಯೊಂದು ಕಾರ್ಯಕಲಾಪವನ್ನೂ ಗುರುತುಮಾಡಿಟ್ಟಿರುವ ಆತನೇ ನಮ್ಮ ಕಡೆಯ ಸಹಾಯಕನಾಗಿಲ್ಲವೆ? ಆಗಲಿ, ಆತನ ಸಂತೋಷವಿದ್ದಂತೆ ನಡೆಯಲಿ. ನಾನು ಮಾತ್ರ ನಮ್ಮ ತಾಯಿತಂದೆಗಳು ಹೇಳಿರುವ ಮಾತನ್ನು ಮೀರಿ, ಗುರುಗಳಲ್ಲಿಯೂ ರವಿವರ್ಮಾದಿಗಳಲ್ಲಿಯೂ ವಿರೋಧವಾಗಿ ನಡೆಯಲಾರೆನು. ಇದರ ಮೇಲೆ ದೇವರು ಮಾಡಿದುದನ್ನು ಅನುಭವಿಸಲು ಸಿದ್ಧನಾಗಿಯೇ ಇರುವೆನು. ಮತ್ತೇನು ?

ಯುವಾನ:— ಕಳಿಂಗನ ಮಾತನ್ನು ಕೇಳಿ, ಗುರುಗಳು ಖತಿಯಿಂದ—“ಭಗವಂತ! ನೀನೆಷ್ಟು ನಿರ್ದಯನು? ಸಾಧುವರ್ಯನಾದ ಶ್ರೀಮಂತನಿಗೆ ಅದೆಂತಹ ಮನೋವ್ಯಾಕುಲವನ್ನುಂಟುಮಾಡಿರುತ್ತೀಯೆ? ಇದೇಕೆ ಹೀಗೆ ಮಾಡಿದೆ?” ಎಂದು ಹೇಳಿಹೇಳುತ್ತ ವಿಕೃತ ಸ್ವರದಿಂದ—“ಎಲ್ಲಿ, ಹೋಗಿರಿ; ಈಗಲೇ ಬುದ್ಧಿಹೀನನಾದ ರಮಾನಂದನನ್ನು ಎಲ್ಲಿದ್ದರೂ ನೋಡಿ ಎಳೆದುಕೊಂಡು ಬನ್ನಿರಿ. ಆತನ ಅಪರಾಧಗಳನ್ನು ಸಪ್ರಮಾಣವಾಗಿ ತೋರಿಸಿ ವಿಚಾರಿಸುವೆನು” ಎಂದು ಕೂಗಿದರು. ಆ ಕೂಡಲೇ ರವಿವರ್ಮನು ಮೆಲ್ಲನೆ—“ಗುರುದೇವ! ಕ್ಷಮಿಸಬೇಕು. ರಮಾನಂದನು ನನ್ನ ಮೇಲೆ ದ್ವೇಷವನ್ನು ಕಾರುತ್ತಿದ್ದರೂ ನಾನು ಆತನನ್ನು ದ್ವೇಷಿಸಲಾರೆನು. ಆತನು ಮಾಡುತ್ತಿರುವ ಕೆಲಸಗಳಿಗಾಗಿ ಮತ್ತು ಅವಿಧೇಯನಾಗಿ ನಮ್ಮ ಮಾತಿಗೆ

ಕವಿಗೊಡದೆ ಸ್ವಚ್ಛಂದನಾಗಿ ತಿರುಗುವುದನ್ನು ನೋಡಿ ವಿಷಾದಪಡುವೆನಾದರೂ, ಯತ್ನವಿಲ್ಲದೆ ಸುಮ್ಮನಿರಬೇಕಾಗಿದೆ. ಈ ದಿನವೂ ಆತನು ಬಾಲೋದ್ಯಾನದ ಮಂಟಪದಲ್ಲಿ ಒಬ್ಬನೇ ಕುಳಿತಿದ್ದುದನ್ನೂ ಆತನಲ್ಲಿಗೆ 'ಮಧುಕರಿ' ಎಂಬ ವೇಶ್ಯಾಂಗನೆಯು ಚೇಟಿಯೊಡನೆ ಹೋಗುತ್ತಿದ್ದುದನ್ನೂ ನೋಡಿ, ಅಲ್ಲಿ ನಿಂತಿರಲಾರದೆ ಹೊರಟು ಬಂದೆನು. ಇದು ನಿಜವೋ ಸುಳ್ಳೋ ಎಂದು ನಿರ್ಧರಿಸಬೇಕಾಗಿದ್ದರೆ ಸತ್ಯಸೇನನನ್ನು ಕೇಳಬಹುದು." ಎಂದು ಹೇಳಿದನು. ಆ ಬಳಿಕಲಂತೂ ಗುರುಗಳು ಕ್ರೋಧದಿಂದ ಅಧೀರರಾಗಿ ಕುಳಿತು— ಛೀ! ಛೀ!! ಇನ್ನು ನನ್ನಿಂದ ಕೇಳಲಾಗುವುದಿಲ್ಲ. ಹೇಳದಿರಿ. ಒಬ್ಬನಿಂದ ಆತನು ನಾಟಕಶಾಲೆಗೆ ಹೋಗುತ್ತಿರುವನೆಂಬುದನ್ನು ತಿಳಿಯಲಾಯ್ತು. ಮತ್ತೊಬ್ಬನಿಂದ ನಿಶಾಚರನಾಗಿ ದುರ್ವ್ಯಸನದಲ್ಲಿ ಬಿದ್ದಿರುವನೆಂಬುದನ್ನು ಕೇಳಿದೆನು. ಮತ್ತೊಬ್ಬನಿಂದ ಇವೆಲ್ಲವೂ ಒಟ್ಟಿಗೆ ನಿರ್ಧಾರವಾಗುವಂತೆ ಮಾಡಲ್ಪಟ್ಟಿತು. ಇನ್ನು ಉಳಿದಿರುವುದೇನು? ಇಂತಹ ಶಿಷ್ಯರನ್ನು ಬಳಿಯಲ್ಲಿರಿಸಿಕೊಂಡು ಕಲಿಸುವೆನೆಂಬ ಗುರುವೇ ಹುಚ್ಚನಾಗುವನಲ್ಲದೆ, ಬೇರಿಲ್ಲ." ಎಂದು ಹೇಳಿ, ಅಲ್ಲಿಂದೆದ್ದು ಎಲ್ಲರೊಡನೆ ಹೊರಟುಹೋದರು. ನಾನು ಅವರ ಕಟ್ಟಾಣತಿಯಂತೆ ನಿನ್ನನ್ನು ಹುಡುಕಲು ಇಲ್ಲಿಗೆ ಬಂದೆನು.

ರಮಾ:— (ಸ್ತಬ್ಧನಾಗಿ ಕುಳಿತುಕೊಳ್ಳುವನು.)

ಸೌಮ್ಯ:— ಎಲಾ ಪಾಪಿ! ರವಿವರ್ಮ! ದಾಯಾದಮಾತ್ಸರ್ಯದಿಂದ ಬೀಗಿ ಹೀಗೆ ಹೇಳಿದೆಯಾ? ಒಡಹುಟ್ಟಿದ ಪ್ರೀತಿ, ಎಳ್ಳಷ್ಟಾದರೂ ಬೇಡವೇ? ಹೇಗೆ ಬಂದೀತು? ನೀತಿಯೋ ಇಲ್ಲವೆ?—

ಕಂದ॥ "ಒಡಹುಟ್ಟಿದರೇಂ ನಂಟರೆ?।
ಒಡವುಟ್ಟಿಯೆ ಕೊಲ್ಗುಮಲ್ತೆ ಕುತ್ತಂ ನರನಂ॥
ಅಡವಿಯೊಳೆ ಪುಟ್ಟಿ ಮೂಲಿಕೆ।
ಕಿಡಿಕುಂ ಗಡರುಜೆಯು ನನ್ನರುಂ ಬುವಿಯೊಳೊಳರ್॥"

ಯುವರಾಜ:— ದ್ರೋಹಿಗಳ ಸ್ವಭಾವವೇ ಹಾಗಲ್ಲವೆ? ಅವರು ತಮಗೆ ಉಪಕಾರಮಾಡಿದವರನ್ನು ಕೆಡಿಸುವುದೊಂದನ್ನೇ ಬಲ್ಲರಲ್ಲದೆ ಮತ್ತೇನಾದರೂ ಕೃತಜ್ಞತೆಯನ್ನು ಸೂಚಿಸಬಲ್ಲರೋ,—

ಕಂದ || "ಕರುಣೆಯಿನತಿ ನೀಚರ್ಗುಪ ।
ಕರಿಪುದು ನಿಷ್ಫಲಮಪಾಯಕರಮಪ್ಪುದು ಮೇಣ್ ||
ಉರಿಯಲ್ಲಿ ಬಿಳ್ದ ತೇಳಂ ।
ಕರದಿಂ ಪೊರೆಗಣ್ಗೆ ತೆಗೆಯಲೊಡಮಿರಿಯದೆ ಪೇಳ್" ||

ಎಂಬ ನೀತಿಯನ್ನು ನೀನು ತಿಳಿದಿರುವೆಯಷ್ಟೆ?

ಸೌಮ್ಯ:— ಅಷ್ಟೇ ಅಲ್ಲ—

ಕಂದ || "ಕುಲಜಂಗೊಡರಿಸಿದುಪಕೃತಿ ।
ಶಿಲೆಯೊಳ್ ಕಂಡಕ್ಕರಂ ಬೋಲ್ ಮೆರೆಗುಂ ||
ಜಲದೊಳ್ ಬರೆದಕ್ಕರದಂ ।
ತೆ ಲಯಿಪುದಾಗಳೆ ಖಳಂಗೊಡರ್ಚಿದಸಾಹ್ಯಂ" ||

ಎಂದೂ, ಬಲ್ಲವರಾಡುವರು. ಆದುದರಿಂದಲೇ. ಕುಮಾರನನ್ನು ಎಷ್ಟೋ ತಡೆದೆವು.

ರಮಾ:— (ನಿಟ್ಟುಸಿರಿಟ್ಟು) ಮಿತ್ರರೆ! ನಿಮ್ಮ ವಿಶ್ವಾಸವು ಎಂದೆಂದಿಗೂ ಹೀಗೆಯೇ ದೃಢವಾಗಿರಲಿ. ನನ್ನ ಸಂಕಲ್ಪವನ್ನೂ, ಶ್ರಮವನ್ನೂ ಪರಮಾತ್ಮನು ಸಾರ್ಥಕಗೊಳಿಸಲಿ. ಆತನ ಸಹಾಯವೊಂದಿದ್ದರೆ, ಇಂತಹ ವಿಚಾರಗಳಿಗೆ ಮನಸ್ಸನ್ನು ಬಲಿಕೊಟ್ಟು ಕರ್ತವ್ಯವನ್ನು ಮಾತ್ರ ಬಿಡುವವನಲ್ಲವೆಂದು ತಿಳಿಯಿರಿ. ಏಕೆಂಬಿರೋ, ಮಹನೀಯರು ತಮಗೆ ಸಂಕಟವುಂಟಾಯಿತೆಂದು ಕರ್ತವ್ಯವನ್ನು ಹೇಗೂ ಬಿಡಲಾರರು. ಹೇಗೆಂದರೆ, ಕೇಳಿರಿ—

ಕಂದ || "ಸಂಕಟಮುಡಸಿರ್ದೊಡಮುಕ ।
ಳಂಕರ್ ನಿಜಸುಗುಣ ಲೇಶಮುಮನುಳಿದಪರೇಂ ||
ಸಂಕಂ ಸುಡೆಬೆಳ್ಪಂ ಕೇ ।

ರಂಕಾಸೆ ತನತ್ತು ಸವಿಯ ನಿನಿಸುಳಿದಪುದೇ ” ||

ಸೌಮ್ಯ:— ಇರಬಹುದು. ಆದರೆ, ಈಗ ನೋಡು; ನಿನ್ನ ಸದುದ್ದೇಶ, ಸತ್ಕಾರ್ಯಗಳಿಗಾಗಿರುವ ಮಹತ್ಫಲವನ್ನು !

ರಮಾ:— ಸೌಮ್ಯನೆ ! ಆತುರಪಟ್ಟಮಾತ್ರದಿಂದ ಅಕಾಲದಲ್ಲಿಯೇ ನಾವು ಫಲವನ್ನು ಹೊಂದುವೆವೆ ? ಅದಕ್ಕೂ ದೈವಾನುಕೂಲವುಂಟಾದ ಮೇಲೆಯೇ ಫಲವು ದೊರೆವುದೆಂದು ಆರ್ಯರು ಹೀಗೆ ಹೇಳಿಲ್ಲವೇ ?—

ಕಂದ || “ಅಳವಂ ಮೀರಿಬಳಲ್ದೇ |
ನೆಳಸಿದ ಕಜ್ಜಮನುಕೂಲ ಕಾಲದೆ ಫಲಿಕುಂ ||
ನಳನಳಿಸಿ ಬೆಳದೊಡಂ ತರು |
ಫಳಮಂ ತಳೆದಪುದೆ, ಕ್ಲಿಪ್ತಕಾಲಕೆ ಮುನ್ನಂ || ”

ಯುವಾನ:— ಅದು ಯುಕ್ತವೇ ಸರಿ. ಆದರೂ ಮನಸ್ಸು ನಿಲ್ಲುವದು ಮಾತ್ರ ಕಷ್ಟ.

ರಮಾ:— ಮನಸ್ಸು ನಿಲ್ಲುವುದಿಲ್ಲವೆಂದು ಅದು ಹೋದಂತೆ ಬಿಡುವುದು ನಮ್ಮ ಶೀಲವಲ್ಲ. ಅದನ್ನು ನಮ್ಮ ಬುದ್ಧಿಯ ವಶದಲ್ಲಿಟ್ಟು, ನಾವು ಜಾಗೃತರಾಗಿರಬೇಕಾದುದು ಅವಶ್ಯಕವು. ಅದಿರಲಿ, ಸುಮುಖನನ್ನು ನೀನು ನೋಡಲಿಲ್ಲವೇನು ?

ಯುವಾನ:— ಇಲ್ಲ. ಆತನು ಎಲ್ಲಿರುವನೋ, ಮನೆಗೇನಾದರೂ ಹೋಗಿರುವನೋ ತಿಳಿಯಲಿಲ್ಲ.

ರಮಾನಂದ:— ಎಲ್ಲಿದ್ದರೂ ಬಂದೇಬರುವನು. ಭಗವಂತನು ನಮ್ಮನ್ನು ಕೈಬಿಡಲಾರನೆಂಬ ಭರವಸೆ ನನಗೆ ಚೆನ್ನಾಗಿದೆ. ಇನ್ನು ನಡೆಯಿರಿ. ಮಂದಿರಕ್ಕೆ ತೆರಳುವ.

( ಮೂವರೂ ಹೊರಟು ಗಮನವನ್ನಭಿನಯಿಸಿ ಮುಂದೆ ಬರುವರು. )

ಯುವಾನ:— ರಮಾನಂದ ! ಸ್ವಲ್ಪನಿಲ್ಲು. ಯಾರೋ ಇತ್ತಕಡೆಗೇ ನಡೆತರುವಂತೆ ತೋರುತ್ತಿದೆ.

(ತೆರೆಯಲ್ಲಿ) ಯಾರು ಮಾತನಾಡುತ್ತಿರುವವರು? 'ಯುವಾನನೇ-ರಮಾನಂದನೇ? ಬೇಗ ಹೇಳಿರಿ.'

ಯುವಾನ:— ಯಾರದು? ಸುಮುಖನೇ! ಬಾ, ಬಾ, ಇಲ್ಲಿರುವೆವು; ಬೇಗ ಬಾ.

ಸುಮುಖ:— (ಮುಂದೆ ಬಂದು) ಯುವಾನನೇ! ಮೊದಲು ಹೇಳು, ಕುಮಾರನೆಲ್ಲಿರುವನು?

ರಮಾನಂದ:—(ಮುಂದೆ ಬಂದು ಕೈಹಿಡಿದು) ಸುಮುಖ! ನಾನು ಇಲ್ಲಿಯೇ ಇರುವೆನು. ಇದೇಕಿಷ್ಟು ಭಯಪಟ್ಟಿರುವೆ ಹೇಳು?

ಸುಮುಖ:— (ಬಳಲಿಕೆಯಿಂದ) ಕುಮಾರ! ಹೇಳುವುದೇನು? ಕುಹಕರ ಕೃತ್ರಿಮಕ್ಕೆ ಈಗ ನಾವೆಲ್ಲರೂ ಪಕ್ಕಾಗಿ ನರಳುವಂತಾಗಿದೆ. ಎಲ್ಲರ ಮಾತೂ ಹಾಗಿರಲಿ. ದೇವರು ನಿನ್ನನ್ನು ಈ ಸಂಕಟದಿಂದ ಪಾರಾಗಿಸಬಲ್ಲನಾದರೆ ಸಾಕಾಗಿದೆ.

ರಮಾ:— ಭಕ್ತವತ್ಸಲನಾದ ಭಗವಂತನಲ್ಲಿ ಭರವಸೆಯಿಟ್ಟಿದ್ದರೆ ಕೇಡೆಂದಿಗೂ ಆಗುವದಿಲ್ಲ. "ಬಂಧುದೆಲ್ಲವೂ-ಬರಲಿ; ಗೋವಿಂದನ ದಯೆಯೊಂದಿರಲಿ!" ಎಂಬ ನಾಣ್ಣುಡಿ ತಪ್ಪೇನು? ಮೊದಲು ವಿಚಾರವೇನೆಂಬುದನ್ನು ತಿಳಿಯಹೇಳು. ಈ ವರೆಗೂ ನೀನೆಲ್ಲಿಗೆ ಹೋಗಿದ್ದೆ?

ಸುಮುಖ:— ನಾನು ಎಲ್ಲಿಗೂ ಹೋಗಿರಲಿಲ್ಲ. ಗುರುಗಳು ಆಗ್ರಹಯುಕ್ತರಾಗಿ ನಡೆಸಿದುದನ್ನೂ ಅಲ್ಲಿಂದ ಬಂದವರು ಪತ್ನಿಯಲ್ಲಿ ಹೇಳಿದುದನ್ನೂ ಮತ್ತು ರವಿವರ್ಮಾದಿಗಳು ಹಾರಾಡುತ್ತ ಮಧುಕರಿಯ ಮನೆಗೆ ಹೋದುದನ್ನೂ ಎಲ್ಲವನ್ನೂ ನೋಡಿದೆನು. ಮತ್ತು ಗುರುಪತ್ನಿಯವರು ಬರಹೇಳಿದ್ದುದರಿಂದ ಅಲ್ಲಿಗೂ ಹೋಗಿದ್ದೆನು.

ರಮಾನಂದ:— ಮತ್ತೇನು ವಿಚಾರ!

ಸುಮುಖ:— ಹೇಳುವುದೇನು? ನಿನ್ನ ಹೆಸರಿನಲ್ಲಿ ಮಧುಕರಿಗೆ ಬರೆದ ಕಾಗದಗಳೂ, ಮಧುಕರಿಯಿಂದ ನಿನ್ನ ಹೆಸರಿಗೆ ಬರೆಯ

ಲ್ಪಟ್ಟ ಕಾಗದಗಳೂ ಮತ್ತು ನೀನು ನಾಟಕ ಶಾಲಾಧಿಕಾರಿಗೆ ಕೊಡಬೇಕಾಗಿದ್ದಂತೆ ಸೂಚಿಸಿ, ಸಾಲದ ತಗಾದೆಗೆಂದು ಆತನಿಂದ ಬರೆಯಲ್ಪಟ್ಟು ಬಂದ ಕಾಗದವೂ ಇವೆಲ್ಲವೂ ಗುರುಪತ್ನಿಯ ಬಳಿಯಲ್ಲಿರಿಸಲ್ಪಟ್ಟಿದ್ದು, ಅವು ನನ್ನ ಪರಾಮರ್ಶಕ್ಕೆಂದು ಕೊಡಲ್ಪಟ್ಟವು. ನಾನು ಅವೆಲ್ಲವನ್ನೂ ನೋಡಿ ಅವರಿಗೆ ನಂಬಿಕೆಯಾಗುವಂತೆ ನಾಲ್ಕಾರು ಮಾತುಗಳನ್ನಾಡಿದುದಲ್ಲದೆ, ಇದರ ನಿಜಾಂಶವು ಇಷ್ಟರಲ್ಲಿಯೇ ಹೊರಬೀಳುವಂತೆ ಮಾಡುತ್ತೇನೆಂದೂ ಹೇಳಿ ಬಂದೆನು. ಗುರುಪತ್ನಿಯು ನಿನ್ನನ್ನು ಈಗಲೇ ತಮ್ಮ ಬಳಿಗೆ ಕರೆತಂದು ಬಿಡಬೇಕೆಂದೂ, ತಾವೇ ನಿನ್ನನ್ನು ಮೊದಲು ಕೆಲವು ವಿಚಾರವನ್ನು ಕೇಳಬೇಕೆಂದೂ ಹೇಳಿದುದಲ್ಲದೆ, ನಿನ್ನ ಮೇಲೆ ಬಿದ್ದಿರುವ ಈ ಅಪವಾದದ ಹೊರೆಗಾಗಿ ಪರಿತಪಿಸಿದರು. ಗುರುಗಳಂತೂ ಅತ್ಯಂತ ವ್ಯಾಕುಲದಿಂದ ಅನ್ನನಿದ್ರೆಗಳನ್ನೂ ಒಲ್ಲದೆ, ನಿಮ್ಮ ತಂದೆಯ ಬಳಿಯಲ್ಲಿ ತಾವುಕೊಟ್ಟ ಮಾತು ಕೆಟ್ಟುಹೋಯಿತೆಂದು ಮರುಗುತ್ತಿರುವರಂತೆ! ಗುರುಪತ್ನಿಯು ಪತಿಯ ವ್ಯಾಕುಲಕ್ಕೂ ನಿನ್ನ ವಿಷಯಕವಾದ ಅಪವಾದಕ್ಕೂ ಬಹುವಾಗಿ ಚಿಂತಿಸುತ್ತಿರುವರು. ದೇವರು ನಿನಗೆ ಸಹಾಯಕನಾಗಿದ್ದು ರಕ್ಷಿಸಲಿ. ನೀನು ಈಗಲೇ ಹೋಗಿ ಗುರುಪತ್ನಿಯನ್ನು ಕಾಣಿಸಿಕೊಳ್ಳಬೇಕು; ಮರೆಯಬೇಡ.

ರಮಾನಂದ:—ಆಗಲಿ; ಹೋಗುವೆನು. ನೀನೆಲ್ಲಿಗೆಹೋಗುವೆ?

ಸುಮುಖ:— ನಾನು ನಮ್ಮ ತಂದೆ (ಕ್ಷೇಮದರ್ಶಿ) ಯ ಬಳಿಗೆ ಹೋಗಬೇಕಾಗಿದೆ. ಭದ್ರ! ರಾತ್ರಿಯಲ್ಲಿ ಹೊರಗೆ ಹೆಚ್ಚು ಹೊತ್ತು ನಿಂತಿರಬೇಡ, ಬೇಗ ಹೊರಡು.

(ಎಂದು ಹೊರಟುಹೋಗುವನು.)

ಯುವಾನ:— ರಮಾನಂದ! ಗುರುಪತ್ನಿಯವರಲ್ಲಿಗೆ ನಾವೂ ಬರಬೇಕೇ?

ರಮಾ:— ಸುಮುಖನು ಮತ್ತೇನನ್ನೂ ಹೇಳಲಿಲ್ಲ. ನೀವೂ ಜತೆ

ಯಾಗಿ ಬಂದರೆ, ನನಗೆ ಮತ್ತೂ ಸಮಾಧಾನವಾಗಬಹುದಾದರೂ, ಅವರ ಅಭಿಪ್ರಾಯವನ್ನು ತಿಳಿಯದೆ ನಡೆಯಲು ಹಿಂತೆಗೆಯಬೇಕಾಗಿದೆ.

ಸೌಮ್ಯ :— ನೀನೊಬ್ಬನೇ ಹೋಗಿ ನೋಡಿ ಬರುವುದು ಮೇಲು. ನಾವಿಬ್ಬರೂ ಮಂದಿರದಲ್ಲಿರುವೆವು. ನೀನೂ ಬೇಗ ಬಂದು ಮಂದಿರದಲ್ಲಿ ನಮ್ಮನ್ನು ಮತ್ತೆ ನೋಡುವೆಯಷ್ಟೆ ?

ರಮಾ:— ಅದನ್ನೂ ಹೇಳಬೇಕೇ ? ಇನ್ನು ನಡೆಯಿರಿ.

( ಮೂವರೂ ಹೊರಟುಹೋಗುವರು. )

ಸ್ಥಾನ ೨:— **ಗುರುವಿನ ಮನೆಯ ಅಂಗಳ.**

(ಚಿಂತಾಸಕ್ತಳಾದ ಗುರುಪತ್ನಿಯು, ಸತ್ಯಸೇನನೊಡನೆ ಮಾತನಾಡುತ್ತಿರುವಳು.)

ಗುರುಪತ್ನಿ:— ಸತ್ಯಸೇನ! ನೀನೂ ನೋಡಿದೆಯಾ? ನಿಜವಾಗಿ ಹೆಂಗಸು ಬಂದಿದ್ದಳೇ ?

ಸತ್ಯ:—ತಾಯಿ! ನಾನೇಕೆ ಸುಳ್ಳು ಹೇಳಲಿ? ಆದರೆ ಆ ಹೆಂಗಸು ಇಂಥವಳೆಂಬುದನ್ನು ಮಾತ್ರ ಗೊತ್ತು ಹಿಡಿಯಲಿಲ್ಲ. ಹೇಗೂ ಸ್ತ್ರೀ ವ್ಯಕ್ತಿ ನಿಂತಿದ್ದುದನ್ನು ನೋಡಿದೆನು; ಅಷ್ಟೇ.

ಗುರುಪತ್ನಿ:—ಹಾಗಾದರೆ, ಈಗಲೂ ಆತನು ತೋಟದಲ್ಲಿಯೇ ಇರುತ್ತಾನೊ?

ಸತ್ಯ:— ಇದ್ದರೂ ಇರಬಹುದು. ಆದರೆ ಈಗ ಆತನು ತನ್ನ ಸಹಚರರೊಡನೆ ಸೇರಿರಬಹುದೆಂದು ಯೋಚಿಸುತ್ತೇನೆ. ಏಕೆಂದರೆ, ಸೌಮ್ಯನು ನನ್ನಿಂದ ಆತನಿರುವ ಸ್ಥಳವನ್ನು ತಿಳಿದು ಅಲ್ಲಿಗೆಹೋದನು.

ಗುರುಪತ್ನಿ:— ದೇವರಚಿತ್ತ ! ರಮಾನಂದನೆಂದರೆ ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೂ ಹೆಚ್ಚಾಗಿದ್ದನು. ಅಂಥವನು ಈ ಕೆಟ್ಟ ನಡತೆಗೆ ಬಿದ್ದನೆಂದರೆ ನಾನು ಹೇಗೆ ನಂಬಲಿ? ಭಗವಂತನೇ ಆತನನ್ನು ಸನ್ಮಾರ್ಗಗಾಮಿಯನ್ನಾಗಿ ಮಾಡಿ ರಕ್ಷಿಸಲಿ.

(ತೆರೆಯಲ್ಲಿ) 'ಪೂಜ್ಯಮಾತೆ! ಭಗವದನುಗ್ರಹವಿದ್ದರೆ, ಬಾಲಕನು ಎಂದಿಗೂ ಅಧರ್ಮಿಯಾಗಲಾರನು; ಆಶೀರ್ವದಿಸಬೇಕು'

(ರಮಾನಂದನು ಮುಂದೆಬಂದು ಗುರುಪತ್ನಿಗೆ ನಮಸ್ಕರಿಸುವನು)

ಗುರುಪತ್ನಿ:—(ತಲೆಯನ್ನು ಹಿಡಿದೆತ್ತಿ) 'ಮಗುವೆ! ದೇವರು ನಿನ್ನನ್ನು ರಕ್ಷಿಸಲಿ.'

ರಮಾ: —ಜನನಿ ! ಬರೆಹೇಳಿದ್ದುದೇಕೆ ?

ಗುರುಪತ್ನಿ:-ಮಗುವೆ! ಈಗ ಒದಗಿರುವ ಅನರ್ಥಗಳನ್ನು ನಿನಗೆ ಹೇಗೆಹೇಳಲಿ? ಹೇಳದಿದ್ದರೆ ನಿರ್ವಾಹವಾಗುವುದಾದರೂ ಹೇಗೆ?

ರಮಾ:—ತಾಯಿ ! ಈ ಬಾಲಕನು ನಿರಪರಾಧಿ, ನಿಷ್ಕಪಟಿ ಮತ್ತು ನಿರಂತರ ವಿಧೇಯನಾಗಿರುವವನು. ಮಾತಾಪಿತೃಗಳಿಂದ ಪ್ರೇರಿತನಾಗಿ ಬಂದುದು ಮೊದಲು, ನಾನು ತಮ್ಮನ್ನಲ್ಲದೆ, ಮತ್ತಾರನ್ನೂ ಕಂಡವನಲ್ಲ. ಸಾಕ್ಷಾತ್ ಮಾತಾಪಿತೃಗಳಂತೆಯೇ ಕಾಣುತ್ತಿರುವ ತಾವು, ಈ ಬಾಲಕನು ತಿಳಿಯದೆ ಏನಾದರೂ ತಪ್ಪಿ ನಡೆದಿದ್ದರೆ, ಶಿಕ್ಷಿಸುವುದಕ್ಕೂ ಮತ್ತು ರಕ್ಷಿಸುವದಕ್ಕೂ ಕರ್ತರಾಗಿರುವಿರಲ್ಲವೆ?

ಗುರುಪತ್ನಿ:—(ನಿಟ್ಟುಸಿರಿಟ್ಟು) "ಸುಕುಮಾರ! ನೀನು, 'ಮಧುಕರಿ' ಎಂಬ ವೇಶ್ಯೆಯನ್ನೇನಾದರೂ ಬಲ್ಲೆಯಾ? ಅವಳಿಗೂ ನಿನಗೂ ಸ್ನೇಹಬಾಂಧವ್ಯವುಂಟೇ? ಮರೆಮಾಜದೆ ಹೇಳು."

ರಮಾ:— ತಾಯಿ ! ನನಗೆ ಇಂದಿನವರೆಗೂ ಅವಳ ಹೆಸರು ಕೂಡ ತಿಳಿದಿರಲಿಲ್ಲ. ಈ ದಿನ ರಾತ್ರಿ, ನಾನು ಆಯಾಸವಿಶ್ರಾಂತಿಗಾಗಿ ತೋಟಕ್ಕೆ ಹೋಗಿದ್ದವೇಳೆ, ಅವಳ ಪರಿಚಾರಿಣಿಯೊಂದು ಒಬ್ಬ ದಾಸಿಯು ಬಂದು, ನನ್ನನ್ನು ಕೂಗಿಕೊಂಡುದರಮೇಲೆ, ನಾನು ಬಂದು ಏನೆಂದು ಕೇಳಿದುದಕ್ಕೆ, ಮಧುಕರಿಯು ನನ್ನ ವಿಚಾರವಾಗಿ ಬಹುಮುಖದಿಂದ ಕೇಳಿರುವುದಾಗಿಯೂ, ಆದುದರಿಂದ ನನ್ನನ್ನು ನೋಡಲು ಬಂದಿರುವುದಾಗಿಯೂ, ಅವಳನ್ನು ನೋಡಲು ಬರಬೇಕೆಂದೂ ಬಹುವಾಗಿ ಕೇಳಿಕೊಂಡಳು. ನಾನು ಅವಳ ಪ್ರತಿಯೊಂದು ಮಾತನ್ನೂ ಮುರಿದು, ಅವಳು ಅಲ್ಲಿಗೆ ಬಂದುದಕ್ಕಾಗಿ ಅವಳನ್ನು ತಿರಸ್ಕರಿಸಿ ಹೊರಟುಹೋದೆನು. ಅಲ್ಲಿಗೆ ಹೋಗುತ್ತಿದ್ದಾಗಲೇ

ಸತ್ಯಸೇನನು ನೋಡಿದ್ದುದು. ಇಷ್ಟಲ್ಲದೆ ನಾನು ಮತ್ತೇನನ್ನೂ ಕಂಡವನಲ್ಲ. ಇದು ಸತ್ಯವಾದ ಮಾತು.

ಗುರುಪತ್ನಿ:— ನಾಟಕಕ್ಕೇನಾದರೂ ಹೋಗಿದ್ದೆಯಾ? ಅವರಿಗೇನಾದರೂ ಸಾಲವನ್ನು ಕೊಡಬೇಕೇ?

ರಮಾ:— ತಾಯೆ! ನಾನು ವಿದ್ಯಾಶಾಲೆ, ವಿದ್ಯಾರ್ಥಿಮಂದಿರ ಮತ್ತು ಬಾಲೋದ್ಯಾನ-ಇವುಗಳನ್ನಲ್ಲದೆ, ಈ ವರೆಗೂ ಇನ್ನೆಲ್ಲಿಗೂ ಹೋದವನಲ್ಲ. ಮತ್ತೇನು ಹೇಳಲಿ?

ಗುರುಪತ್ನಿ:—(ಕುತೂಹಲದಿಂದ) "ಹಾಗಾದರೆ ಈ ಪತ್ರಗಳೆಲ್ಲವೂ ನಿನಗೆಲ್ಲಿಂದ ಬಂದವು? ನಿನ್ನ ಹಾಸಿಗೆಯಲ್ಲಿ ಈ ಹೆಂಗಸಿನ ಚಿತ್ರವು ಸೇರಿರುವದಕ್ಕೆ ಕಾರಣವೇನು? " (ಸುಮುಖನು ಸೂಚಿಸಿದ್ದಂತೆ ಪತ್ರಗಳನ್ನೂ ಪಟವನ್ನೂ ಮುಂದಿಡುವಳು.)

ರಮಾ:—ತಾಯೆ! ನನಗದಾವುದೂ ತಿಳಿಯದು. ತಾವು ಮತ್ತು ನನ್ನ ತಾಯಿ, ಇವರಲ್ಲದೆ ಮತ್ತಾವ ಸ್ತ್ರೀಯರನ್ನೂ ನಾನು ನೋಡಿರುವುದಾಗಲೀ, ನೋಡುವುದಾಗಲೀ ಇಲ್ಲ. ಭಾವಚಿತ್ರವೆಂದರೆ, ಶಾರದಾಚಿತ್ರವೊಂದಲ್ಲದೆ ಮತ್ತಾವುದನ್ನೂ ನನ್ನ ಬಳಿಯಲ್ಲಿರಿಸಿಕೊಂಡಿರುವುದಿಲ್ಲ. ತಮ್ಮ ಅನುಗ್ರಹಬಲದಿಂದ ನನ್ನನ್ನು ವಿದ್ಯಾವಿಚಾರವೊಂದಲ್ಲದೆ ಇತರ ದುರ್ವ್ಯಸನವಾವುದೂ ಮುಟ್ಟುವಂತಿಲ್ಲ. ಇದೆಲ್ಲವೂ ಹೀಗಾಗಿರುವುದಕ್ಕೆ ಕಾರಣವಾಗಲೀ, ಕಾರ್ಯಕಾರಿಗಳಾಗಲೀ ಇಂತಹವರೆಂಬದನ್ನು ನಾನು ಬಾಯ್ದೆರೆದು ಹೇಳುವವನಲ್ಲ. ಪ್ರತ್ಯಕ್ಷ ಪ್ರಮಾಣದಿಂದ ನಿದರ್ಶನಕ್ಕೆ ಬರುವಂತಾಗಲೆಂದೂ, ಮಾಡಿದವರನ್ನು ಭಗವಂತನು ಕ್ಷಮಿಸಿ, ರಕ್ಷಿಸುವಂತೆಯೂ, ಆಶೀರ್ವದಿಸಬೇಕಾಗಿ ಕೋರುವೆನು. ಮತ್ತೇನನ್ನು ಪ್ರಾರ್ಥಿಸಲಿ?

ಗುರುಪತ್ನಿ:—(ಅನುಕಂಪಿತಸ್ವರದಿಂದ) 'ಸುಕುಮಾರ! ಭಗವಂತನು ಅನುಗ್ರಹಿಸಲಿ. ನಿನ್ನ ಮೇಲೆಬಿದ್ದಿರುವ ಅಪವಾದಕ್ಕಾಗಿಯೂ, ಈಗ ತೋರಿಬಂದಿರುವ ಕಾರಣಗಳಿಗಾಗಿಯೂ ನಿನ್ನ ಗುರುವು ಅತ್ಯಂತ

ವಿಷಾದವನ್ನು ಹೊಂದಿರುವರು. ಅವರ ವ್ಯಸ್ತತೆಯನ್ನು ನೋಡಿ ಸಹಿಸಲಾರದೆ ಸಂಗತಿಯೇನೆಂಬುದನ್ನು ತಿಳಿಯಲು ನಿನ್ನನ್ನು ಕರೆಯಿಸಿದೆನು. ಇನ್ನು ಮುಂದಿನ ವಿಚಾರವು ಅವರನ್ನೇ ಸೇರಿರುವುದು. ಈ ರಾತ್ರಿಯೆಲ್ಲಾ ಹೀಗೆಯೇ ಕಳೆಯುತ್ತಿದ್ದರೆ, ದೇಹಾಯಾಸವು ಬಲವಾಗುವುದು. ನೀನಿನ್ನು ಹೋಗಿ ಮಲಗು."

ರಮಾ:— ಮಲಗುವುದೆಲ್ಲಿ? ಮಿಥ್ಯಾಪವಾದಗ್ರಸ್ತನಾಗಿರುವವನು ತನ್ನ ನಿಷ್ಕಲ್ಮಷ ಹೃದಯವನ್ನು ಸ್ಪಷ್ಟಪಡಿಸುವವರೆಗೂ ಆತನಿಗೆ ಆಹಾರ ನಿದ್ರೆಗಳಾದರೂ ರುಚಿಸುವುವೇ ? ತಾಯಿ ! ನನ್ನ ಈ ದೈನ್ಯ ಪ್ರಾರ್ಥನೆಗಳನ್ನು ಗುರುಸನ್ನಿಧಿಗೆ ನಿವೇದಿಸಬೇಕು. ಇನ್ನು ನಾನು ಅಪ್ಪಣೆಯನ್ನು ತೆಗೆದುಕೊಳ್ಳುವೆನು.

( ರಮಾನಂದನು ಹೊರಟುಹೋಗುವನು. )

ಗುರುಪತ್ನಿ:—" ಹೇ, ಜಗಜ್ಜನನೀ ! ಅನುಗ್ರಹಿಸು. ಇಂತಹ ಸುಗುಣ-ಚಿಂತಾಮಣಿಗಳಾದ ವಿದ್ಯಾರ್ಥಿಗಳನ್ನು ಈ ರೀತಿಯಾದ ಸಂಕಟಕ್ಕೆ ಗುರಿಪಡಿಸುವುದು ಸರಿಯಲ್ಲ. ಇದು ನಿನಗೆ ತಿಳಿಯದುದಲ್ಲವಾಗಿ, ರಮಾನಂದನ ದಿಗ್ವಿಜಯಕ್ಕೆ ಈಗ ನೀನೇ ಬೆಂಬಲವಾಗಿ ನಿಲ್ಲಬೇಕಲ್ಲದೆ, ಮತ್ತಾರೂ ನಿಲ್ಲುವವರಿಲ್ಲ. ಇನ್ನು ನಿನ್ನ ಇಷ್ಟ."

(ಎಂದು ಎದ್ದು ಹೊರಡುವಳು.)

---

## ಪ್ರಾರ್ಥನೆ.

ರಾಗ—ಸೋಟ್. (ಕಾಯ್ವು ದೇವಕಿತನಯ.)

ಕಾಯೆ ಶ್ರೀರಮಾ ದೇವಿಯೆ ಸದಾ । ಶೋಯಜಾಂಬಕಿಯೆ—
ಭಯವ-ಬಿಡಿಸಿ-ಭರದಿಂದ ॥ ಕಾಯೆ ॥ ಪ ॥
ಕ್ಷೀರಾಂಭೋನಿಧಿತನಯೆ ಪೊರೆ । ಮಾರನಯ್ಯನರಸಿ—
ಕರುಣಾ-ವೆರಸೀ ನಲವಿಂದ ॥ ಕಾಯೆ

ಸೋಮಸೋದರಿ ನಿನ್ನನೇ ನೆರೆ । ಭಾವಿಸುವ ಎನ್ನ—
ಬಿಡದೆ-ಪಿಡಿದಾ-ಧರಿಸುತ್ತ ॥ ಕಾಯೆ॥
ಶ್ರೀಶೇಷಗಿರಿವಾಸನ-ದಯಿತೆ ॥ ವಾಸವಾದಿ ವಿನುತೆ—
ಮಹಿತೆ-ಸುಹಿತೆ-ವರದಾತೆ ॥ ಕಾಯೆ॥

— ಇಷ್ಟಕ್ಕೆ ತುರೀಯಾಂಕವು.—

|| ಶ್ರೀ ||

|| ಶ್ರೀ ಸೀತಾರಾಘವ ಪ್ರಸನ್ನ ||

## ಪ ಂ ಚ ಮಾ ಂ ಕ

ಭಾ|| ಷ|| ಧರಣಿಪಾಗ್ರಣಿಯೆನಿಪ ದಶರಥ ।
ನರಸಿಯುದರದಿ ಜನಿಸಿ ಸುಜನರ ।
ಪೊರೆದು, ದುರುಳರ ತರಿದು, ಧರ್ಮದಿ ಧರೆಯ ಭಾರವನು||
ಪರಿದು, ಸತ್ಯದಿ ಮೆರೆದು, ಭಕ್ತರ ।
ಕರವ ಪಿಡಿದಾದರಿಸುವಾ ರಘು ।
ವರನೆ, ಜಾನಕಿಯೊಡನೆ ಪಾಲಿಕೆ ನಮ್ಮನನವರತ ||

---

ರಾಗ— (ಶ್ರೀಕಾಂತಶ್ರಿತಚಿಂತಾ)

ಜಯರಾಮಾ ಜಯರಾಮ—ರಘುವಂಶಾಬ್ಧಿಸೋಮಾ || ಪ ||
ವೈದೇಹಿ ಮನೋಹರ—ವೇದವೇದ್ಯ ಶ್ರೀಕರ | ಸಾಧುಜನ ಸುಖಕರ—
ಮಾಧವ ಮುರಹರ | ಜಯಶೌರೆ-ಮುರವಿದಾರೆ-ದಿತಿಜಾರೇ || ಜಯ ||೧||
ನೀರೇರುಹಲೋಚನ – ವಾರಾಶಿಬಂಧನ । ಆನಂದಮಯಸದನ-
ಅಕ್ಷಯಸುವಚನ | ಸ್ಮರತಾತ-ವರದಾತ-ರಮಾಸಮೇತ || ಜಯ ||೨||
ಶೇಷಾದ್ರಿನಿಕೇತನ | ಆಶ್ರಿತಪರಿಪಾಲನ || ಕ್ಲೇಶಪಾಶವಿಮೋಚನ—
ವಾಸವಾರ್ಚಿತಚರಣ || ಜಯದೇವಾದ್ಭುತಪ್ರಭಾವ-ರಮಾಧವ || ಜಯ ||೩||

### ಸ್ಥಾನ ೧:— ಕ್ಷೇಮದರ್ಶಿಯ ಮುಂಭಾಗ.

(ಆಗ್ರಹವ್ಯಗ್ರನಾದ ಕ್ಷೇಮದರ್ಶಿಯ ಮನೆಯ ಪ್ರವೇಶ.)

ಕ್ಷೇಮ:— ಆಹ! ಲೋಕಸ್ವಭಾವವೇ? ಹೀಗಿರುವುದೇ ಸಂದೇಹವೇನು? ನಮ್ಮ ಸುಕುಮಾರ ರಮಾನಂದನು, ಯಾವಾಗಲೂ ಸತ್ಯದ ಏಕನಿಷ್ಠೆಯೊಂದನ್ನೇ ಅವಲಂಬಿಸಿ,—'ಸತ್ಯಮೇವ ಜಯತೇ

ನಾನೃತಂ' 'ಧರ್ಮೋವರ್ಧತಿ, ವರ್ಧತಿ' ಎಂಬೀ ಸೂತ್ರಗಳನ್ನು ಮುಂದಿಟ್ಟುಕೊಂಡು, ಪಾರಮಾರ್ಥಿಕಬುದ್ಧಿಯಿಂದ ಸ್ವಕರ್ತವ್ಯದಲ್ಲಿ ಹಾಗೂ ದೇಶಸೇವೆ, ಲೋಕಹಿತಕಾರ್ಯಗಳಲ್ಲಿಯೇ ನಿರತನಾಗಿ ತನಗೆ ಅಹಿತವನ್ನುಂಟುಮಾಡುವವರಲ್ಲಿ ಕೂಡ ಕೋಪಿಸದೆ ಶಾಂತನಾಗಿ, ಅವರ ಅಭ್ಯುದಯವನ್ನೇ ಕೋರುತ್ತಿರುವನು. ಇಂತಹ ಲೋಕೋತ್ತರಗುಣಸಂಪನ್ನನಾದ ಕುಮಾರನ ವಿಚಾರದಲ್ಲಿ ಧೂರ್ತನಾದ ರವಿವರ್ಮನೂ ಅವನ ಸಂಗಡಿಗರೂ ನಡೆಯಿಸಿರುವ ದೌಷ್ಟ್ಯವನ್ನು ನೋಡಿದರೆ ಏನನ್ನಬಹುದು? ಅಹಾ! ಒಡಹುಟ್ಟಿದ ಪ್ರೀತಿಯು ಸ್ವಲ್ಪವಾದರೂ ಬೇಡವೆ? ಹೋಗಲಿ; ತಮ್ಮ ಅಧರ್ಮಪ್ರವರ್ತನೆಗೆ ಫಲವೇನೆಂದಾದರೂ ಯೋಚಿಸಬೇಡವೆ? ಹೀಗೂ ವಂಚನೆಯೇ? ಹೀಗೂ ದ್ರೋಹವೇ? ಇಷ್ಟರ ಅತ್ಯಾಚಾರವೇ? ಸುಡು-ಸುಡು! ದುರಾಚಾರಿಗಳ ದುರ್ಜೀವನವನ್ನು ಸುಡುಸುಡು!! ಅವರ ಕಪಟ, ಕುಟಿಲ, ವೇಷಭೂಷೆಗಳಿಗೆ ಧಿಕ್ಕಾರವಿರಲಿ. ಆಗಲಿ; ಮಾಡಲಿ. ಇದರಿಂದ ಸತ್ಯಪರಾಕ್ರಮಿಯಾದ ನಮ್ಮ ರಮಾನಂದ ಕುಮಾರನಿಗೇನೂ ಅಪಘಾತವಾಗುವಂತಿಲ್ಲ. ರಮಾನಂದನು ಸನ್ಮಿತ್ರರ ಪ್ರಬಲಸಹಾಯಸಂಪತ್ತಿಯಿಂದ ಸುಕ್ಷೇಮಿಯಾಗಿಯೇ ಇರುವನು. ಹಾಗೆ ಆತನಿಗೆ ಸಹಾಯಸಂಪತ್ತಿಯಿಲ್ಲದಿದ್ದರೆ, ಈ ಮೂರ್ಖರ ದ್ರೋಹಗಳಿಂದ ಆತನು ಮಿಥ್ಯಾಪವಾದಕ್ಕೆ ತುತ್ತಾಗುತ್ತಿದ್ದುದು ಮಾತ್ರವಲ್ಲದೆ, ಅಪಮೃತ್ಯುವಿಗೂ ಬಲಿಯಾಗುತ್ತಿದ್ದನು. ಆದರೆ, ಈಗ ಇನ್ನೆಷ್ಟು ದಿನಗಳು ಹೀಗಿದ್ದು ತೀರುವುದು? ಇದಕ್ಕೆ ಪ್ರತೀಕಾರ ಮಾಡಲೇ ಬೇಕಲ್ಲವೆ? ಛಿಃ! ಛಿಃ!! ಹೆತ್ತೊಡಲನ್ನು ಹಿಡಿದು ಕಟ್ಟುವುದು ಬಲುಕಷ್ಟ. ಮೊದಲೇ ರವಿವರ್ಮನ ದುರ್ನಡತೆ, ಅವಿಧೇಯತೆಗಳನ್ನು ಕುರಿತು ಚಿಂತಿಸುತ್ತಿದ್ದವರಿಗೆ, ರಮಾನಂದನ ಈಗಿನ ಸಂದಿಗ್ಧವಿಷಯವೂ, ಆತನ ಮೇಲೆ ಹೊರಿಸಲ್ಪಟ್ಟಿರುವ ಮಿಥ್ಯಾಪವಾದವೂ ಮತ್ತಷ್ಟು ಯಾತನೆಯನ್ನೇ ಉಂಟು ಮಾಡಿರುವುದರಲ್ಲಿ ಆಶ್ಚರ್ಯವೇನು?

ಶ್ರೀಮಂತನೂ, ಆತನ ಪತ್ನಿಯೂ ನಿರಾಶರಾಗಿ, ಅತ್ಯಂತ ಶೋಕದಿಂದ ನರಳುತ್ತಿರುವರು. ನಾನೂ ನನ್ನ ಶಕ್ತಿಯುಳ್ಳವನ್ನೂ ಪ್ರಯೋಗಿಸಿ, ಅವರನ್ನು ಸಮಾಧಾನಪಡಿಸಿ, ನಿಜಾಂಶವನ್ನು ಪ್ರತ್ಯಕ್ಷಪ್ರಮಾಣಕ್ಕೆ ತರಬೇಕೆಂದು ಹೊರಟುಬಂದೆನು. ಅತ್ತ ವಿದ್ಯಾವಾಗೀಶ ಮಹಾಮಹೋಪಾಧ್ಯಾಯನೂ ಪ್ರಿಯಶಿಷ್ಯನ ವಿಚಾರವಾಗಿ ಮರಗುತ್ತ ಸತ್ವಪರೀಕ್ಷೆಯಲ್ಲಿರುವನೆಂದು ನಮ್ಮ ಸುಮುಖನಿಂದ ಕೇಳಿ ತಿಳಿದೆನು. ಈಗ ಇನ್ನೇನು ಮಾಡಬಹುದು?

(ಕ್ಷಣಕಾಲ ಚಿಂತಿಸುತ್ತಿದ್ದು, ಮೇಲೆ ನೋಡಿ ಗಾಬರಿಯಿಂದ)

"ಏನಿದು! ಈಗಾಗಲೇ ಬಿಸಿಲೇರುತ್ತ ಬಂದಿದೆ! ಇಷ್ಟುಹೊತ್ತಾದರೂ ನನ್ನಿಂದ ನಿಯೋಜಿಸಲ್ಪಟ್ಟು ಹೋಗಿರುವ ತಾರಣನು, ಇನ್ನೂ ಏಕೆ ಬಂದಿಲ್ಲ!" ಕೆರೆಯಕಡೆ ನೋಡಿ-" ಇದೋ ಇತ್ತ ಬಂದನು."

ತಾರಣ:—(ಮುಂದೆ ಬಂದು) "ಆರ್ಯನೆ! ಜಯವಾಗಲಿ."

ಕ್ಷೇಮ:—ಅಯ್ಯ ! ಹೋಗಿದ್ದ ಕೆಲಸವೇನಾಯಿತು ? ಎಷ್ಟರಮಟ್ಟಿಗೆ ಸಾಧ್ಯವು?

ತಾರಣ:— ಎಲ್ಲವೂ ಸಾಧ್ಯವಾಗಿದೆ. ನಾಟಕಶಾಲಾಧ್ಯಕ್ಷನು ತಮ್ಮ ಪತ್ರಿಕೆಯನ್ನು ನೋಡಿದೊಡನೆಯೇ, ಈ ಎರಡು ಪತ್ರಿಕೆಗಳನ್ನೂ ಮತ್ತು ಬೇರೊಂದು ಪತ್ರಿಕೆಯನ್ನೂ ತಮಗೆ ಒಪ್ಪಿಸಬೇಕೆಂದು ಕೊಟ್ಟುಬಿಟ್ಟನು. (ಎಂದು ಕ್ಷೇಮದರ್ಶಿಯ ಕೈಗೆ ಕೊಡುವನು )

ಕ್ಷೇಮ:—(ಪತ್ರಗಳನ್ನು ಬಿಚ್ಚಿನೋಡಿ) "ಭಲೆ! ಭಲೆ!! ನಮ್ಮ ಕೆಲಸಕ್ಕೆ ಇದೇ ಜಯಸೂಚನೆ."

ತಾರಣ:—ಅದೇನು? ಏನೆಂದು ಬರೆದಿದೆ?

ಕ್ಷೇಮ:— ಇದೊ-ಇದೇ ರಮಾನಂದನ ಹೆಸರಿನಲ್ಲಿ ನಾಟಕಶಾಲಾಧ್ಯಕ್ಷನಿಗೆ ಬರೆದುಕೊಂಡ ಪ್ರಾರ್ಥನಾಪತ್ರವು. ಇದೇ ರವಿವರ್ಮನು ನಾಟಕಸಂಘಾಧ್ಯಕ್ಷನಿಗೆ-" ಈ ಪತ್ರಗಳಲ್ಲಿ ರಮಾನಂದನ ಹೆಸರಿನಲ್ಲಿರುವದನ್ನು ಮಾತ್ರ ನಿನ್ನಲ್ಲಿರಿಸಿಕೊಂಡು ಮತ್ತೊಂದನ್ನು

ಹರಿದುಹಾಕಬೇಕಲ್ಲದೆ, ಅವಶ್ಯವಾದಾಗ ರಮಾನಂದನು ನಾಟಕ ಸಂಘಕ್ಕೆ ಅಧಿಕವಾದ ಸಾಲವನ್ನು ಕೊಡಬೇಕೆಂಬದನ್ನು ಹೇಳಬೇಕೆಂದೂ, ಹೀಗೆ ಮಾಡುವ ಪಕ್ಷದಲ್ಲಿ, ನೀನು ಕೋರಿದಷ್ಟರ ಪ್ರತಿಫಲವನ್ನು ಕೊಡಲು ನಾವು ಸಿದ್ಧರಾಗಿದ್ದೇವೆಂದೂ ಸೂಚಿಸಿರುವನು.” ಎಂದು ಬರೆದಿರುವ ಪತ್ರವು. ಮೂರನೇಯದಾದ ಇದು, ನಾಟಕಸಂಘಾಧ್ಯಕ್ಷನು ನನಗೆ-‘ನಿರ್ದೋಷಿಯೂ, ಪವಿತ್ರಪ್ರೇಮಮಯನೂ ಆದ ರಮಾನಂದನ ವಿಷಯದಲ್ಲಿ ದೋಷವನ್ನು ಆರೋಪಿಸುವದಕ್ಕೆ ಇಷ್ಟವಿಲ್ಲದೆ, ಹಾಗೆಯೇ ಇದನ್ನು ಇರಿಸಿದ್ದು ತಮ್ಮ ಆಜ್ಞಾಪತ್ರದಂತೆ ಇವೆರಡನ್ನೂ ಕಳಿಸಿರುತ್ತೇನೆ. ದಯೆಯಿಟ್ಟು ಸ್ವೀಕರಿಸಿ, ರಮಾನಂದನಿಗೆ ಕ್ಷೇಮವನ್ನುಂಟುಮಾಡಬೇಕೆಂದು ಕೋರುವೆನು.’ ಎಂದು ಬರೆದಿರುವನು. ಹೇಗೂ ಮೊದಲೆರಡು ಪತ್ರಗಳು ರವಿವರ್ಮನ ಬರಹವಾಗಿವೆ.

ತಾರಣ:—ಮತ್ತೊಂದು ಕಾರ್ಯವೂ ಸಫಲವಾಗಿದೆ.

ಕ್ಷೇಮ:—ಅದೇನದೇನು? ಮಧುಕರಿಯ ವಿಚಾರವೋ?

ತಾರಣ:—ಅಹುದು.

ಕ್ಷೇಮ:—ಹೇಗೆ? ಏನುಮಾಡಿಕೊಂಡು ಬಂದಿರುವೆ?

ತಾರಣ:—ಮೊದಲು ಮಧುಕರಿಯ ಅಪ್ತಚೇಟಿಯನ್ನು ಧನಲೋಭದಿಂದ ವಶಪಡಿಸಿಕೊಂಡೆನು. ಬಳಿಕ ಅವಳ ಮೂಲಕ ಮಧುಕರಿಯ ಕೈಪೆಟ್ಟಿಗೆಯನ್ನು ತರಿಸಿದೆನು.

ಕ್ಷೇಮ:—ನಾನು ಕೂಡ ಸುಮುಖನಿಗೆ, ರವಿವರ್ಮಾದಿಗಳ ಕೈಪೆಟ್ಟಿಗೆಗಳನ್ನು ತರುವಂತೆ ಹೇಳಿಕಳುಹಿರುವೆನು. ಅವನೂ ಕೃತಕಾರ್ಯನಾಗಿ ಬರಬಹುದು. ಒಳ್ಳೆಯದು; ಪೆಟ್ಟಿಗೆಯನ್ನು ಇಲ್ಲಿಗೇ ತಂದಿರುತ್ತೀಯಷ್ಟೇ?

ತಾರಣ:—“ಇಲ್ಲಿಯೇ ಇದೆ. ಆದರೆ ಕೀಲನ್ನು ಮುರಿದು ಹಾಕಿರುವೆನು.”

(ಎಂದು ಕಂಕುಳಲ್ಲಿದ್ದ ಪೆಟ್ಟಿಗೆಯನ್ನು ತೆಗೆದು ಮುಂದಿಡುವನು.)

ಕ್ಷೇಮ:—(ಪೆಟ್ಟಿಗೆಯ ಕದವನ್ನು ತೆರೆದು, ಅದರಲ್ಲಿದ್ದ ವಸ್ತುಗಳನ್ನು ತೆಗೆತೆಗೆದು ನೋಡುತ್ತ ಸಂಭ್ರಮದಿಂದ) "ಭಲೆ! ಭಲೆ!! ತಾರಣ! ಭಲೆ! ಭಲೆ!! ಇನ್ನು ದ್ರೋಹವು ನಿರ್ಧರವಾಯ್ತೆಂಬುದರಲ್ಲಿ ಸಂಶಯವಿಲ್ಲ."

ತಾರಣ:— (ಕುತೂಹಲದಿಂದ) "ವಿಶೇಷವೇನಾದರೂ ತಿಳಿದಿದೆಯೆ?"

ಕ್ಷೇಮ:— ಮತ್ತೇನಾಗಬೇಕು? ನೋಡು. ರವಿವರ್ಮ, ಕಳಿಂಗ, ನಳರು ಮೂವರೂ ಬೇರೆಬೇರೆಯಾಗಿ ಮಧುಕರಿಗೆ ಬರೆದಿರುವ ಪ್ರೇಮಪತ್ರಿಕೆಗಳೂ, ಅದರಲ್ಲಿ ಮೂವರೂ ರಮಾನಂದನ ನಡತೆಯಲ್ಲಿ ಕಲಂಕವನ್ನುಂಟುಮಾಡಬೇಕೆಂದು ಮಾಡಿರುವ ಬೇರೆಬೇರೆ ಪ್ರಾರ್ಥನೆಗಳೂ ಅಡಗಿರುವವು.

ತಾರಣ:— ರಮಾನಂದನ ಮೇಲೆ ಹೊರಿಸಿದ ಮಾತ್ರಕ್ಕೆ, ಅವಳಿಗಾಗುವ ಪ್ರತಿಫಲವೇನಂತೆ?

ಕ್ಷೇಮ:— ಇದೇ ಈ ವಾಗ್ದಾನದ ಪತ್ರಿಕೆಯೇ ಹೇಳುವದು ನೋಡು—"ನಮ್ಮ ಉದ್ದೇಶವನ್ನು ಸಫಲಮಾಡಿಕೊಟ್ಟರೆ, ಯಾವಜ್ಜೀವವೂ ನಮಗೆಲ್ಲ ಅಧೀಶ್ವರಿಯಾಗಿರತಕ್ಕವಳೆಂದು ನಂಬುವದು," ಎಂದು ಬರೆಯಲ್ಪಟ್ಟಿದೆ. (ಮತ್ತೂ ಪೆಟ್ಟಿಗೆಯನ್ನು ಶೋಧಿಸಿ ಗಂಟೊಂದನ್ನು ಹೊರಗೆ ತೆಗೆದು ಬಿಚ್ಚಿ), ತಾರಣ! ತಾರಣ!! ಇದೇನೋ ಕೌತುಕವ್ಯಾಪಾರವಾಗಿದೆ! ಇದೇ ನೋಡು, ಉಪಾಧ್ಯಾಯರ ಕರವಸ್ತ್ರವು! ಇದರಲ್ಲಿ ಅವರ ಕೈತೊಡವು!! ಇದೆಲ್ಲಿ ಬಂತು? ಅವರಿಗೆ ರಾಜಸನ್ಮಾನದಿಂದ ಕೊಡಲ್ಪಟ್ಟ ಈ ಬಿರುದು ಇವಳ ಪೆಟ್ಟಿಗೆಯಲ್ಲಿ ಸೇರಲು ಕಾರಣವೇನು? ಇದೇನೋ ಪ್ರಮಾದವಾಗಿದೆ."

ತಾರಣ:— ಆರ್ಯನೇ! ಅದರಲ್ಲಿರುವ ಸಂಪುಟವನ್ನು ನೋಡಿಯಾಯಿತೇ?

ಕ್ಷೇಮ:— [ತೆಗೆದುನೋಡಿ, ಅದರಲ್ಲಿದ್ದ ಮುದ್ರಿಕೆಯನ್ನೂ, ಅದರ ಜತೆ

ಯಲ್ಲಿರಿಸಿದ್ದ ಕಾಗಜವನ್ನೂ ನೋಡಿ, ಮತ್ತೂ ಸಡಗರದಿಂದ ಮೇಲೆ ನೋಡಿ)"ಭಲೆ! ಕುಹಕರಾಜ, ಭಲೆ!! ಭಲೆ!!! ಗಟ್ಟಿಗ. ನೀನೇ ಬಲು ಗಟ್ಟಿಗನು. ಆದರೆ ನೋಡು; ನಿನ್ನ ಗತಿಗಾದ ಫಲವನ್ನು." (ತಾರಣನನ್ನು ನೋಡಿ) "ತಾರಣ! ಕೇಳು. ಇದೇ ಉಪಾಧ್ಯಾಯರ ಅಂಗುಲೀಯಕವು. ಇದೇ ರವಿವರ್ಮನು ಮಧುಕರಿಗೆ ಬರೆದ ಪತ್ರವು. ಇದರಲ್ಲಿರುವುದನ್ನು ಕೇಳು, ಹೇಳುವೆನು. " ಈ ರಾತ್ರಿ ನಿನ್ನಲ್ಲಿಗೆ ಕಳಿಂಗನ ಕೈಯಲ್ಲಿ ಒಂದು ಹಸ್ತಾಭರಣವನ್ನೂ, ಮತ್ತು ಅಂಗುಲೀಯಕವನ್ನೂ ಕಳುಹಿರುವೆನು. ಇಂದಿಗೆ ರಮಾನಂದನೆಂಬ ಹೆಸರಿನ ಕಂಟಕವು ಪರಿಹಾರವಾಗಿ, ನಮ್ಮ ಸುಖದ ದಾರಿಯು ನಿಷ್ಕಂಟಕವೆನ್ನಿಸಿತೆಂದು ತಿಳಿ. ಇವನ್ನು ಸ್ವೀಕರಿಸಿ, ಇನ್ನುಮುಂದೆ ನಮ್ಮ ವಿಷಯದಲ್ಲಿ ಸಂಪೂರ್ಣ ಕೃಪೆಯನ್ನು ತೋರಿಸಬೇಕಲ್ಲದೆ, ಮುಂದಿನ ನಮ್ಮ ಸಮಸ್ತ ಸುಖ ಸಂಪತ್ತಿಗೂ ಆಶ್ರಯಳಾಗಿರಬೇಕೆಂದು ಕೇಳಿಕೊಳ್ಳುವೆನು." ಎಂದು ಬರೆದಿರುವನು. ಇನ್ನು ಸಾಕು, ನಮ್ಮ ಕಾರ್ಯಸಿದ್ಧಿಗೆ ಬೇಕಾದ ಸಾಕ್ಷ್ಯವೆಲ್ಲವೂ ಇಲ್ಲಿಯೇ ದೊರೆತಿವೆ. ಇನ್ನು ನಡೆ. ಮನೆಗೆ ಹೋಗಿ, ಸುಮುಖನ ಆಗಮನವನ್ನು ನಿರೀಕ್ಷಿಸುವ. ( ಇಬ್ಬರೂ ಹೊರಡುವರು. )

(ಬಳಿಕ ವಿದ್ಯಾಶಾಲೆಯ ಮುಂದೆ ಸತ್ಯಸೇನನ ಪ್ರವೇಶ.)

ಸತ್ಯ:—(ವಿಸ್ಮಯದಿಂದ) 'ಆಹಾ! ಗುರುವಿಗೇ ಮಂತ್ರವನ್ನು ಪ್ರಯೋಗಿಸುವ ಮಾಯಾವಿಯು ಮತ್ತಾರಿಗೆ ಬಿಡುವನು? ವಿದ್ಯಾಶಾಲೆಯಲ್ಲಿಯೇ ಇಂತಹ ಮೋಸವ್ಯಾಪಾರವು ನಡೆದುಹೋಗಿರುವಲ್ಲಿ, ಉಳಿದ ಸ್ಥಳದಲ್ಲಿ ಹೇಳಿಕೊಳ್ಳುವದೇನು? ಆಹಾ! ಎಂತಹ ಅದ್ಭುತವಾದ ಕೆಲಸವು ನಡೆದುಹೋಗಿದೆ? ಇದಕ್ಕೆ ಕಾರಣರಾರು? ಕಾರ್ಯಕಾರಿಗಳಾರು? ಹೇಗೆ ತಿಳಿಯಬೇಕು? (ಸ್ವಲ್ಪ ಹೊತ್ತು ಚಿಂತಿಸುತ್ತಿದ್ದು ಮೇಲೆ ನೋಡಿ) ಹೇಗಾದರೂ ಇರಲಿ; ಈಗ ನಡೆಯುವ ವಿಚಾರಣೆಯಲ್ಲಿ ನಿಜಾಂಶವು ಹೊರಬೀಳಬಹುದು. ಆಗಲಿ, ಮೊದಲು ಗುರುಗಳನ್ನು ಕಾಣುವೆನು.

ಸ್ಥಾನ ೨:—ವಿದ್ಯಾಶಾಲೆ.

( ಶೀಘ್ರನಾದ ಗುರುವಿನ ಪ್ರವೇಶ. )

ಸತ್ಯ:— (ಮುಂದೆಬಂದು) 'ಪೂಜ್ಯ ! ಎಲ್ಲರನ್ನೂ ಕರೆದುಬಂದಿರುವೆನು. ರಮಾನಂದನು ಮಾತ್ರ ಗೋಚರನಾಗಿಲ್ಲ. ಉಳಿದವರೆಲ್ಲರೂ ಬರುವೆವೆಂದು ಹೊರಟಿದ್ದರು.

ಉಪಾಧ್ಯಾಯ:— ಅವನೇ ಸಿಕ್ಕಲಿಲ್ಲವೆ? ನೋಡು; ಸರ್ವಪ್ರಯತ್ನದಿಂದಲೂ ಆತನನ್ನು ಹುಡಿಕಿ, ಕರೆತರಬೇಕು.

ಕ್ಷೇಮ:— 'ನೋಡುವೆನು' (ಹೋಗುವನು)

(ರವಿವರ್ಮ, ನಳ, ಕಳಿಂಗ, ಸೌಮ್ಯ, ಸುಮುಖ, ಯುವಾನರ ಪ್ರವೇಶ.)

ಎಲ್ಲರೂ:—(ಮುಂದೆ ಬಂದು ಕೈಮುಗಿದು) 'ಪೂಜ್ಯರಿಗೆ ವಂದನೆ.'

ಉಪಾ:—(ಕುಳಿದೂಗಿ) 'ಹೂಂ! ನಿಯುತಸ್ಥಾನದಲ್ಲಿ ನಿಲ್ಲಿರಿ.'

( ಎಲ್ಲರೂ ಸರಿಯಾಗಿ ನಿಲ್ಲುವರು. )

ಉಪಾ:— ಸೌಮ್ಯನೆ! ರಮಾನಂದನೆಲ್ಲಿ? ಏಕೆ ಬರಲಿಲ್ಲ ?

ಸೌಮ್ಯ:— ಈ ದಿನ ಪ್ರಾತ:ಕಾಲದಿಂದೆಲೂ ಅವನ ಸುಳಿವೇ ಇಲ್ಲ.

ಉಪಾ:— ನಿನ್ನೆ ರಾತ್ರಿ ಎಲ್ಲಿದ್ದನು ?

ಸೌಮ್ಯ:—ಅರ್ಧರಾತ್ರಿಯವರೆಗೆ ತೋಟದಲ್ಲಿದ್ದು, ಆ ಬಳಿಕ ತಮ್ಮ ದೇವಿಯರು ಬರಹೇಳಿದುದರಿಂದ, ಅವರನ್ನು ನೋಡಲು ಹೋದನು. ಮತ್ತೆ ಬಂದು ಮಂದಿರದಲ್ಲಿಯೇ ಮಲಗಿರಬೇಕು.

ಉಪಾ:— ಸತ್ಯವಾಗಿ ಹೇಳುತ್ತಿರುವಿಯೊ ?

ಸೌಮ್ಯ:— ಸಪ್ರಮಾಣವಾಗಿ ಸತ್ಯವನ್ನೇ ಹೇಳುವೆನು.

ಉಪಾ:— ನಮ್ಮ ಮನೆಯಿಂದ ಹೊರಟುಬಂದ ಬಳಿಕಾಗಲೀ, ಅಲ್ಲಿಗೆ ಬರುವುದಕ್ಕೆ ಮೊದಲಾಗಲೀ ಮತ್ತೆಲ್ಲಿಗೂ ಹೋಗಿರಲಿಲ್ಲವೇ ?

ಸೌಮ್ಯ:—ಮತ್ತೆಲ್ಲಿಗೂ ಹೋಗಿರಲಿಲ್ಲವೆಂದು ಹೇಳಬಲ್ಲೆನು.

ಉಪಾ:— ತೋಟಕ್ಕೆ ನೀವಿಬ್ಬರೂ ಜತೆಯಾಗಿ ಹೋಗಿದ್ದಿರೋ ?

ಸೌಮ್ಯ:— ಇಲ್ಲ. ಅವನು ಮುಂದಾಗಿ ಹೋಗಿದ್ದನು. ಆಬಳಿಕ ನಾನು ಹೋಗಿ ಸೇರಿದೆನು.

ಉಪಾ:— ಅಲ್ಲಿ ಅವನು ಏನು ಮಾಡುತ್ತಿದ್ದನು? ಯಾರೊಡನಿದ್ದನು?

ಸೌಮ್ಯ:—ಒಬ್ಬನೇ ಕಲ್ಲುಜಗಲಿಯು ಮೇಲೆ ಕುಳಿತು ಆಲೋಚಿಸುತ್ತಿದ್ದನು.

ಉಪಾ:— ಏನನ್ನು ಕುರಿತು ಆಲೋಚನೆ ? ಸ್ತ್ರೀವ್ಯಾಮೋಹವನ್ನು ಕುರಿತೋ ?

ಸೌಮ್ಯ:— ಪೂಜ್ಯರೆ! ಹಿರಿಯರ ಬಾಯಿಂದ ರಮಾನಂದನ ವಿಚಾರದಲ್ಲಿ ಇಂತಹ ದೋಷಾರೋಪಣೆಯು ಬರಬಾರದು. ಆತನು ಇದಕ್ಕೆ ಗುರಿಯಾಗುವಂತಿಲ್ಲ.

ಉಪಾ:— ಹಾಗಿದ್ದರೆ ಸಂತೋಷ. ಆತನು 'ಮಧುಕರಿ' ಎಂಬ ವೇಶ್ಯೆಯನ್ನು ನೋಡಿಯಾದರೂ ಇರುವನೋ, ಇಲ್ಲವೋ?

ಸೌಮ್ಯ:— ಗುರುದೇವ! ನಿಷ್ಕಲಂಕಿಯಾದ ರಮಾನಂದನಲ್ಲಿ ಕಲಂಕವನ್ನು ಹೊರಿಸುವದಕ್ಕೂ, ಆತನ ಜೀವಿತವನ್ನೇ ಕೊನೆಗಾಣಿಸುವದಕ್ಕೂ ಹೊಂಚಿರುವ ದ್ರೋಹಿಗಳ ಹೊರತು, ಮತ್ತಾರೂ ಆತನಲ್ಲಿ ಸಂಶಯಪಡುವಂತಿಲ್ಲ. ಮಧುಕರಿಯು ಹೆಸರನ್ನಾದರೂ ಆತನು ಸರಿಯಾಗಿ ಕೇಳಿಲ್ಲ.

ಉಪಾ:— ಹಾಗಾದರೆ, ಮಧುಕರಿಯ ಪ್ರೇಮಪತ್ರಿಕೆಗಳೂ, ಭಾವಚಿತ್ರವೂ ಇವನಲ್ಲಿರಲು ಕಾರಣವೇನು?

ಸೌಮ್ಯ:— ಗುರುದೇವ! ಇದಕ್ಕೆ ಕಳಿಂಗ, ರವಿವರ್ಮರೇ ಉತ್ತರವಾದಿಗಳಾಗಬೇಕು.

ಕಳಿಂಗ, ರವಿ:— ಹಾ! ಹಾಗೆಂದರೇನು! ನಾವೇಕೆ ಉತ್ತರ

ವಾದಿಗಳಾಗಬೇಕು? ನಮಗೇನು ಗೊತ್ತು?

ಉಪಾ:— ಇರಲಿ, ರಮಾನಂದನು ನಾಟಕಶಾಲೆಗೆ ಹೋಗುತ್ತಿದ್ದುದಾದರೂ ನಿಜವಷ್ಟೆ?

ಸುಮುಖ:— ಪೂಜ್ಯರೆ! ಮೇಲೆ ಹೇಳಿರುವುದು ನಿಜವಾದಾಗಲೇ ಇದೂ ನಿಜವಾಗಬೇಕು. ಅಲ್ಲಿಯವರೆಗೆ, ಇವೆಲ್ಲವೂ ಸುಳ್ಳೇ ಸರಿ. ರಮಾನಂದನು ಅಗ್ನಿಯಂತೆ ಪರಮಪವಿತ್ರಮೂರ್ತಿ. ಆತನನ್ನು ಮತ್ತಾವ ದುರ್ವ್ಯಸನರೋಗಗಳು ಮುಟ್ಟುವಂತಿಲ್ಲ. ಇದರ ನಿಜಾಂಶವು ಪರ್ಯವಸಾನದಲ್ಲಿ ತಿಳಿದೇ ತಿಳಿವುದು.

ಉಪಾ:— ಪರ್ಯವಸಾನವು ಮತ್ತಾವಾಗ?

ಸುಮುಖ:— ರಮಾನಂದನು ಬಂದ ಬಳಿಕ.

ಉಪಾ:— ಅದೂ ಆಗಲಿ. ಆದರೆ, ಈಗಲಾದರೂ ನಿಜವನ್ನು ಹೇಳಿರಿ. ಇಲ್ಲಿ ನೀವು ಆರುಮಂದಿಗಳಲ್ಲದೆ ಮತ್ತಾರೂ ಇಲ್ಲ. ನೀವಲ್ಲದೆ ಇಲ್ಲಿಗೆ ಹೊರಗಿನವರಾರೂ ಬಂದಿಲ್ಲ. ನಿನ್ನೆ ರಾತ್ರಿಯಲ್ಲಿ ನಾನು ಇಲ್ಲಿ ನನ್ನ ಕೈಪೆಟ್ಟಿಗೆಯಲ್ಲಿಟ್ಟಿದ್ದ ಕೈಬಳೆ, ಮುದ್ರೆಗಳು ಈಗ ಇಲ್ಲದೆ ಹೋಗಿರಲು ಕಾರಣವೇನು? ಕದ್ದವರಾರು? ಕಂಡವರಾರು?

( ಸೌಮ್ಯ-ಯುವಾನರು ಮೌನದಿಂದ ತಲೆವಾಗಿ ನಿಲ್ಲುವರು )

ಸುಮುಖ:— (ಮೆಲ್ಲನೆ) ಇದರ ವಿಚಾರವು ಕಳಿಂಗ ಮತ್ತು ರವಿವರ್ಮರಿಗೆ ಸ್ವಲ್ಪಮಟ್ಟಿಗಾದರೂ ತಿಳಿದಿರಬೇಕು.

ರವಿ:— ನನಗೇನು ಗೊತ್ತು? ನಾನೇನು ಬಲ್ಲೆನು?

ಉಪಾ:— ಏನಯ್ಯಾ, ಕಳಿಂಗ! ನಿನಗೆಷ್ಟುರಮಟ್ಟಿಗೆ ತಿಳಿದಿದೆ?

ಕಳಿಂಗ:— ನಾನು ಸ್ವಲ್ಪ ಮಾತ್ರ ಬಲ್ಲೆನು.

ಉಪಾ:— ಏನು ಬಲ್ಲೆ?

ಕಳಿಂಗ:— ನಿನ್ನೆ ರಾತ್ರಿ, ನಾವು ತಮ್ಮಿಂದ ಅಪ್ಪಣೆ ಹೊಂದಿ, ಮಂದಿರಕ್ಕೆ ಹೋಗುತ್ತಿದ್ದಾಗ, ದಾರಿಯಲ್ಲಿ ರಮಾನಂದನ ಭೃತ್ಯನು

ತಲೆಯ ಮೇಲೆ ಗಂಟನ್ನು ಹೊತ್ತುಕೊಂಡು ಬರುತ್ತಿದ್ದನು. ನಾನು ಎಲ್ಲಿಗೆ 'ಹೋಗುತ್ತಿರುವೆ' ಎಂದು ಕೇಳಿದುದಕ್ಕೆ ಆತನು 'ನಮ್ಮ ಕುಮಾರನು ಅಪಮಾನಿತನಾದುದರಿಂದ, ಇಲ್ಲಿರಲೊಪ್ಪದೆ ಅರಣ್ಯ ವಾಸಕ್ಕೆ ಹೊರಟುಹೋದನು. ಆತನನ್ನು ಅನುಸರಿಸುತ್ತ ನಾನೂ ಅಲ್ಲಿಗೇ ಹೋಗುತ್ತಿರುವೆನು' ಎಂದು ಹೇಳಿ ಹೊರಟುಹೋದನು. ನನಗೆ ಇಷ್ಟುಮಾತ್ರವೇ ಗೊತ್ತಿದೆ.

ಉಪಾ:— ಹಾಗಿದ್ದರೆ, ರಮಾನಂದನು ಕದ್ದ ಕಳ್ಳನಾಗಿ ಓಡಿ ಹೋಗಿರುವನೇ?

ಸುಮುಖ:— ರಮಾನಂದನು ಕದ್ದುಹೋಗುವಷ್ಟು ತಪ್ಪಿತವನ್ನೇನೂ ಮಾಡಿಲ್ಲ.

( ಸತ್ಯಸೇನನ ಪ್ರವೇಶ. )

ಸತ್ಯ:— ಪೂಜ್ಯರೆ! ನಾನೂ ಎಲ್ಲೆಲ್ಲಿಯೋ ಹುಡುಕಿ ಸಾಕಾದೆನು. ರಮಾನಂದನು ಮಾತ್ರ ಇನ್ನೂ ಗೋಚರವಾಗಿಲ್ಲ.

ಉಪಾ:— ಹಾಗಿದ್ದರೆ ಅವನೇ ಕಳ್ಳನಾಗಿರಬೇಕು.

ಸುಮುಖ:— ಹಿರಿಯರು ಬೇಕಾದಂತೆ ಹೇಳಿಕೊಳ್ಳಬಹುದು. ರಮಾನಂದನ ಸತ್ವಪರೀಕ್ಷೆಗೆ ಇದೇ ಸುಮುಹೂರ್ತವೆಂದು ನಂಬಿ ಸುಮ್ಮನಿರುವೆವು. ಸಂಶಯನಿವಾರಣೆಗೆ ನಮ್ಮ ಜನಕನಾದ ಕ್ಷೇಮ ದರ್ಶಿಯನ್ನು ಕರೆಯಿಸಿದರೆ ಎಲ್ಲವೂ ಪ್ರತ್ಯಕ್ಷಪ್ರಮಾಣಕ್ಕೆ ಬರುವವು.

ಉಪಾ:— ಹಾಗೂ ಆಗಲಿ, ಎಲೈ ಸತ್ಯಸೇನ! ನೀನು ಈಗಲೇ ಹೋಗಿ ಕ್ಷೇಮದರ್ಶಿಯನ್ನು ಬೇಗ ಬರಹೇಳು.

ಸತ್ಯಸೇನ:— ಆಗಬಹುದು. (ಎಂದು ಹೋಗಿ, ಮತ್ತೆ ಓಡಿಬಂದು) ಪೂಜ್ಯರೇ! 'ಕ್ಷೇಮದರ್ಶಿ' ಬ್ರಾಹ್ಮಣೋತ್ತಮರು ಚಂಡಾಲಾಧಿಪನಾದ ಚಿತ್ರಕನೊಡನೆಯೂ, ಮುಖ್ಯ ಸೇವಕನಾದ ತಾರಣನೊಡನೆಯೂ ಇಲ್ಲಿಗೇ ಅತ್ಯವಸರವಾಗಿ ಬರುತ್ತಿರುವರು.

( ಸುಮುಖಾದಿಗಳು ಉತ್ಸಾಹದಿಂದ ನೋಡುವರು. ಕ್ಷೇಮದರ್ಶಿಯು

ಪ್ರವೇಶಿಸುವನು.

ಉಪಾ:—(ಕೈನೀಡಿ, ಕ್ಷೇಮದರ್ಶಿಯ ಕೈಹಿಡಿದು, ಸಮೀಪದಲ್ಲಿದ್ದ ಪೀಠದಲ್ಲಿ ಕುಳ್ಳಿರಿಸಿಕೊಂಡು) ಸುಬ್ರಾಹ್ಮಣ! ಸುಖಾಗಮನವಷ್ಟೆ!

ಕ್ಷೇಮ:—(ರವಿವರ್ಮನನ್ನು ನೋಡಿ, ತಲೆದೂಗಿ, ಮುಗುಳುನಗೆಯಿಂದ) ಸಾಧುವರೇಣ್ಯ! ದುರಾಚಾರಪರರ ದ್ರೋಹಗಳನ್ನು ಕಂಡುಹಿಡಿದು, ಕೃತಕಾರ್ಯನಾಗಿ ಬಂದಿರುವ ನನಗೆ, ತಮ್ಮ ಆಶೀರ್ವಾದ ಮತ್ತು ಭಗವದನುಗ್ರಹದಿಂದ ಸುಖಾಗಮನವೇ ಸರಿ.

(ಸೌಮ್ಯಾದಿಗಳು ಸಂತೋಷದಿಂದ ಕ್ಷೇಮದರ್ಶಿಯನ್ನೇ ನೋಡುವರು.)

ಉಪಾ:—(ಕುತೂಹಲದಿಂದ) ದ್ರೋಹವಾವುದು? ದುರಾಚಾರಿಗಳಾರು?

ಕ್ಷೇಮ:—ಆರ್ಯ! ಮೊದಲು, ನನ್ನಲ್ಲಿಗೆ ಸತ್ಯಸೇನನನ್ನು ಅಟ್ಟಿದುದಕ್ಕೆ ಉದ್ದೇಶವೇನೆಂಬುದನ್ನು ನಿರೂಪಿಸಬೇಕು.

ಉಪಾ:—ರಮಾನಂದನ ನಡೆ, ನುಡಿ (ಶೀಲಸ್ವಭಾವ) ಗಳಲ್ಲಿ ಉಂಟಾಗಿರುವ ಸಂಶಯ......

ಕ್ಷೇಮ:—(ಅಷ್ಟಕ್ಕೇ ತಡೆದು)ಏನು ಏನು! ರಮಾನಂದನಲ್ಲಿಯೂ ಸಂಶಯವೇ? ತಪನನಲ್ಲಿಯೂ ಕೃಪಣತೆಯೇ?

ಉಪಾ:—ಸಂದೇಹಕ್ಕೆ ಸಾಕಷ್ಟು ನಿದರ್ಶನಗಳು ದೊರೆತಿವೆ. ಇದೋ ನೋಡು; ಈ ಪತ್ರಗಳಿಂದಲೇ ಎಲ್ಲವೂ ತಿಳಿದು ಬರುವುವು. (ಮುಂದಿದ್ದ ಪತ್ರಗಳನ್ನು ಕ್ಷೇಮದರ್ಶಿಯ ಕೈಯ್ಗೆ ಕೊಡುವನು.)

ಕ್ಷೇಮ:—(ಪತ್ರಗಳನ್ನು ಒಮ್ಮೆ ನೋಡಿ ತಲೆದೂಗಿ ನಕ್ಕು)ಇದರಿಂದಲೇ ರಮಾನಂದನನ್ನು ದುರ್ವೃತ್ತನೆಂದು ಹೇಗೆ ಹೇಳಬಹುದು?

ಉಪಾ:—ಆತನು ಸದ್ವೃತ್ತನೇ ಆಗಿದ್ದರೆ, ಆತನ ಪೆಟ್ಟಿಗೆಯಲ್ಲಿ ಈ ಪತ್ರಗಳೂ, ಮತ್ತೊಂದು ಚಿತ್ರಪಟವೂ ಇರಲಿಕ್ಕೆ ಕಾರಣವೇನು?

ಕ್ಷೇಮ:—(ಪರಿಹಾಸದಿಂದ ನಕ್ಕು) ರಮಾನಂದನು ವಿಚಾರವಿಮರ್ಶೆಯಲ್ಲಿ ಕುಳಿತದಷ್ಟಿಗ ಸುಳಿವಾಗದಂತೆ ಆತನ ಪುಸ್ತಕವನ್ನು ಕದ್ದೊ

ಯ್ಯುವವರಿಗೆ ಆತನ ಪರೋಕ್ಷದಲ್ಲಿ, ಬೇರೆ ಬೇಗದ ಕೈಗಳಿಂದ ಆತನ ಕಿರುಮನೆಯಲ್ಲಿದ್ದ ಪೆಟ್ಟಿಗೆಗಳಲ್ಲಿ ಇವನ್ನು ಅಡಗಿಸಬಾರದೇಕೆ? ಅಲ್ಲವೇ ಕಳಿಂಗ!

ಕಳಿಂಗ:-- ಹೇಗೆ? ಅಷ್ಟು ಧೈರ್ಯಸಾಹಸಗಳು ಯಾರಿಗುಂಟು?

ಕ್ಷೇಮ:—ಮತ್ತಾರಿಗೂ ಇಲ್ಲ. ಹಿಂದೆಮುಂದೆ ನೋಡದೆ, ಅನ್ಯರ ಮೇಲೆ ಆರೋಪಿಸುವುದಕ್ಕೂ, ಅನ್ಯರ ಹೆಸರಿನಲ್ಲಿ ಅಲ್ಲದ, ಸಲ್ಲದ ಸುಳ್ಳು ಕಾಗದಗಳನ್ನು ಹುಟ್ಟಿಸುವುದಕ್ಕೂ, ಗುರುವಿಗೇ ನಾಮವಿಡುವುದಕ್ಕೂ ಯಾರು ಧೈರ್ಯ--ಸಾಹಸಗಳನ್ನುಳ್ಳವರೋ, ಅವರೇ ಇದಕ್ಕೂ ಶಕ್ತರು.

ಉಪಾ:—ಇದೆಲ್ಲವನ್ನೂ ಹೇಗೆ ತಿಳಿದೆ?

ಕ್ಷೇಮ:—ಹೇಗೆಂದರೆ--ತಿಳಿದೇ ಇದೆಯಷ್ಟೆ; 'ಕಳ್ಳನ ಜಾಡೆ ಕಳ್ಳನಿಗರಿವು.'

ಉಪಾ:—ಏನು ಏನು! ನೀನೇ ಪತ್ತೇದಾರನೇ?

ಕ್ಷೇಮ:—ದುರಹಂಕಾರಿಗಳಾದ ರವಿವರ್ಮಾದಿಗಳ ಗರ್ವಭಂಗಕ್ಕೆ ಮತ್ತಾರು ನಿಲ್ಲಬೇಕು? ನನಗಲ್ಲದೆ ಮತ್ತಾರಿಗೆ, ಇವರ ಒಳಗುಟ್ಟು ತಿಳಿಯುವುದು?

ಉಪಾ:—ಏನು? ಇವರ ಒಳಗುಟ್ಟು ಬೇರೆ ಇದೆಯೆ?

ಕ್ಷೇಮ:— ಮತ್ತೆಹೇಗೆ? ವೃಶ್ಚಿಕ ಸರ್ಪಗಳು ವಿಷವನ್ನು ಒಂದೇ ಬಾರಿಗೆ ಹೊರಗೆ ಚೆಲ್ಲುವವೆ? ಅಂತರಂಗದಲ್ಲಿ ಅಡಗಿಸಿಕೊಂಡಿದ್ದೇ ಜನವನ್ನು ಕೊಲ್ಲುವವಲ್ಲವೆ?

ಉಪಾ:—ಹಾಗಾದರೆ ರಮಾನಂದನು ನಿರ್ದೋಷಿಯೆಂದು ಹೇಳಬಲ್ಲೆಯಾ?

ಕ್ಷೇಮ:—ನಾನೇಕೆ ಹೇಳಲಿ? ದ್ರೋಹಿಗಳ ಬಾಯಿಂದಲೇ ಹೊರಡಿಸಿ, ಅವನನ್ನು ಜಗತ್ತೇ ಹೊಗಳುವಂತೆ ಮಾಡುವೆನು. ಅಷ್ಟೆ!

ಉಷಾ:—(ಆತುರದಿಂದ) 'ಹಾಗಿದ್ದರೆ, ವಿಳಂಬವೇಕೆ? ಈಗಲೇ ತೋರಿಸು; ರಮಾನಂದನ ಸತ್ಯಸಂಧತೆಯನ್ನು ಸಪ್ರಮಾಣವಾಗಿ ಪ್ರಸಿದ್ಧಪಡಿಸು.'

ಕ್ಷೇಮ:—' ಇಷ್ಟೇಕೆ ಆತುರಪಡುವಿರಿ? ಸಾವಧಾನದಿಂದ ಪರಾಮರ್ಶಿಸಬೇಕು.' (ಪಕ್ಕಕ್ಕೆ ತಿರುಗಿ) ' ಏನಯ್ಯ ರವಿವರ್ಮ! ಈಗ ಹೇಳು; ರಮಾನಂದನ ಪೆಟ್ಟಿಗೆ, ಹಾಸಿಗೆಗಳಿಗೆ ಮಧುಕರಿಯ ಪತ್ರವೂ ಭಾವಚಿತ್ರವೂ ಹೇಗೆ ಸೇರಿದುವು?

ರವಿ:—ನಾವೇನನ್ನು ಹೇಳಬಲ್ಲೆವು? ತಿಳಿಯದ ವಿಷಯವನ್ನು ಕೇಳಿದರೆ, ಉತ್ತರವನ್ನು ಕೊಡುವದು ಹೇಗೆ?

ಕ್ಷೇಮ:— ನಿಜನಿಜ! ನೀವೇನನ್ನೂ ತಿಳಿಯಿರಿ. ಬೆಕ್ಕು ಕಣ್ಣು ಮುಚ್ಚಿಕೊಂಡೇ ಹಾಲನ್ನು ಕುಡಿಯುತ್ತದೆ. ಯಾರಿಗೂ ಗೊತ್ತಾಗುವುದೇ ಇಲ್ಲ. ಪಾಪ! ಆಗಲಿ; ಮಧುಕರಿಗೆ ನೀವು ಕಾಗದಗಳನ್ನು ಬರೆಯುತ್ತಿದ್ದುದು ನಿಜವಷ್ಟೆ?

ರವಿ:—ಹಾಗೆಂದರೇನು? ಅವಳಿಗೆ ನಾವೇಕೆ ಬರೆಯುವೆವು! ಎಲ್ಲಿ ಬರೆದಿರುವೆವು?

ಕ್ಷೇಮ:—ಏಕೆ ಬರೆಯಬೇಕೋ, ಎಲ್ಲಿ ಬರೆದಿರೋ ಮುಂದೆ ಗೊತ್ತಾದೀತು. ಅದೂ ಹಾಗಿರಲಿ, ಮಧುಕರಿಯು ನಿಮಗೆ ಬರೆಯುತ್ತಿದ್ದುದಾದರೂ ನಿಜವಷ್ಟೇ?

ರವಿ:— ಎಲ್ಲವೂ ಸುಳ್ಳು.

ಕ್ಷೇಮ:—ಸುಳ್ಳೇ ಆಗಲಿ. ಮಧುಕರಿಗೆ ನೀವೇನೋ ವಾಗ್ದಾನ ಮಾಡಿರುವಿರಿ. ಅದರಂತೆ ತಕ್ಕಷ್ಟು ಅನುಕೂಲಪಡಿಸುತ್ತಲೂ ಇರುತ್ತೀರಿ. ಅಲ್ಲವೆ? ಕಳಿಂಗ! ನೀನು ಹೇಳು.

ಕಳಿಂಗ:— ಎಲ್ಲವೂ ಸುಳ್ಳು. ನಮಗಾಗದವರು ಯಾರೋ ಹೀಗೆ ಆರೋಪಿಸಿರಬೇಕು. ನಾವು ನಿರಪರಾಧಿಗಳು.

ಕ್ಷೇಮ:— ನಿಜ! ನೀವು ನಿರಪರಾಧಿಗಳು. ನಿಮ್ಮ ನಿರಪರಾಧಿ

ತ್ವದ ನಿಜಸ್ವರೂಪವನ್ನು ನಾನು ಚೆನ್ನಾಗಿ ತಿಳಿದಿರುವೆನು. ಹೇಗೂ ನೀವು ಅದನ್ನು ಬೈತಿಡಲಾರಿರಿ. ಈಗಲಾದರೂ ಹೇಳಿರಿ, ನಾಟಕಸಭಾಧ್ಯಕ್ಷನಿಗೆ ನೀವು ರಮಾನಂದನ ಹೆಸರಿನಲ್ಲಿ ಬರೆದು ಕಳಿಸಿದ್ದುದೇನೆಂದು?

ರವಿ:— ನಾವು ಬರೆದುದೆಲ್ಲಿ ? ಕಂಡವರಾರು ? ಇವೆಲ್ಲಿಯ ಆರೋಪಗಳು?

ಕ್ಷೇಮ:—ಪಾಪ! ಎಲ್ಲವೂ ಆರೋಪಗಳು. ಇರಲಿ, ಬರೆದವರು ನೀವೇ, ನೋಡಿದವನು ನಾನೇ.

ಉಪಾ—:ಅಯ್ಯ! ಇದಕ್ಕೆ ಸಾಕ್ಷ್ಯವೇನಾದರೂ ಇರುವುದೇ?

ಕ್ಷೇಮ:—'ಇವರ ಮತ್ತು ಮಧುಕರಿಯ ಕೈಪೆಟ್ಟಿಗೆಗಳನ್ನೇ ತಂದು ಮುಂದಿಟ್ಟರೆ ಸಾಕಷ್ಟೇ!' (ಕರೆಯಕಡೆ ನೋಡಿ) 'ತಾರಣ! ಪೆಟ್ಟಿಗೆಗಳನ್ನು ತೆಗೆದುಕೊಂಡು ಬಾ.'

(ತಾರಣನು ಪೆಟ್ಟಿಗೆಗಳನ್ನು ತೆಗೆದುಕೊಂಡು ಬಂದು ಮುಂದಿಡುವನು. ರವಿವರ್ಮಾದಿಗಳು ನಿಸ್ತೇಜರಾಗಿ ತಲೆವಾಗಿ ನಿಲ್ಲುವರು)

ಕ್ಷೇಮ:—(ಎದ್ದುನಿಂತು, ಪೆಟ್ಟಿಗೆಗಳ ಕದವನ್ನು ತೆಗೆದು ಕ್ರಮಕ್ರಮವಾಗಿ ಅದರಲ್ಲಿದ್ದ ಕಾಗದಗಳನ್ನು ತೆಗೆದು, ಉಪಾಧ್ಯಾಯನ ಮುಂದಿದ್ದ ಮೇಜಿನ ಮೇಲಿರಿಸಿ) ಪೂಜ್ಯನೆ! ಪರಾಮರ್ಶಿಸಬೇಕು. ಇದೇ ರವಿವರ್ಮನ ಪೆಟ್ಟಿಗೆ ಮತ್ತು ಅದರಲ್ಲಿದ್ದ ಮಧುಕರಿಯ ಪ್ರೇಮಪತ್ರಿಕೆಗಳು. ಇದೇ ಕಳಿಂಗನ ಕೈಪೆಟ್ಟಿಗೆ; ಅದರಲ್ಲಿದ್ದ ಇವನ ಇತರ ಸಹಚರರ ಮತ್ತು ಮಧುಕರಿಯ ಪತ್ರಗಳು. ಇದೇ ನಳನ ಪೆಟ್ಟಿಗೆ. ಇದರಲ್ಲಿ ಅಷ್ಟೇನೂ ಮಹತ್ವವಿರುವದಿಲ್ಲ. ಇದೇ ಈಗ ನಮಗೆ ಬೇಕಾಗಿರುವ ಮಧುಕರಿಯ ಕೈಪೆಟ್ಟಿಗೆ! ಇದರಲ್ಲಿಯೇ, ರವಿವರ್ಮನು ಮಧುಕರಿಗೆ ಬರೆದಿದ್ದ ಪ್ರಾರ್ಥನೆ, ವಾಗ್ದಾನ, ಅಭಿನಂದನ, ದುರ್ಬೋಧನ ಮೊದಲಾದ ದುರ್ವಿಷಯಗಳನ್ನು ಅಡಗಿಸಿಕೊಂಡಿರುವ ಪತ್ರಿಕೆಗಳಿರುವುವು. ಇವೆಲ್ಲವನ್ನೂ ಅವಲೋಕಿಸಿದರೆ ಇವರ ಸದ್ವೃತ್ತಿಗಳು ವಿದಿತವಾಗು

ವುವು. ಅಷ್ಟೇ ಅಲ್ಲ. ಇದರಲ್ಲಿಯೇ ಇದ್ದ ಈ ಸಂಪುಟವನ್ನು ನೋಡಬೇಕು. ಇದರಲ್ಲಿ ಇದೋ ತನ್ನ ಹಸ್ತಾಭರಣ ಮತ್ತು ಮುದ್ರಿಕೆಗಳಿವೆ. 'ಇವನ್ನು ತೆಗೆದವರಾರು? ಮಧುಕರಿಗೆ ಮುಟ್ಟಿಸಿದವರಾರು? ಎಂಬವನ್ನು ತಿಳಿಸುವ ಈ ಖಂಡಪತ್ರವನ್ನೂ ನೋಡಬೇಕು. ಇವಲ್ಲದೆ, ಇಲ್ಲಿ, ನಾಟಕಸಂಘಾಧ್ಯಕ್ಷನಿಗೆ ರವಿವರ್ಮನು ಪ್ರಾರ್ಥಿಸಿ ಬರೆದ ಪತ್ರವೂ, ರಮಾನಂದನ ಹೆಸರಿನಲ್ಲಿ ಹುಟ್ಟಿಸಿದ ಮತ್ತೊಂದು ಪತ್ರವೂ ನಾಟಕಸಂಘಾಧ್ಯಕ್ಷನು ನನಗೆ ಇವೆರಡರೊಡನೆ ಕಳಿಸಿರುವ ಇನ್ನೊಂದು ಪತ್ರವೂ ಇವೆ. ಇವೆಲ್ಲವನ್ನೂ ನೋಡಿದರೆ, ರಮಾನಂದನ ನಿರ್ದುಷ್ಟಶೀಲವೃತ್ತಗಳು ನಿರ್ಧರವಾಗುವುವು.

ಉಪಾ:— (ಎಲ್ಲವನ್ನೂ ನೋಡಿ ಎದ್ದು ನಿಂತು ಆಗ್ರಹದಿಂದ) 'ಈಗ ಹೇಳಿರಿ; ದುರ್ಮಾರ್ಗಿಗಳೆ! ಈಗಲಾದರೂ ನಿಜವನ್ನು ಹೇಳಿ, ಕ್ಷಮೆಯನ್ನು ಕೇಳಿ, ಮಾನವನ್ನುಳಿಸಿಕೊಳ್ಳಿರಿ. ಈ ತೊಡವುಗಳನ್ನು ತೆಗೆದವರಾರು? ಅವಳಿಗೆ ಮುಟ್ಟಿಸಿದವರಾರು? ಯಾವಾಗ ತೆಗೆದಿರಿ?

ರವಿ:—(ತೊದಲು ನಾಲಿಗೆಯಿಂದ) ನಾನೇ ಕಳಿಂಗನ ಕೈಯಿಂದೆಯೇ ನಿನ್ನೆ ರಾತ್ರಿ ೪ನೇ ಪ್ರಹರದಲ್ಲಿ ಬೇರೆ ಬೀಗದ ಕೈಯಿಂದಲೇ ತೆಗೆಯಿಸಿ, ಅವಳಲ್ಲಿಗೆ ಕಳಿಸಿದೆನು.

ಉಪಾ:—ರಮಾನಂದನ ಕಿರುಮನೆಯಲ್ಲಿ ಇವನ್ನು ಸೇರಿಸಿದ್ದವರಾರು?

ರವಿ:— ನಾವು ಮೂವರೂ ಸೇರಿ ಮಾಡಿದುದು.

ಕ್ಷೇಮ:—ಒಳ್ಳೆಯದು. ಕುಮಾರನೆಲ್ಲಿರುವನು? ಏನುಮಾಡಿರುತ್ತೀರಿ?

ರವಿ:— ನಾವು ತಿಳಿಯೆವು.

ಕ್ಷೇಮ:—"ಈಗಲೂ ಸುಳ್ಳೇ? ಇರಲಿ ತಿಳಿಯುವಂತೆ ಮಾಡುವೆನು."

(ತೆರೆಯ ಕಡೆ ನೋಡಿ) "ಎಲಾ ಚಿತ್ರಕ! ಇತ್ತ ಬಾ.

ಚಿತ್ರಕ:—(ಮುಂದೆ ಬಂದು ಕೈಕಟ್ಟಿ ನಿಲ್ಲುವನು.)

ಕ್ಷೇಮ:—ಅಯ್ಯ! ರಮಾನಂದನ ವಿಷಯದಲ್ಲಿ ರವಿವರ್ಮ ಕುಮಾರನೂ, ಕಳಿಂಗ, ನಳರೂ ನಿರಪರಾಧಿಗಳೆಂದು ನಾನು ಹೇಳುವೆನು ನಿನ್ನ ಅಭಿಪ್ರಾಯವೇನು?

ಚಿತ್ರಕ:—ಮಹಾಸ್ವಾಮಿ! ಹುಲಿಯನ್ನು ಸಾಧುವಾದ ಹಸುವೆಂದು ಹೇಳುವಂತೆಯೇ ಕುಮಾರನ ಪ್ರಾಣಾಪಹಾರಿಗಳಾದವರನ್ನು ನಿರಪರಾಧಿಗಳೆಂದು ಹೇಳಬಹುದು.

ಕ್ಷೇಮ:—ಹೇಗೆ ಹೇಗೆ? ಇವರಲ್ಲಿ ದೋಷವೇನು? ಏನು ಮಾಡಿದರು?

ಚಿತ್ರಕ:—ಮತ್ತೇನೂ ಇಲ್ಲ. ಗುರುಗಳ ಮನೆಯಿಂದ ಒಂಟಿಯಾಗಿ ಬರುತ್ತಿದ್ದ ಕುಮಾರನನ್ನು ಹಿಂದಿನಿಂದ ಹೊತ್ತುಕೊಂಡು ಹೋಗಿ ಮಂದಾರಣ್ಯದಲ್ಲಿ ಕಡಿದುಹಾಕಿ ಬರಬೇಕೆಂದು ಮಾತ್ರ ನನಗೆ ಕಟ್ಟುಮಾಡಿದರು.

ಕ್ಷೇಮ:—ಈ ಅಧಮಕಾರ್ಯವನ್ನು ಮಾಡಿ ಇವರಿಂದ ನೀನು ಹೊಂದಿದ ಪ್ರತಿಫಲವೇನು?

ಚಿತ್ರಕ:—ಕುಮಾರನ ಮೈಮೇಲಿದ್ದ ಉಡುವು, ತೊಡವುಗಳು ಮತ್ತು ಇಪ್ಪತ್ತು ವರಹಗಳು ನನಗೆ ಪ್ರತಿಫಲವಾಗಿ ಬಂದುವು. ಇವಲ್ಲದೆ, ಇನ್ನೂ ಹತ್ತು ವರಹಗಳನ್ನು ಕೊಡುವುದಾಗಿ ಮಾತುಕೊಟ್ಟಿದ್ದರು.

ಕ್ಷೇಮ:—ರಮಾನಂದನ ಸೇವಕನೆಲ್ಲಿ? ಏನಾದನು?

ಚಿತ್ರಕ:—ಅವನೂ ನಮ್ಮನ್ನು ಪ್ರತಿಭಟಿಸಿ, ನಮ್ಮಿಂದ ಕಾಲವಾದನು.

ಕ್ಷೇಮ:—ಹಾಗಾದರೆ ರಮಾನಂದನನ್ನೇನು ಮಾಡಿದಿರಿ? ಎಲ್ಲಿ ಬಿಟ್ಟು ಬಂದಿರಿ?

ಚಿತ್ರಕ—(ತಲೆ ತಗ್ಗಿಸಿ ನಿಲ್ಲುವನು.)

ಉಪಾ:—(ಭಯದು:ಖಗಳಿಂದ ಆಸನದಲ್ಲಿ ಕುಕ್ಕರಿಸಿಬಿದ್ದು) ಅಯ್ಯೋ! ಕಷ್ಟ ಕಷ್ಟ!! ಹಾ! ವತ್ಸಾ! ಸುಕುಮಾರ! ರಮಾನಂದ! ಎಲ್ಲಿರುವೆ? ಏನಾದೆ? ಅಕಾಲಮೃತ್ಯುವಶನಾದೆಯಾ? ಪವಿತ್ರಾಂತ:ಕರಣನಾದ ನಿನ್ನನ್ನು ಹಲವು ಬಗೆಯಾಗಿ ನಿಷ್ಠುರಪಡಿಸಿದನೇ? ಅಯ್ಯೋ! ಸುಕುಮಾರ! ಇನ್ನುಮುಂದೆ ನಿನ್ನಂತಹ ಶಿಷ್ಯರತ್ನವನ್ನು ನೋಡುವೆನೇ? ಎಲ್ಲಿರುವೆ? ರಮಾನಂದ! ಈಗ ನೀನೆಲ್ಲಿರುವೆ? ಏನು ಮಾಡುತ್ತಿರುವೆ? ಬಾ, ಮೈದೋರು! ಒಂದುಬಾರಿ ಮೈದೋರು. ಮತ್ತೊಮ್ಮೆ ನಿನ್ನ ಆ ಅಮೃತೋಪಮವಾದ ಕೋಮಲಸ್ವರದಿಂದ 'ಗುರುದೇವ' ಎಂದು ಕೂಗಿ ನನ್ನ ಕಿವಿಗೆ ಅಮೃತವನ್ನು ಸುರಿಸಲಾರೆಯಾ?(ನಿಟ್ಟುಸಿರಿಡುವನು)

(ರವಿವರ್ಮನು ಕಳಿಂಗನ ಕಡೆಗೆ ತಿರುಗಿ ನಿಟ್ಟುಸಿರಿಡುವನು.)

ಕ್ಷೇಮ:—(ಉಪಾಧ್ಯಾಯನನ್ನು ಕುರಿತು) 'ಪೂಜ್ಯರೇ! ಸಮಾಧಾನವನ್ನು ವಹಿಸಬೇಕು. ರಮಾನಂದನಿಗೇನೂ ಅಪಘಾತವಾಗಿಲ್ಲ ಭೃತ್ಯನು ಮಾತ್ರ ಹೋಗಿರುವನು. ರಮಾನಂದನ ಸೌಶೀಲ್ಯ, ಸೌಕುಮಾರ್ಯ, ಸೌಜನ್ಯಗಳನ್ನೆಲ್ಲ ನೋಡಿ, ಈ ಚಿತ್ರಕನು ಆತನನ್ನು ಕೊಲ್ಲದೆ ತನ್ನ ದುಷ್ಕಾರ್ಯಕ್ಕಾಗಿ ಆತನಲ್ಲಿ ಕ್ಷಮೆಬೇಡಿ, ಕುಮಾರನನ್ನು ಹೆಗಲಮೇಲಿರಿಸಿಕೊಂಡು ನಮ್ಮಲ್ಲಿಗೆ ಕರೆತರುತ್ತಿದ್ದನು. ಅಷ್ಟರಲ್ಲಿಯೇ ನಾನು ಸುಮುಖನ ಮುಖದಿಂದ ವಿಚಾರವನ್ನು ತಿಳಿದು ಹೀಗಾಗಬಹುದೆಂದು ಯೋಚಿಸಿ, ಮಂದಾರಣ್ಯಕ್ಕೆ ಬರುತ್ತಾ ಇವನನ್ನು ಸಂಧಿಸಿ, ವಿಚಾರವನ್ನು ತಿಳಿದು, ಕುಮಾರನನ್ನು ಮನೆಗೆ ಕರದೊಯ್ದು ಗುಪ್ತವಾಗಿರಹೇಳಿ ನಿಜಾಂಶವನ್ನು ಹೊರಗೆಡಹುಬೇಕೆಂದು ಸಂಕಲ್ಪಿಸಿ ಹೊರಟುಬಂದೆನು. ಪ್ರಯತ್ನಕ್ಕೆತಕ್ಕಂತೆ ಕಾರಣ, ಸುಮುಖ ಇವರಿಬ್ಬರಿಂದ ಎಲ್ಲವೂ ಅನುಕೂಲಸ್ಥಿತಿಗೆ ಬರುವಂತಾದುವು.

ಉಪಾ:—(ನಿಟ್ಟುಸಿರಿಟ್ಟು) ''ಕ್ಷೇಮದರ್ಶಿ! ನಿಜವಾಗಿ ಹೇಳುವೆಯಾ? ನಿಜವಾಗಿ ರಮಾನಂದನು ಜೀವಿಸಿರುವನೇ? ಏನೂ ಅಪ

ಘಾತವಾಗಿಲ್ಲವೆ? ನಂಬಲ್ಕೇ? ಹೇಳು, ಹೇಳು."

ಕ್ಷೇಮ:—ಸತ್ಯವಾಗಿ ಮತ್ತೆ ಮತ್ತೆ ಹೇಳುವೆನು. ರಮಾನಂದನು ಸುಕ್ಷೇಮಿಯಾಗಿರುವನು. ಅಲ್ಲದೆ, ತಮ್ಮ ಸಂದರ್ಶನದಲ್ಲಿ ಉತ್ಸುಕನಾಗಿಯೂ ಇರುವನು.

ಉಪಾಧ್ಯಾಯ:—(ಆನಂದ, ಕ್ರೋಧ, ವಿಷಾದಗಳಿಂದ ಎದ್ದುನಿಂತು ವಿಕೃತಸ್ವರದಲ್ಲಿ) "ಎಲೆಲೆ! ದುರ್ಮಾರ್ಗಿಗಳೇ! ಪಾಮರರೇ! ಪತಿತರೇ! ಕೊಲೆಗೇಡಿಗಳೇ! ಲಜ್ಜಾಹೀನರೇ! ಧರ್ಮಚ್ಯುತರಾದ ದುಷ್ಟ ಪಶುಗಳೇ!! ನಿಮಗಿದೊ-ಇದೊ ಧಿಕ್ಕಾರಗಳು.!!! ಪಾಪಿಗಳಾದ ನಿಮಗೆ ಈ ಬಾಹ್ಯಾಂಗದ ಸೌಮ್ಯವೇಷವೇಕೆ? ಈ ಕುಟಿಲನಟನೆಯ ವಿದ್ಯಾರ್ಥಿನಾಮಧಾರಣವೇಕೆ? ಯಾರಲ್ಲಿ ಈ ದ್ರೋಹ? ಯಾರಲ್ಲಿ ಈ ವಂಚನೆ? ಯಾರಲ್ಲಿ ಮಾತ್ಸರ್ಯ? ನಿಷ್ಠುರರೇ! ರಮಾನಂದನಲ್ಲಿ-ಆ ಪರಮಪವಿತ್ರಮೂರ್ತಿಯಲ್ಲಿ-ಆ ಜಿತೇಂದ್ರಿಯನಲ್ಲಿ-ನಿಜವಾದ ವಿದ್ಯಾರ್ಥಿಯಲ್ಲಿ-ಹಿತೈಷಿಯಾದ ಸೋದರನಲ್ಲಿ, ಈ ದ್ವೇಷವೇ? ಅವನನ್ನೇ ಕೊಲ್ಲುವ ಪ್ರಯತ್ನವೇ! ಛಿ. ಛೀ !! ಸುಡು ಸುಡು !!! ನಿಮ್ಮೀ ದುರ್ಜೀವನಕ್ಕೆ ಧಿಕ್ಕಾರ ! ನಿಮ್ಮ ನಟನೆಯಿಂದ ನಾನೂ ವಂಚಿತನಾಗಿದ್ದೆನಲ್ಲವೇ! ನಿಮ್ಮಹೇಳಿಕೆಯಿಂದ ರಮಾನಂದಾದಿಗಳನ್ನೇ ದ್ರೋಹಿಗಳೆಂದು ತಿಳಿದು ನಿಷ್ಠುರಪಡಿಸಿದೆನಲ್ಲವೇ? ನಿಮ್ಮಿಂದ ನನ್ನವಾಗ್ದಾನವೂ ವ್ಯರ್ಥವಾಗಿ, ಶ್ರೀಮಂತನೂ ವ್ಯಾಕುಲಕ್ಕೆ ಈಡಾಗುತ್ತಿದ್ದನಲ್ಲವೇ? ದುರಾತ್ಮರೇ ! ನಿಮ್ಮಿಂದ ಎಷ್ಟೊಂದು ಅನಾಹುತವಾಗುತ್ತಿದ್ದಿತು ?

ಕ್ಷೇಮ:—(ನಿಟ್ಟುಸಿರಿಟ್ಟು) 'ಪೂಜ್ಯರೇ! ಈ ನೀತಿಬಾಹಿರರಿಗೆ ಮಾನಮರ್ಯಾದೆಗಳಲ್ಲಿ ಗಮನವಿದ್ದರಲ್ಲವೇ ಈ ಮಾತುಗಳು! ತಾಯಿತಂದೆಗಳ ಮನಸ್ಸನ್ನು ನೋಯಿಸಬಾರದೆಂಬವಿಚಾರವು ಈ ಧೀವರ್ಮನಲ್ಲಿರುತ್ತಿದ್ದರೆ, ಈ ದುರ್ಮಾರ್ಗಿಗಳಾದ ಕಳಿಂಗಾದಿಗಳ ದುರ್ಬೋಧನೆಗೆ ವಶವಾಗಿ, ಹೀಗೆ ಕೆಟ್ಟುಹೋಗುತ್ತಿದ್ದನೇ? ದುಸ್ಸಹ

ವಾಸದಲ್ಲಿ ಸೇರಿ, ದುರ್ವಿಷಯರೋಗಕ್ಕೆ ಪಕ್ಕಾಗಿ, ತೃಷ್ಣಾ ಲೋಭಗಳಿಂದ ಉನ್ಮತ್ತನಂತಾಗಿ, ಮಾನ, ಧನ ಕೀರ್ತಿಗಳೆಲ್ಲಕ್ಕೂ ಶತ್ರುವಾಗಿ, ತನ್ನ ಇಹಪರ ಸೌಖ್ಯ, ಸಂಪತ್ತಿಗೂ ಸಾಧನರೂಪವಾದ ಈ ಬಾಲ್ಯತಾರುಣ್ಯಗಳನ್ನು ಈ ಗುರುಕುಲವಾಸದ ವಿದ್ಯಾಭ್ಯಾಸಗಳಿಂದ ವಂಚಿಸಿ ವ್ಯರ್ಥವೆನ್ನಿಸಿಕೊಳ್ಳುತ್ತಿದ್ದನೇ? ಇಲ್ಲ; ಹೀಗೆಂದಿಗೂ ಮಾಡುತ್ತಿರಲಿಲ್ಲ. ಅಲ್ಲಿ ಮಾವನನ್ನು ವಂಚಿಸಿ ಬಂದನು. ಇಲ್ಲಿ ತಾಯಿತಂದೆಗಳನ್ನು ವಂಚಿಸಿದನು. ಸಾಲದುದಕ್ಕೆ ನಿಮ್ಮನ್ನೂ ವಂಚಿಸಿದನು. ಕಡೆಗೆ, ಇವೆಲ್ಲಕ್ಕೂ ಅಡ್ಡಿಯಾಗಿರುವ ಕುಮಾರನನ್ನೇ ವಧಿಸಿಬಿಟ್ಟರೆ ನಿರಾತಂಕವಾಗಿ ಸುಖಿಸಬಹುದೆಂದು ಭಾವಿಸಿ, ಇಷ್ಟು ಮಾಯಾ ಜಾಲಗಳನ್ನೂ ಒಡ್ಡಿದ್ದನು. ಎಷ್ಟಾದರೇನು? ಇವರಿಗೆ ದೈವವಿಲಾಸದಿಂದ ಎಲ್ಲವೂ ಪ್ರತಿಕೂಲವೇ ಆದವು. ನಾಟಕ ಸಂಘಾಧ್ಯಕ್ಷನು ಎಚ್ಚರಿಸಲ್ಪಟ್ಟನು. ಚಂಡಾಲಾಧಿಪತಿಯು ರಮಾನಂದನ ಸತ್ಸಹವಾಸದಿಂದ ಪ್ರಜ್ಞಾವಂತನಾದನು. ವಿಷಮಯರೂಪಿಣಿಯಾದ ಮಧುಕರಿಯು ತನ್ನ ಅಕಾರ್ಯಕ್ಕಾಗಿ ರಾಜಾಜ್ಞೆಗೆ ಬದ್ಧಳಾಗತಕ್ಕವಳೆಂದು ಬಂಧನದಲ್ಲಿಡಲ್ಪಟ್ಟಳು. ಅವರ ಆರ್ಜಿತವಿತ್ತವೆಲ್ಲವೂ ರಾಜಭಂಡಾರವನ್ನು ಸೇರಿತು. ಈಗಲೀಗ ರಮಾನಂದನ ಕೀರ್ತಿಚಂದ್ರಿಕೆಯು ದಿಗಂತವಿಶ್ರಾಂತವಾಗಿ ಪ್ರಕಾಶಿಸುತ್ತಿರುವುದು.

ಇಷ್ಟಾದರೂ ಈ ಧೂರ್ತನ ದೆಸೆಯಿಂದ ಆ-ನಮ್ಮ ಶ್ರೀಮಂತನ ಮತ್ತು ಆತನ ಪತ್ನಿಯ ಅಂತಃಕರಣವು ಶೋಕಾಗ್ನಿ ಸಂತಪ್ತವಾಗುತ್ತಿರುವುದು. ಇನ್ನು ಇವನಿಗೆ ಸದ್ಬುದ್ಧಿಯುಂಟಾಗುವುದು ಹೇಗೆ? ಇದೊಂದು ಮಾತ್ರ ಚಿಂತೆಯಾಗಿದೆ.

ಉಪಾಧ್ಯಾಯ:— (ಕ್ಷೇಮದರ್ಶಿಯ ಕೈಗಳನ್ನು ಹಿಡಿದು ಆನಂದಬಾಷ್ಪವನ್ನು ಸುರಿಸುತ್ತ) "ಸುಬ್ರಹ್ಮಣ! ನಿನ್ನ 'ಕ್ಷೇಮದರ್ಶಿ' ನಾಮವು ಈಗಲೀಗ ಸಾರ್ಥಕವಾಯಿತು. ನಿನ್ನನ್ನು ಸಚಿವನನ್ನಾಗಿ ನಿಯಮಿಸಿಕೊಂಡ ನಮ್ಮ ಶ್ರೀಮಂತನ ಉದ್ದೇಶವು ಈಗಲೀಗ ಸಾಫಲ್ಯಹೊಂ

ದಿತು. ಇಂದಿನ ಸತ್ಯಪರೀಕ್ಷೆಯಲ್ಲಿ ರಮಾನಂದನು ಹೊಂದಿರುವ ಜಯವನ್ನು ಕುರಿತು ಈ ಸ್ವರ್ಣನಗರದ ಅಶೇಷ ಪ್ರಜೆಗಳಿಗೂ ತಿಳಿಯುವಂತೆ ಕುಮಾರನಿಗೆ ವಿಜಯೋತ್ಸವವನ್ನು ನೆರವೇರಿಸಬೇಕೆಂದು ಮಾಡಿರುವೆನು ಅದಕ್ಕಾಗಿ ತಕ್ಕ ಸಂಭಾರಗಳನ್ನು ಸಿದ್ಧಪಡಿಸಿ, ಮಂಟಪವನ್ನು ಅಲಂಕರಿಸಬೇಕೆಂದು ಶ್ರೀಮಂತನಿಗೆ ಈ ಸೌಮ್ಯಾದಿಗಳ ಮುಖದಿಂದ ತಿಳಿಸು. ನೀನು ಈಗಲೇ ಹೋಗಿ, ರಮಾನಂದನಿಗೆ ಮಂಗಳಸ್ನಾನ ಮಾಡಿಸಿ ಅಲಂಕರಿಸಿರು. ನಾನು ರವಿವರ್ಮಾದಿಗಳನ್ನು ಅವರ ಅಕಾರ್ಯದ ಫಲಾನುಭವಕ್ಕಾಗಿ ಇಲ್ಲಿಯ ಬಂಧನಾಗಾರದಲ್ಲಿಟ್ಟು ಸರಿಯಾದ ಕಟ್ಟುಪಾಡು ಮಾಡಿ ಬರುವೆನು " (ಸತ್ಯಸೇನನ ಕಡೆಗೆ ತಿರುಗಿ) ‹ ಅಯ್ಯಾ ಸತ್ಯಸೇನ ! ಈ ಚಿತ್ರಕನಿಗೆ ಸನ್ಮಾನವನ್ನು ಕೊಟ್ಟು ಬೀಳ್ಕೊಡು. ಮತ್ತು ಈ ರವಿವರ್ಮಾದಿಗಳನ್ನು ಇಲ್ಲಿಯ ನಿರ್ಬಂಧ ಭವನದಲ್ಲಿರಿಸಿ, ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿರು.'

ಸತ್ಯ:— (ರವಿವರ್ಮಾದಿಗಳನ್ನು ನೋಡಿ) 'ನಡೆಯಿರಪ್ಪ-ನಡೆಯಿರಿ. ಕರ್ಮಕ್ಕೆ ತಕ್ಕ ಫಲವನ್ನು ಚೆನ್ನಾಗಿ ಅನುಭವಿಸಿರಿ. 'ಪರರ ಕೇಡು--ತನ್ನ ಕೇಡು' ಎಂಬುದು ಹೇಗೆಂಬುದನ್ನು ಮನಸಮಾಡಿಕೊಂಡು ಮುಂದೆಯಾದರೂ ಎಚ್ಚತ್ತಿರಿ. ವಿಳಂಬವೇಕೆ? ನಡೆಯಿರಿ. '

ಕ್ಷೇಮ:— ಅಯ್ಯಾ! ರವಿವರ್ಮಕುಮಾರನೇ! ಪಿತ್ರಾಜ್ಞೋಲ್ಲಂಘನಕ್ಕೆ ಪ್ರಾಯಶ್ಚಿತ್ತವಿದೇ! ಭ್ರಾತೃದ್ರೋಹ, ಮಿತ್ರದ್ರೋಹಗಳಿಗೆ ಪ್ರಾಯಶ್ಚಿತ್ತವಾಗಿ ನಿರಂತರವೂ ಅಪಕೀರ್ತಿ ಪರಿತಾಪಗಳಿರಡೇ !! ಇನ್ನು ನಿನ್ನ ದರ್ಪವು ಯಾವ ಕೆಲಸಕ್ಕೂ ಬರಲಾರದು. ಮುಂದೆಯಾದರೂ ಅವಿಧೇಯರಾಗಿರದೆ, ವಿಷಯಲಂಪಟಕ್ಕೆ ಬಲಿಯಾಗದೆ, ಪ್ರಜ್ಞೆಯನ್ನು ಅಭಿವೃದ್ಧಿಗೆ ತರುವ ಪ್ರಯತ್ನಪಡಿರಿ. ಹಿತೈಷಿಗಳ ಸದ್ಬೋಧೆಗೆ ಕಿವಿಗೊಟ್ಟು ಅದರಂತೆ ನಡೆಯಿರಿ. ಕೇಳಿರಿ ಹೇಳುವೆನು--

ಕಂದ|| ಹಿತರುಂ ಪರಹಿತರುಂ ಪಂ |
ಡಿತರು ಮೆನಿಪ್ಪವರ ಮಾತುಮಂ ಕೇಳದದು ||

ಮರ್ಣಿಯುಪ್ಪವಂಗವಶ್ಯಂ |
ಸತತಂ ಕೇಡಾಗದಿರದು......... ||

ಈ ಆರ್ಯರ ಹಿತವನ್ನು ಚನ್ನಾಗಿ ನೆನಪಿನಲ್ಲಿಟ್ಟು ನಡೆಯಿರಿ. (ಉಪಾಧ್ಯಾಯರ ಕಡೆಗೆ ತಿರುಗಿ) 'ಆರ್ಯರೆ! ನಾನಿನ್ನು ಬರುವೆನು.

ಉಪಾ:— ಹೊರಡಬಹುದು. ಎಲ್ಲವನ್ನೂ ಜಾಗ್ರತೆಪಡಿಸಿರಿ.

(ಕ್ಷೇಮದರ್ಶಿಯು ಸೌಮ್ಯ, ಸುಮುಖ, ಯುವಾನರೊಡನೆ ಹೊರಡುವನು.)

ಉಪಾ: – ಏನಯ್ಯಾ! ರವಿವರ್ಮ! ಈಗೇನು ಹೇಳುವೆ? ಇಷ್ಟನ್ನೂ ಮಾಡಿದೆಯೇಕೆ?

ರವಿ:— (ದುಗುಡದಿಂದ) 'ಮಹನೀಯರೇ! ಇಷ್ಟನ್ನೂ ಮಾಡಿದುದೇಕೆಂದರೆ ಏನು ಹೇಳಲಿ? ನನ್ನ ಬಾಲ್ಯಶಿಕ್ಷಣೆಯ ಅಭಾವ, ದುಸ್ಸಹವಾಸ, ವಿಷಯಲಾಲಸೆಗಳ ಫಲವೆಂದು ಮಾತ್ರ ಹೇಳುವೆನು, ಮತ್ತೆನನ್ನೂ ಹೇಳಲಾರೆನು.'

ಉಪಾ:— ಈಗೇನು ಮಾಡಲಿ! ನ್ಯಾಯಶಾಸನವನ್ನೇ ಅನುಸರಿಸಿರುವ ನಾನು ಈಗ ನಿನ್ನನ್ನು ಇವರೊಡನೆ ನಿರ್ಬಂಧದಲ್ಲಿಡಲೇಬೇಕಾಗಿದೆ. ಹಾಗೆ ನಿರ್ಬಂಧದಲ್ಲಿಡುವುದು, ನಿಮ್ಮ ತಾಯಿತಂದೆಗಳ ಅಂತಸ್ತಾಪಕ್ಕೆ ಕಾರಣವಾಗುತ್ತದೆ. ಬಿಟ್ಟರೆ ನ್ಯಾಯಕ್ಕೂ ಶಾಸ್ತ್ರಕ್ಕೂ ನಮ್ಮ ಉತ್ತರವಾದಿತ್ವಕ್ಕೂ ಲಾಘವವುಂಟಾಗುತ್ತದೆ.

ರವಿ:— ಗುರುಗಳೆ! ಹೆಚ್ಚಾಗಿ ಹೇಳಲಾರೆನು. ನಿರ್ಬಂಧದಲ್ಲಿರಲು ಸಿದ್ಧನಾಗಿರುವೆನು. ನ್ಯಾಯಶಾಸ್ತ್ರವನ್ನನುಸರಿಸಿ ಶಿಕ್ಷಿಸಲು ಹಿಂದೆಗೆಯಬಾರದೆಂದು ಕೋರುವೆನು. (ಸತ್ಯಸೇನನ ಕಡೆಗೆ ತಿರುಗಿ) ಅಯ್ಯಾ! ನಡೆ; ನಿನ್ನ ಕೆಲಸವನ್ನು ನಿರ್ವಹಿಸು. ನಾವಿದೊ ಸಿದ್ಧರಾಗಿರುತ್ತೇವೆ.

(ಸತ್ಯ,-ಚಿತ್ರಕ, ರವಿವರ್ಮ, ನಳ, ಕಳಿಂಗರೊಡನೆ ಹೊರಟುಹೋಗುವನು)

(ಆತುರದಿಂದ ಓಡಿಬರುವ ಸುಮುಖನ ಪ್ರವೇಶ)

ಸುಮುಖ:— 'ಗುರುದೇವರಿಗೆ ವಿಜಯವು' (ಕೈಮುಗಿಯುವನು)

ಉಪಾ:— (ಕೌತುಕದಿಂದ) ' ಇದೇನಿದು? ಸುಮುಖ! ಇಷ್ಟು

ಆತುರವೇನು? '

ಸುಮುಖಿ:— 'ಇದೊ ಕುಮಾರನು ಸನ್ನಿಧಾನಕ್ಕೆ ಈ ವಿಜ್ಞಾಪನಪತ್ರಿಕೆಯನ್ನು ಸಮರ್ಪಿಸಿರುವನು (ಎಂದು ಪತ್ರಿಕೆಯನ್ನು ಕೈಯಲ್ಲಿ ಕೊಡಹೋಗುವನು)

ಉಮಾ:— ಏನೆಂದು ಬರೆದಿರುವನು? ಓದಿಹೇಳು.

ಸುಮುಖಿ:— 'ಅಪ್ಪಣೆ' (ಹೀಗೆ ಓದುವನು)

“ ಪರಮಪೂಜ್ಯರಾದ ಗುರುದೇವರ ಚರಣಾರವಿಂದಗಳಲ್ಲಿ, ವಿಧೇಯನಾದ ಬಾಲಕನ ವಂದನೆ, ನಿವೇದನಗಳು. ನಮ್ಮ ಹಿತೈಷಿಯೂ, ಪೂಜ್ಯನೂ, ಬಾಲ್ಯಶಿಕ್ಷಕನೂ ಆದ ಕ್ಷೇಮದರ್ಶಿ-ಸಚಿವಾಗ್ರಣಿಯ ಮುಖದಿಂದ ನಿರೂಪಿಸಿದ ವಿಚಾರಗಳನ್ನು ತಿಳಿದೆನು. ನನ್ನ ವಿಷಯದಲ್ಲುಂಟಾದ ಅನುಗ್ರಹಕ್ಕಾಗಿ ಸಂತೋಷಪಡುತ್ತಿರುವೆನಾದರೂ ನನ್ನ ಅಗ್ರಜನೂ, ಪ್ರೀತಿಪಾತ್ರನೂ ಕುಲೋದ್ಧಾರಕನೂ ಆಗಬೇಕಾಗಿರುವ ರವಿವರ್ಮನಲ್ಲಿಯೂ ಆತನ ಸಂಗಡಿಗರಲ್ಲಿಯೂ ತೋರಿಸಿದ ಕಾಠಿಣ್ಯಕ್ಕಾಗಿ ನಾನು ಅತ್ಯಂತ ವಿಷಾದಪಡುತ್ತಿರುವೆನು. ಅವರು ನನಗೆ ಕೆಡುಕನ್ನು ಮಾಡಬೇಕೆಂದು ಪ್ರಯತ್ನಪಟ್ಟರಾದರೂ, ನನಗೆ ಯಾವ ಕೆಡುಕೂ ಉಂಟಾಗಲಿಲ್ಲ. ಅವರಿಂದ ನನಗೆ ಮತ್ತೂ ಅನುಕೂಲವೇ ಉಂಟಾಗಿರುವುದು. ಮತ್ತು ಯಾವುದೇ ಒಂದು ಬಹುಮಾನಕ್ಕಾಗಲೀ ಯಾರು ಅಗ್ರಸ್ಥಾನವನ್ನು ವಹಿಸಬೇಕಾಗಿರುವುದೋ ಅಂತಹ ನನಗೆ ಸನ್ಮಾನನೀಯನಾದ ರವಿವರ್ಮನನ್ನು ಆತನ ಸಹಚರರೊಡನೆ ನಿರ್ಬಂಧದಲ್ಲಿಡುವಾಗ ನಾನು ಉತ್ಸವದಲ್ಲಿ ಹೇಗೆ ಮೆರೆಯಬಲ್ಲೆನು? ಇಷ್ಟು ಕಠಿಣವಾದ ಶಿಕ್ಷೆಗೆ ನಾನು ಅರ್ಹನಾಗಿಲ್ಲವಾದುದರಿಂದ, ಅವರನ್ನು ಮುಂದಿಟ್ಟು ಮಾಡುವ ಉತ್ಸವಕಾರ್ಯಕ್ಕಲ್ಲದೆ, ಮತ್ತೆ ನನ್ನನ್ನು ಮಾತ್ರವೇ ಬೇರೆಯಾಗಿ ಮೆರೆಯಿಸಬಾರದೆಂದೂ, ಆ ನನ್ನ ಅಗ್ರಜನಿಗೆ ಯಾವ ಶಿಕ್ಷೆಯು ವಿಧಿಸಲ್ಪಟ್ಟಿರುವುದೋ, ಅದೇ ಶಿಕ್ಷೆಯಲ್ಲಿ ನನ್ನನ್ನೂ ಭಾಗಿಯಾಗಿರುವಂತೆ ಮಾಡಬೇಕೆಂದೂ

ಸನ್ನಿಧಾನದಲ್ಲಿ ಸವಿನಯವಾಗಿ ಪ್ರಾರ್ಥಿಸುತ್ತಿರುವ ಬಾಲಕ, ರಮಾನಂದ. "

ಉಪಾಧ್ಯಾಯ:··· (ಎದ್ದು ನಿಂತು ಸಂಭ್ರಮದಿಂದ) ಭಾಪು! ಭಾಪು!! ಸುಕುಮಾರನೆ! ಭಾಪು!!! ನೀನೇ ಸತ್ಪುತ್ರನು. ನೀನೇ ನಿಜವಾದ ವಿದ್ಯಾರ್ಥಿಯು. ನೀನೇ ಸನ್ಮಿತ್ರನು; ನೈಜಸೋದರನು; ಕುಲರಂಜನನು. (ಸುಮುಖನ ಕಡೆಗೆ ತಿರುಗಿ) "ಅಯ್ಯಾ! ಇದೇ ಪತ್ರವನ್ನೇ ರವಿವರ್ಮನಿಗೆ ತೋರಿಸಿ, ಆತನನ್ನೂ ನಯನೀತಿಗಳಿಂದ ಸಮಾಧಾನಪಡಿಸಿ, ನೀನು ಅವರನ್ನು ಕರೆದುಕೊಂಡು ಬಾ. ನಾನಿನ್ನು ನನ್ನ ಪತ್ನಿಗೆ ಇಂದಿನ ಶುಭವಾರ್ತೆಯನ್ನು ತಿಳಿಸಿ, ಆಕೆಯೊಡಗೊಂಡು ಉತ್ಸವಕ್ಕೆ ನಡೆತರುವೆನು,

(ಇಬ್ಬರೂ ಹೊರಡುವರು)

ಸ್ಥಾನ ೨:— ಕಲ್ಯಾಣ ಮಂಟಪ.

(ಕ್ಷೇಮದರ್ಶಿ ಮತ್ತು ಸಾಮಾಜಿಕರೊಡನೆ ಪೀಠಸ್ಥನಾದ ಶ್ರೀಮಂತನ ಪ್ರವೇಶ.)

ಶ್ರೀಮಂತ:— ಆರ್ಯನೆ! ನಿನ್ನ ಕಾರ್ಯದಕ್ಷತೆಯಿಂದ ನನ್ನ ಶೋಕಾಂಧಕಾರವು ನಿವಾರಣೆಯಾಯಿತು. ಆತ್ಮಾನಂದಕ್ಕೆ ಸಾಧನವೂ ಮಾಡಲ್ಪಟ್ಟಿತು. ಇನ್ನು ಭಗವಂತನು ರವಿವರ್ಮನನ್ನೂ ದಾರಿಗೆ ಬರುವಂತೆ ಮಾಡಿದರೆ, ನನ್ನ ಅದೃಷ್ಟಕ್ಕೆ ತುದಿಮೊದಲೇ ಇಲ್ಲವು.

ಕ್ಷೇಮ:— ಭಗವತ್ಕೃಪೆಯು ಪರಿಪೂರ್ಣವಾಗಿರುವುದು. ರವಿವರ್ಮಕುಮಾರನೂ ಸನ್ಮಾರ್ಗಗಾಮಿಯಾಗುವನು. ಸಂದೇಹವಿಲ್ಲ.

ಸೌಮ್ಯ:—(ಪ್ರವೇಶಿಸಿ) ಗುರುಗಳು ಪತ್ನೀಸಮೇತರಾಗಿ ಬಂದು ಅಂತಃಪುರದ ಬಳಿಯಲ್ಲಿ ದೇವಿಯವರ ಆತಿಥ್ಯವನ್ನು ಸ್ವೀಕರಿಸುತ್ತಿರುವರು.

ಶ್ರೀಮಂತ:— ಹಾಗಿದ್ದರೆ ಪೂಜ್ಯರನ್ನು ಇಲ್ಲಿಗೆ ಬರಬೇಕೆಂದು ತಿಳಿಸಿ, ನೀನು ಕುಮಾರನನ್ನು ಜಾಗ್ರತೆಯಾಗಿ ಕರೆದುಕೊಂಡು ಬಾ.

[ಸೌಮ್ಯನು ಹೊರಟುಹೋಗುವನು]

( ವಿದ್ಯಾವಾಗೀಶನ ಪ್ರವೇಶ )

ಶ್ರೀಮಂತ:- ಸಾಧುವರೇಣ್ಯರಿಗೆ ಸುಖಾಗಮನವು; ವಿಶ್ರಮಿಸಿಕೊಳ್ಳಬೇಕಾಗಿ ಕೋರಿಕೆ.

ವಿದ್ಯಾ:—(ಪೀಠದಲ್ಲಿ ಕುಳಿತು) ಅಯ್ಯ! ರಮಾನಂದನನ್ನು ಪುತ್ರನನ್ನಾಗಿ ಪಡೆದ ನೀನೇ ಸುಕೃತಶಾಲಿ. ರವಿವರ್ಮನಿಗಾಗಿ ನೀನು ದುಃಖಿಸಬೇಕಾಗಿಲ್ಲ. ರಮಾನಂದನ ಸೌಶೀಲ್ಯಕ್ಕೆ ತಕ್ಕ ಫಲವಾಗಿರುವ ವಿಜಯಾಭ್ಯುದಯದಿಂದಲೂ, ಆತನ ಕ್ಷಮಾಗುಣದಿಂದಲೂ, ರವಿವರ್ಮನು ಈಗಲೀಗ ಪರಿಪಕ್ವಸ್ಥಿತಿಗೆ ಬಂದಿರುವನು. ಆತನನ್ನು ಆತನ ದುಷ್ಕಾರ್ಯಕ್ಕಾಗಿ ಬಂಧನದಲ್ಲಿರಿಸಿದ್ದೇನಾದರೂ ರಮಾನಂದನ ಉಚ್ಚಭಾವನೆಗೆ ನಿರೋಧವಾಗಿ ನಡೆಯಿಸಲಾರದೆ, ಅವನನ್ನು ಅವನ ಸಂಗಡಿಗರೊಡನೆ ಇಲ್ಲಿಗೆ ಕರೆತರುವಂತೆ ಸುಮುಖನಿಗೆ ಹೇಳಿ ಬಂದಿರುವೆನು. ಇಷ್ಟರಲ್ಲಿ ಅವರೂ ಬರಬಹುದು. ಎಲ್ಲಿ? ರಮಾನಂದನೆಲ್ಲಿ?

(ರಮಾನಂದನ ಕೈಹಿಡಿದು ರವಿವರ್ಮ ಸುಮುಖರೂ, ಹಿಂದೆ ಮುಂದೆ ಯುವಾನ್, ನಾಮ್ರ, ನಳ, ಕಳಿಂಗರೂ ಪ್ರವೇಶಿಸುವರು.)

ಕ್ಷೇಮ:—(ಸಂಭ್ರಮದಿಂದ) ಈಗಲೀಗ ನಮ್ಮ ಪ್ರಭುವು ಪುತ್ರವಂತನೆನ್ನಿಸಿದನು. ಬನ್ನಿರಿ, ಕುಮಾರಶೇಖರರೆ! ಇತ್ತ ಒಂದು ಗುರುಜನರನ್ನು ವಂದಿಸಿರಿ.

ರವಿ:—(ಮುಂದೆಬಂದು ವಿದ್ಯಾವಾಗೀಶ, ಶ್ರೀಮಂತ, ಕ್ಷೇಮದರ್ಶಿಗಳ ಮುಂದೆ ದೀರ್ಘಪ್ರಣಾಮ ಮಾಡಿ, ವಿನಯದಿಂದ) ಪೂಜ್ಯಪಾದರಿಗೆ ಮಹಾಪರಾಧಿಯಾದ ಈ ಅಧಮನು ಇದೇ ವಂದಿಸುವನು. ಕೃಪಾಕಟಾಕ್ಷದಿಂದ ಕ್ಷಮಿಸಿ, ಅನುಗ್ರಹಿಸಬೇಕು.

ಶ್ರೀಮಂತ:—(ಕಣ್ಣೀರು ಸುರಿಸುತ್ತ) ವತ್ಸನೆ! ನಿನಗೆ ಇಷ್ಟರ ಪ್ರಜ್ಞೆಯುಂಟಾಗುವುದೆಂದು ತಿಳಿದಿರಲಿಲ್ಲ. ಇದೆಲ್ಲವೂ ಭಗವತಿಯ ಅನುಗ್ರಹವು. ಈಗಲೀಗ ನಿನ್ನ ತಾಯಿಯು ನಿಶ್ಚಿಂತಳಾದಳು. ದೇವರು

ನಿನ್ನನ್ನು ಮನ್ನಿಸಲಿ.

ಕ್ಷೇಮ-ವಿದ್ಯಾ:— (ರವಿವರ್ಮನ ಕೈಹಿಡಿದು) ಅಯ್ಯ! ಈ ವರೆಗೆ ನಡೆದುದಕ್ಕಾಗಿ ನೀನಿನ್ನು ವೃಥಾ ವ್ಯಥೆಪಡಬಾರದು. ಇದೆಲ್ಲವೂ ಸಹವಾಸ, ಅಭ್ಯಾಸ, ಶಿಕ್ಷಣೆಗಳ ನಿಜಸ್ವರೂಪವನ್ನು ನಿದರ್ಶನಕ್ಕೆ ತರಬೇಕೆಂಬ ಭಗವದ್ವಿಲಾಸವಾಗಿತ್ತೆಂದು ತಿಳಿದು, ಮುಂದೆ ಕರ್ತವ್ಯಜಾಗ್ರತನಾಗಿರಬೇಕೆಂಬುದೇ ನಾವು ನಿನಗೆ ಹೇಳುವ ನೀತಿ.

ರಮಾ:— ( ಮುಂದೆಬಂದು ) ಸಾಕ್ಷಾತ್ಪರಮಾತ್ಮಸ್ವರೂಪರಾದ ಗುರುಜನರಿಗೆ ಬಾಲಕನ ದಂಡಪ್ರಣಾಮಗಳು.

ಶ್ರೀಮಂತ-ವಿದ್ಯಾ:— ಮಗುವೆ! ಅಭ್ಯುದಿತನಾಗುವೆ; ಎಲ್ಲಿ ಕಲ್ಯಾಣಮಂಟಪವನ್ನೇರು.

ರಮಾ:— ' ಕ್ಷಮಿಸಬೇಕು; ಯಾವ ಪುಣ್ಯವತಿಯ ಪ್ರೀತಿ, ವಿಶ್ವಾಸ, ವಾತ್ಸಲ್ಯ, ಕ್ಷಮಾದಕ್ಷತೆಗಳಿಂದಲೇ ನನಗೆ ಇಂದಿನ ಸುಯೋಗವುಂಟಾಯಿತೋ, ಅಂತಹ ಪರದೇವತೆಯೂ, ಸಮಸ್ತ ಸುಖಸಂಪತ್ತಿಗೂ ಕಾರಣಸ್ವರೂಪಿಣಿಯೂ ಆದ ಮಾತೃದೈವವನ್ನೂ, ಮತ್ತು ಮಾತೃವತ್ ನನ್ನ ಸನ್ಮಾರ್ಗಸಾಧನೆಗೆ ಆಶ್ರಯದಾತೆಯಾದ ಗುರುಪತ್ನಿಯನ್ನೂ ವಂದಿಸಿ, ಅವರ ಸಮಕ್ಷದಲ್ಲಿ ಭ್ರಾತೃಸಹಾಯದಿಂದ ಉತ್ಸವವನ್ನು ನೆರವೇರಿಸುವಂತೆ ಅನುಗ್ರಹಿಸಬೇಕಾಗಿ ಕೋರುವೆನು.'

ವಿದ್ಯಾ:— ಸಾಧು! ಸಾಧು!! ಕುಮಾರ! ನಿನ್ನೀ ಸಂಕಲ್ಪವು ಪರಮ ಸಾಧು!!! ನಿನ್ನಿಷ್ಟದಂತೆಯೇ ಆಗಲಿ. ( ಪಕ್ಕಕ್ಕೆ ತಿರುಗಿ )— " ಅಯ್ಯ-ಕ್ಷೇಮದರ್ಶಿ! ಅಂತಃಪುರದಲ್ಲಿ ವಸುಮತೀದೇವಿಯೊಡನೆ ನನ್ನ ಭಾರ್ಯೆಯು ಮಾತನಾಡುತ್ತಿರುವಳು. ಇಬ್ಬರಿಗೂ ಕುಮಾರನ ಇಷ್ಟಾರ್ಥವನ್ನು ತಿಳಿಸಿ, ಅವರೇನು ಹೇಳುವರೋ ತಿಳಿದು ಬರುತ್ತೀಯಾ? "

(ಕ್ಷೇಮದರ್ಶಿಯು ಸಂತೋಷದಿಂದ ಹೋಗಿ, ಮತ್ತೆ ಬಂದು):— ದೇವಿಯರಿಬ್ಬರೂ ಕುಮಾರನ ಉತ್ಸವವನ್ನು ನೋಡಲು ಬಂದಿರುವರು.

[ಅವಕುಂಠನವತಿಯರಾಗಿ ವಸುಮತೀದೇವಿ, ಗುರುಪತ್ನಿಯರ ಪ್ರವೇಶ.]

ಶ್ರೀಮಂತ:— **ಪೂಜ್ಯಳೊಡನೆ ದೇವಿಯೂ ಇತ್ತ ಬರಬಹುದು.**

[ಇಬ್ಬರೂ ವಿದ್ಯಾವಾಗೀಶ ಶ್ರೀಮಂತರ ಹಿಂದೆ ನಿಲ್ಲುವರು.]

ವಿದ್ಯಾ:— 'ಸುಕುಮಾರರೆ! ಇನ್ನು ಏಳಿರಿ; ಕಲ್ಯಾಣಮಂಟಪವನ್ನಲಂಕರಿಸಿರಿ.'

ರವಿ-ರಮಾ:— (ಇಬ್ಬರೂ ಬಂದು ವಸುಮತಿ ಮತ್ತು ಗುರುಪತ್ನಿಯರಿಗೆ ನಮಸ್ಕರಿಸಿ ವಿನಯದಿಂದ)-'ಪೂಜ್ಯಮಾತೆಯರೆ! ಪುತ್ರರನ್ನು ಆಶೀರ್ವದಿಸಿ, ಅಪರಾಧಗಳನ್ನು ಕ್ಷಮಿಸಿ ಅನುಗ್ರಹಿಸಬೇಕು'

ವಸು-ಗುರುಪತ್ನಿ:— ''ಭಗವತಿಯು ಅನುಗ್ರಹಿಸಲಿ. ಇನ್ನು ಗುರುಜನರ ಆಜ್ಞೆಯನ್ನು ನೆರವೇರಿಸಿರಿ''

ರಮಾ-ರವಿ:--ಅನುಗ್ರಹೀತರಾದೆವು. [ಇಬ್ಬರೂ ಕೈಹಿಡಿದುಕೊಂಡು ಬಂದು, ಸುಮುಖಾದಿಗಳ ಮುಖವನ್ನು ನೋಡಿ ನಸುನಗುತ್ತ ಮಂಟಪವನ್ನು ಪ್ರವೇಶಿಸುವರು. ಸುಮುಖ, ಯುವಾನ, ಸೌಮ್ಯರು ಮುಂದೆ ಬಂದು ರಮಾನಂದನ ಬಲಗಡೆಯಲ್ಲಿನಿಂತು— ''ಸುಕುಮಾರನೆ-ಸನ್ಮಿತ್ರನೆ ! ಈಗಲೀಗ ನಾವೆಲ್ಲರೂ ಪೂಗವೃಕ್ಷವನ್ನಾಶ್ರಯಿಸಿ, ಮನೋರಂಜಕರೆನ್ನಿಸಿದ ನಾಗವಲ್ಲಿಗಳಾದೆವು. ಭಗವಂತನು ಇಂದಿನ ಅಭ್ಯುದಯವನ್ನು ಉತ್ತರೋತ್ತರಾಭಿವೃದ್ಧಿಯಿಂದ ಭದ್ರಂಕರವಾಗಿರುವಂತೆ ಅನುಗ್ರಹಿಸಬೇಕು.''

ಕಳಿಂಗ-ನಳ:—[ರಮಾನಂದನ ಮುಂದೆನಿಂತು ವಿನಯದಿಂದ] 'ವಿದ್ಯಾರ್ಥಿಕುಲಮಂಡನನೆ-ರಮಾನಂದಕುಮಾರನೆ! ಮಹಾಪರಾಧಿಗಳಾದ ನಮ್ಮನ್ನು ಕ್ಷಮಿಸಿ, ನಿನ್ನ ಸತ್ಸಂಗತಿಯಿಂದ ಕೃತಾರ್ಥರೆನ್ನಿಸುವಂತೆ ಕೃಪೆಮಾಡು.'

ರಮಾನಂದ:—(ತಲೆದೂಗಿ, ಕೈನೀಡಿ) ಸುಹೃದರೇ ! ಭಗವಂತನು ಕೃಪೆಮಾಡಿರುವನು.

ವಿದ್ಯಾ:— (ಎದ್ದುಬಂದು) ವತ್ಸ! ರಮಾನಂದ ! ವಿದ್ಯಾರ್ಥಿಗೆ ಅತ್ಯವಶ್ಯಕವಾದ ಸುಬ್ರಹ್ಮಚರ್ಯೆಯಲ್ಲಿಯೂ, ಸತ್ಯಸಂಧತೆಯಲ್ಲಿಯೂ

ನೀನು ಅಸಮಾನನೆನ್ನಿಸಿ, ದಿಗ್ವಿಜಯ ಹೊಂದಿದೆ. ನಿನ್ನೀ ನಿರ್ಮಲವಾದ ಯಶಶ್ಚಂದ್ರಿಕೆಯಿಂದ ಮುಂದಿನ ವಿದ್ಯಾರ್ಥಿಕುಲವೆಲ್ಲವನ್ನೂ ಸುಜ್ಞಾನಮಾರ್ಗದಲ್ಲಿ ನೆಲೆಗೊಳಿಸಿ, ಪ್ರಕಾಶಪಡಿಸುವ ಮಾರ್ಗದರ್ಶಕನಾದೆ. ಮತ್ತು,—

ಕಂದ॥ “ ಅರಿಗಳ ನೆರಗಿಪುದೆ ಕರಾ ।
ಭರಣಂ ನೀತಿಗಳನರಿದುಕೊಳ್ವುದೆ ಕರ್ಣಾ ॥
ಭರಣಂ ಕೊಡುವುದೆ ಹಸ್ತಾ ।
ಭರಣಂ ಸ್ವೈರಣೆಯದಿರಲು ಸರ್ವಾಭರಣಂ ॥ ”

ಎಂಬ ನೀತಿಯಂತೆ ದುಷ್ಟನಿಗ್ರಹ, ಶಿಷ್ಟಪರಿಪಾಲನ ಮೊದಲಾದ ಸಮಸ್ತಾಭರಣಗಳಿಂದಲೂ ಕೂಡಿರುವ ನಿನಗೆ ನನ್ನ ಅಭಿನಂದನರೂಪವಾದ “ಶಿಷ್ಯಮಣಿ” ಎಂಬ ಇದೊಂದು ತೊಡವನ್ನು ಕೊಡುವೆನು; ಸ್ವೀಕರಿಸು. ನಿನ್ನ ಸದ್ವರ್ತನೆಯೊಂದೇ ನಮಗೆ ಗುರುಕಾಣಿಕೆಯಾಗಿರಲಿ.

ರಮಾ:— ಅನುಗ್ರಹೀತನಾದೆನು.

ಶ್ರೀಮಂತ:— ಸುಕುಮಾರನೆ-ರಮಾನಂದನೆ! ನಿನ್ನಿಂದ ನಾವಿಂದು ಸತ್ಪುತ್ರವಂತರೆನ್ನಿಸಿದೆವು.

ರಮಾ:— ಎಲ್ಲವೂ ತಮ್ಮ ಪರತರಾನುಗ್ರಹದ ಪ್ರಭಾವವು.

ಕ್ಷೇಮ:— ಸುಕುಮಾರನೆ! ಇನ್ನು ನಮ್ಮಿಂದ ನಿಮಗಾಗಬೇಕಾದುದೇನು ?

ರಮಾ:— ಪೂಜ್ಯರೆ! ತಮ್ಮ ಕೃಪೆಯಿಂದ ಅಹಿತರೇ ಹಿತಚಿಂತಕರಾದರು; ಅಪತ್ಸೂಚಕವಾಗಿದ್ದ ವಿಘ್ನಗಳೇ ಅಭ್ಯುದಯ ಕಾರಣಗಳಾಗಿ ಪರಿಣಮಿಸಿದುವು; ಅಗ್ರಜನು ಸಹಾಯಕನಾದನು. ಸನ್ಮಿತ್ರರ ಸಹವಾಸಬಲದಿಂದ ನಾನು ಪುತ್ರಕರ್ತವ್ಯದಲ್ಲಿ ಕೃತಕೃತ್ಯನೆನಿಸಿದೆನು. ಆದರೂ ನಮ್ಮ ಇತರ ಬಾಲ ಸೋದರರು ಕೂಡ ತಮ್ಮ ನೈಜಕರ್ತವ್ಯದಲ್ಲಿ ಕೃತಾರ್ಥರಾಗುವಂತೆಯೂ, ದೇಶಸೇವೆಯಲ್ಲಿ

ನನ್ನನ್ನು ಧನ್ಯನೆನ್ನಿಸುವಂತೆಯೂ ಅನುಗ್ರಹಿಸಬೇಕು. ನಮ್ಮ ದೇಶಬಾಂಧವರು ಅಸೂಯೆ, ಆಲಸ್ಯ, ಉದಾಸೀನ, ಮೋಸ, ವಿಷಯಲಾಲಸೆಗಳೇ ಮೊದಲಾದ ದುಷ್ಟರೋಗಗಳ ಬಾಧೆಗೆ ಒಳಗಾಗದೆ, ಸತ್ಯಾಚಾರನಿಷ್ಠತೆಯಿಂದ ಆರೋಗ್ಯದೃಢಗಾತ್ರರಾಗಿ ಚಿರಸುಖಿಗಳಾಗಿರುವಂತೆ ಅನುಗ್ರಹಿಸಬೇಕೆಂದೂ ಪ್ರಾರ್ಥಿಸುವೆನು.

ವಿದ್ಯಾ:— ಪರಮಾತ್ಮನೇ ಅನುಗ್ರಹಿಸುವನು. ಆತನೇ ಸಕಲ ಚರಾಚರಾತ್ಮಕ ಪ್ರಪಂಚಕ್ಕೂ ಸ್ಥಿತಿಕರ್ತನಾದ ಜಗತ್ಪಿತನಾಗಿರುವನು. ಆತನ ಕೃಪಾಕಟಾಕ್ಷವೇ ಜಗನ್ಮಾತೆಯಾಗಿ ನಮ್ಮೆಲ್ಲರನ್ನೂ ನಿರಂತರವೂ ಸಲಹುತ್ತಿರುವುದು. ಆತನ ಗುಣಕಥನವೇ ನಮಗೆ ಸಮಸ್ತ ಕಲ್ಯಾಣಗಳಿಗೂ ಆಧಾರವು. ಎಲ್ಲಿ ಆ ಪರಮಾತ್ಮನನ್ನು ಕುರಿತು ಮಂಗಳವನ್ನು ಪಾಡುವ.

( ಎಲ್ಲರೂ ಬದ್ಧಾಂಜಲಿಪುಟರಾಗಿ ನಿಂತು ಮೇಲೆ ನೋಡಿ ಮಂಗಳವನ್ನು ಹಾಡುವರು )

---

## ಮಂಗಳ.

ರಾಗ—

ಜಯಮಂಗಳಂ ಶ್ರೀ ರಘುಕುಲಾಬ್ಧಿಚಂದ್ರ-ಭವತುಕೇ ಶುಭ ||ಪ||

ಕ್ಷೀರಶರಧಿಶಯನ | ಸುರುಕುಲಶರಣ | ಕರಿವರಗಮನ || ಮುರಹರ ||
ಸುರವೈರಿಭಯಂಕರಮಾವರ (ಶ್ರೀ ಸರಸಿಜಾಕ್ಷ-ಸಾಧುಪಕ್ಷ-ದುರುಳಶಿಕ್ಷ-
ಶ್ರೀಕಟಾಕ್ಷ || ಜಯ-ಮಂಗಳಂ ಶ್ರೀ ||

ಭಾರ್ಗವ ಮದಹರಣ-ಭವನುತ ಚರಣ | ಭುವಿಜಾರಮಣ | ಭಯಹರ ||
ಪವನಾತ್ಮಜ ಸಂಸೇವಿತಪದ (ಶ್ರೀ) ರವಿಕುಲಾನ್ವಯಲಲಾಮ-ಕವಿಜನಾಳಿ
ಪೂರ್ಣಕಾಮ || ಶುಭಮಂಗಳಂ ಶ್ರೀ ||

ದಾಸಹೃದಯನಿವಾಸ ದಶಶಿರಧ್ವಂಸ-ಶಶಿನಿಭಹಾಸ | ಶುಭಕರ ||
ಪಶುಪತಿಕಾರ್ಮುಕ ಭಂಜನ (ಶ್ರೀ) ವಸುಮತೀಶ-ಕುಲವಿಭೂಷ-ಶೇಷಶೈಲ—
ಶಿಖರವಾಸ || ಜಯಮಂಗಳಂ ಶ್ರೀ ||

(ಎಲ್ಲರೂ ಪುಷ್ಪಾಂಜಲಿಯನ್ನರ್ಪಿಸಿ ಕರತಾಡನಮಾಡುವರು.)

ಇಂತು ಪಂಚಮಾಂಕಕ್ಕೆ ಮಂಗಳಂ.

ಸೂತ್ರಧಾರಃ—(ಸಭೆಯನ್ನು ವಂದಿಸಿ) ಮಹನೀಯರಿಗೆ ವಂದನೆ. ತಾವೆಲ್ಲರೂ ಸದಯಾಂತಃಕರಣವಾಗಿ ಸಾಕ್ಷಾತ್ಕರಿಸಿ, ಶಕ್ತ್ಯುಚಿತವಾಗಿ ಮಾಡಿದ ನಮ್ಮ ಈ ವಿಧವಾದ ಸತ್ಕಾರದಿಂದ ಸುಪ್ರೀತರಾಗಿ ನಮ್ಮೆಲ್ಲರನ್ನೂ ಅನುಗ್ರಹಿಸಿದುದಕ್ಕಾಗಿ ಧನ್ಯವಾದಗಳು. ಮತ್ತು ಇಂದಿನ ಈ ನವೀನಕೃತಿಯಲ್ಲಿ ತೋರಿರಬಹುದಾದ ನ್ಯೂನಾತಿರಿಕ್ತಗಳನ್ನು ಸಹಜ ಕ್ಷಮೆಯಿಂದ ಮನ್ನಿಸಿ, ಗುಣಸಂಗ್ರಹ ಮಾಡಿದುದಕ್ಕಾಗಿ ನಿಮೆಲ್ಲರಿಗೂ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳು. ಭಗವಂತನು ನಮ್ಮ, ನಿಮ್ಮಲ್ಲಿ ಇಂದಿನ ಸೌಜನ್ಯಭಾವವೇ ದೃಢಮೂಲವಾಗಿ ಬೆಳೆದು, ದೇಶಕ್ಕೂ ದೇಶಪಾಲಕರಿಗೂ ಹಿತವನ್ನುಂಟುಮಾಡುವಂತೆ ಅನುಗ್ರಹಿಸಬೇಕೆಂಬುದೇ ನಮ್ಮ ನಿರಂತರದ ಸಂಪ್ರಾರ್ಥನೆಗಳು. (ನಿಷ್ಕ್ರಮಿಸುವನು.)

ಇಲ್ಲಿಗೆ ಇಷ್ಟಕ್ಕೆ ರಮಾನಂದ ರೂಪಕವು.

ಕೃಷ್ಣಾರ್ಪಣಂ.

OSMANIA UNIVERSITY
COLLEGE LIBRARY.

ಬೆಂಗಳೂರು.

8—11—1916.

ಸತಿಹಿತೈಷಿಣಿ ಸಂಪಾದಯಿತ್ರಿಯವರಾದ ತಿರುಮಲಂಮನವರ ಸಮುಕ್ಷಮುಕ್ಕೆ—

ನೀವು ಅಂತಃಕರಣಪೂರ್ವಕವಾಗಿ ಎಪ್ರಿಲ್ ತಿಂಗಳಲ್ಲಿ ಕಳುಹಿಸಿಕೊಟ್ಟ ಮಾತೃನಂದಿನಿ, ರಮಾನಂದ ಎಂಬ ಪುಸ್ತಕಗಳೂ ಮತ್ತು ಕಳೆದ ತಿಂಗಳು ೧೭ನೇ ತಾರೀಖಿನಲ್ಲಿ ರವಾನಿಸಿದ ವಿಕ್ರಮ, ಚಂದ್ರವದನೆ ಮುಂತಾದ ಪುಸ್ತಕಗಳೂ ಸುರಕ್ಷಿತವಾಗಿಯೂ, ಸಕಾಲದಲ್ಲಿಯೂ ತಲುಪಿದವು.

ಮಾತೃನಂದಿನಿ ರಮಾನಂದ ಎಂಬ ಪುಸ್ತಕಗಳನ್ನು ಬಲು ಸ್ವಾರಸ್ಯದಿಂದ ಓದಿದೆನು. ಅವುಗಳಲ್ಲಿ ನಿದರ್ಶಿಸಲ್ಪಟ್ಟಿರುವ ಸಾರ್ವಜನಿಕವೂ, ಪ್ರತಿದಿನೋಪಯುಕ್ತವೂ ಆದಸದಾಚರಣೆಗಳ ಸವಿಸ್ತರಣೆಯು ಬಹಳ ಮನೋಹರವಾಗಿದೆ. ಈಗ ಬಂದಿರುವ ಪುಸ್ತಕಗಳನ್ನೂ ಕೈಲಾದಮಟ್ಟಿಗೆ ಜಾಗ್ರತೆಯಲ್ಲಿಯೇ ಓದಿ ಪುನಃ ನಿಮಗೆ ಬರೆಯುತ್ತೇನೆ.

ಈಗ ತಾನೇ ಜನ್ಮವೆತ್ತಿರುವ ಕರ್ಣಾಟಕ ನಂದಿನಿ (ಮಾಸಪತ್ರಿಕೆ)ಯು ಕನ್ನಡಿಗರೆಲ್ಲರಿಂದಲೂ ಯಥೋಚಿತವಾಗಿ ಪುರಸ್ಕರಿಸಲ್ಪಟ್ಟು ಮಾತೃಭಾಷೆಯ ಉಪಚಯಕ್ಕೆ ಕಾರಣವಾಗುವದೆಂದು ಕೋರುತ್ತೇನೆ.

ಇತಿ.

ಜಿ. ಎಸ್. ಚಕ್ರವರ್ತಿ.